PSG

# ಸಮಾಜ ವಿಜ್ಞಾನ

## SSLC

## Exam ಸ್ಕೋರರ್ – PART 1

**ಪರಿಷ್ಕೃತ ಆವೃತ್ತಿ 2019-20**




**ರಚನೆ – ಶ್ರೀ ಶರಣಬಸಪ್ಪ ಗುಡೂರು ಸಶಿ**

**ಸರಕಾರಿ ಪ್ರೌಢ ಶಾಲೆ ಗುಂಡ**

**ತಾ : ಸಿಂಧನೂರು ಜಿ : ರಾಯಚೂರು**

**೯೪೮೧೫೪೯೬೯೫**

## ಪರಿವಿಡಿ


| ಕ್ರ ಸಂ | ಅಧ್ಯಾಯದ ಹೆಸರು | ನಿಗದಿಪಡಿಸಿದ ಅಂಕಗಳು | ಪುಟ ಸಂಖ್ಯೆ |
|---|---|---|---|
| | **ಇತಿಹಾಸ** | | |
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 2 | 3 |
| 2 | ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | 2 | 5 |
| 3 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 3* | 7 |
| 4 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರತಿರೋಧಗಳು | 2* | 10 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | 2 | 13 |
| 6 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 3 | 16 |
| | **ರಾಜ್ಯಶಾಸ್ತ್ರ** | | |
| 1 | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | 2* | 18 |
| 2 | ಭಾರತದ ವಿದೇಶಾಂಗ ನೀತಿ | 2 | 20 |
| 3 | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 2 | 22 |
| | **ಸಮಾಜಶಾಸ್ತ್ರ** | | |
| 1 | ಸಾಮಾಜಿಕ ಸ್ತರ ವಿನ್ಯಾಸ | 2* | 23 |
| 2 | ದುಡಿಮೆ | 2* | 24 |


## ಪರಿವಿಡಿ


| ಕ್ರ ಸಂ. | ಅಧ್ಯಾಯದ ಹೆಸರು | ನಿಗದಿಪಡಿಸಿದ ಅಂಕಗಳು | ಪುಟ ಸಂಖ್ಯೆ |
|---|---|---|---|
| | **ಭೂಗೋಳ ಶಾಸ್ತ್ರ** | | |
| 1 | ಭಾರತದ ಸ್ಥಾನ ಮತ್ತು ವಿಸ್ತೀರ್ಣ | 1 | 25 |
| 2 | ಭಾರತದ ಮೇಲ್ಮೈ ಲಕ್ಷಣಗಳು | 2 | 25 |
| 3 | ಭಾರತದ ವಾಯುಗುಣ | 2 | 27 |
| 4 | ಭಾರತದ ಮಣ್ಣುಗಳು | 1 | 28 |
| 5 | ಭಾರತದ ಅರಣ್ಯ ಸಂಪತ್ತು | 2 | 29 |
| 6 | ಭಾರತದ ಜಲಸಂಪನ್ಮೂಲಗಳು | 2 | 31 |
| 7 | ಭಾರತದ ಭೂ ಸಂಪನ್ಮೂಲಗಳು | 2 | 33 |
| | **ಅರ್ಥಶಾಸ್ತ್ರ** | | |
| 1 | ಅಭಿವೃದ್ಧಿ | 2 | 35 |
| 2 | ಗ್ರಾಮೀಣ ಅಭಿವೃದ್ಧಿ | 1 | 36 |
| | **ವ್ಯವಹಾರ ಅಧ್ಯಯನ** | | |
| 1 | ಬ್ಯಾಂಕು ವ್ಯವಹಾರಗಳು | 2* | 37 |
| 2 | ಉದ್ಯಮಗಾರಿಕೆ | 2* | 39 |


* ಚಿನ್ಹೆ ಇರುವ ಅಧ್ಯಾಯಗಳಲ್ಲಿ 3 ಅಂಕದ ಆಯ್ಕೆಯ (Choice) ಪ್ರಶ್ನೆಗಳು ಬರುವ ಸಂಭವವಿದೆ.

# ಚಿನ್ಹೆ ಇರುವ ಅಧ್ಯಾಯಗಳಲ್ಲಿ 4 ಅಂಕದ ಪ್ರಶ್ನೆಗಳು ಬರುವ ಸಂಭವವಿದೆ.

PSC

# ಇತಿಹಾಸ

# ಅಧ್ಯಾಯ 1 ಭಾರತಕ್ಕೆ ಯುರೋಪಿಯನ್ನರ ಆಗಮನ

## ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಮಧ್ಯಯುಗದಲ್ಲಿ ಯುರೋಪಿನ ವ್ಯಾಪಾರದ ಹೆಬ್ಬಾಗಿಲು ಎಂದು ಕರೆಯುತ್ತಿದ್ದ ನಗರ – **ಕಾನ್‌ಸ್ಟಾಂಟಿನೋಪಲ್ ನಗರ.**

2. ಮಧ್ಯಯುಗದಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ಯುರೋಪಿನ ಹೆಬ್ಬಾಗಿಲು ಎಂದು ಕರೆಯಲು ಕಾರಣ – **ಅಂತರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗಿದ್ದರಿಂದ.**

3. ಮಧ್ಯಯುಗದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದ್ದವರು – **ಅರಬ್ಬರು.**

4. ಮಧ್ಯಯುಗದಲ್ಲಿ ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಇವರು ಏಕಸ್ವಾಮ್ಯ ಸಾಧಿಸಿದ್ದರು. – **ಇಟಲಿಯ ವರ್ತಕರು.**

5. ಏಷ್ಯಾದ ಸರಕುಗಳು ಯೂರೋಪಿನ ಈ ದೇಶದ ವ್ಯಾಪಾರಿಗಳಿಗೆ ಒಳ್ಳೆಯ ಲಾಭವನ್ನು ತಂದು ಕೊಡುತ್ತಿದ್ದವು. – **ಇಟಲಿಯ ವರ್ತಕರು.**

5. ಯುರೋಪಿನ ದೇಶಗಳ ರಾಜರು ಹೊಸ ಜಲಮಾರ್ಗ ಕಂಡುಹಿಡಿಯಲು ನಾವಿಕರಿಗೆ ಪ್ರೋತ್ಸಾಹಿಸಲು ಕಾರಣ – **ಇಟಲಿಯ ಏಕಸ್ವಾಮ್ಯವನ್ನು ಮುರಿಯಲು**

6. ಭಾರತಕ್ಕೆ 1498ರಲ್ಲಿ ಹೊಸ ಜಲಮಾರ್ಗವನ್ನು ಕಂಡುಹಿಡಿದವರು. – **ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮ.**

7. ಭಾರತದೊಂದಿಗೆ ಮರುವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಮೊದಲಿಗರು – **ಪೋರ್ಚುಗೀಸರು.**

8. ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು – **ಪೋರ್ಚುಗೀಸರು.**

9. ವಾಸ್ಕೋಡಿಗಾಮನ ನಂತರ ಪೋರ್ಚುಗೀಸರ ವೈಸರಾಯ್ ಆಗಿ ಭಾರತಕ್ಕೆ ಬಂದವನು. – **ಫ್ರಾನ್ಸಿಸ್ಕೊ ಡಿ ಅಲ್ಮೇಡ್.**

10. ಇವನು ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ. – **ಅಲ್ಫೋನ್ಸೊ ಅಲ್ಬುಕರ್ಕ.**

11. ಬಿಜಾಪುರದ ಸುಲ್ತಾನನಿಂದ **<u>ಗೋವಾ</u>**ವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದನು. – **ಅಲ್ಫೋನ್ಸೊ ಅಲ್ಬುಕರ್ಕ. (1510ರಲ್ಲಿ)**

12. ಡಚ್‌ರು ಈ ದೇಶದವರು – **ಹಾಲೆಂಡ್ ಅಥವಾ ನೆದರ್‌ಲ್ಯಾಂಡ್.**

13. ಭಾರತದಲ್ಲಿ ಪೋರ್ಚುಗೀಸರ ಏಕಸ್ವಾಮ್ಯವನ್ನು ಮುರಿದವರು – **ಡಚ್ಚರು.**

14. ಡಚ್ಚರು ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ – **1602**

15. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರವನ್ನು ಆರಂಭಿಸಿದ ವರ್ಷ – **1613.**

16. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ **ಸೂರತ್**ನಲ್ಲಿ ಮೊದಲ ಫ್ಯಾಕ್ಟರಿ ಅಥವಾ ದಾಸ್ತಾನು ಮಳಿಗೆಯನ್ನು ತೆರೆಯಲು ಅನುಮತಿ ನೀಡಿದ ಮೊಘಲ್ ಸಾಮ್ರಾಟ – **ಜಹಂಗೀರ,**

17. ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದವನು – **ಸರ್, ಥಾಮಸ್ ರೋ (1617ರಲ್ಲಿ)**

19. ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡಗಳ ಬಾಡಿಗೆಗೆ ವಹಿಸಿಕೊಟ್ಟ ಇಂಗ್ಲಂಡಿನ ರಾಜಕುಮಾರ – **ಎರಡನೇ ಚಾರ್ಲ್ಸ್, ( 1668ರಲ್ಲಿ )**

20. ಭಾರತದಲ್ಲಿನ ಇಂಗ್ಲಿಷರ ರಾಜಧಾನಿ – ಕಲ್ಕತ್ತಾ.

20. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಸ್ಥಾಪನೆಯಾದ ವರ್ಷ – **1664.**

22. ಫ್ರೆಂಚರ ಪ್ರಥಮ ದಾಸ್ತಾನು ಮಳಿಗೆ – ಸೂರತ್ (1668ರಲ್ಲಿ)

21. ಫ್ರೆಂಚರ ರಾಜಧಾನಿ ಕೇಂದ್ರ – **ಪಾಂಡಿಚೇರಿ ಅಥವಾ ಪುದುಚೇರಿ.**

22. ಫ್ರೆಂಚರ ಮಹತ್ವಾಕಾಂಕ್ಷಿ ಗವರ್ನರ್ – **ಡೂಪ್ಲೆ.**

23. ಅಲಿವರ್ದಿ ಖಾನನ ನಂತರ ಬಂಗಾಳದ ನವಾಬರಾದವರು – **ಸಿರಾಜ್ ಉದ್ ದೌಲ್.**

24. ಸಿರಾಜ–ಉದ್–ದೌಲನ ನಂತರ ಬಂಗಾಳದ ನವಾಬನಾದವನು – **ಮೀರ್ ಜಾಫರ್.**

25. ಮೀರ್ ಜಾಫರ್‌ನ ನಂತರ ಬಂಗಾಳದ ನವಾಬನಾದವನು – **ಮೀರ್ ಕಾಸಿಂ.**

26. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ 'ದಿವಾನಿ' ಹಕ್ಕನ್ನು ನೀಡಿದವರು. – **ಮೊಗಲ್ ದೊರೆ 2ನೇ ಷಾ ಆಲಂ.**

27. ಬಂಗಾಳದಲ್ಲಿ 'ದ್ವಿ ಪ್ರಭುತ್ವ'ವನ್ನು ಜಾರಿಗೆ ತಂದವನು – **ರಾಬರ್ಟ ಕ್ಲೈವ್ (1765)**

28. ಪೂರ್ವ ರೋಮನ್ (ಬೈಜಾಂಟಿನ್) ಸಾಮ್ರಾಜ್ಯದ ರಾಜಧಾನಿ – **ಕಾನ್‌ಸ್ಟಾಂಟಿನೋಪಲ್.**

29. ಮಧ್ಯಯುಗದಲ್ಲಿ ಏಷ್ಯಾ ಮತ್ತು ಯುರೋಪಗಳ ನಡುವೆ ವ್ಯಾಪಾರವು ಈ ನಗರದ ಮೂಲಕ ನಡೆಯುತ್ತಿತ್ತು. – **ಕಾನ್‌ಸ್ಟಾಂಟಿನೋಪಲ್.**

30. ದಸ್ತಕ ಎಂದರೆ – **ಮುಕ್ತ ವ್ಯಾಪಾರ ಮಾಡಲು ಪರವಾನಗಿ ನೀಡುವುದು.**

31. ಫ್ರಾನ್ಸಿಸ್ಕೋ ಡಿ ಅಲ್ಮೇಡ್ ನೀಲಿ ನೀರಿನ ನೀತಿ ಜಾರಿಗೆ ತಂದ ಉದೇಶ – **ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾ ಶಕ್ತಿಯನ್ನು ಬಲಪಡಿಸಲು.**

32. ಪೋರ್ಚುಗೀಸರ ಪ್ರಧಾನ ವ್ಯಾಪಾರ ಕೇಂದ್ರ – **ಗೋವಾ.**

33. ಮದ್ರಾಸ್‌ನ್ನು ವಶಪಡಿಸಿಕೊಂಡ ಫ್ರೆಂಚ್ ಸೇನಾ ಮುಖ್ಯಸ್ಥ – **ಲಾಬೋರ್ಡಿನಾ.**

34. ಮೊದಲ ಕಾರ್ನಾಟಿಕ್ ಯುದ್ಧ ಕೊನೆಗೊಂಡ ಒಪ್ಪಂದ – **ಏಕ್ಸ್–ಲಾ–ಚಾಪಲ್ ಒಪ್ಪಂದ.**

35. ಎರಡನೇ ಕಾರ್ನಾಟಿಕ್ ಯುದ್ಧ ಕೊನೆಗೊಂಡ ಒಪ್ಪಂದ – **ಪಾಂಡಿಚೇರಿ ಒಪ್ಪಂದ.**

36. ಮೂರನೇ ಕಾರ್ನಾಟಿಕ್ ಯುದ್ಧ ಕೊನೆಗೊಂಡ ಒಪ್ಪಂದ. – **ಪ್ಯಾರೀಸ್ ಒಪ್ಪಂದ.**

37. ಮೂರನೇ ಕಾರ್ನಾಟಿಕ್ ಯುದ್ಧದ ಸಮಯದಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಿದ ಫ್ರೆಂಚ್ ಸೇನಾನಾಯಕ – **ಕೌಂಟ್ ಡಿ ಲಾಲಿ**

38. 3ನೇ ಕಾರ್ನಾಟಿಕ್ ಯುದ್ಧದಲ್ಲಿ ಫ್ರೆಂಚರನ್ನು ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ – **ಸರ್ ಐರ್‌ಕೂಟ.**

39. ಬ್ರಿಟಿಷರು ಪ್ಲಾಸಿ ಮತ್ತು ಬಕ್ಸಾರ ಕದನಗಳ ಮೂಲಕ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದ ಪ್ರಾಂತ್ಯ – **ಬಂಗಾಳ**

## ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಯುರೋಪಿನಲ್ಲಿ ಭಾರತದ ಯಾವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇತ್ತು?**

ಉತ್ತರ : ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

**2. ಕಾನ್‌ಸ್ಟಾಂಟಿನೋಪಲ್ ನಗರವನ್ನು ಯಾವಾಗ, ಯಾರು ವಶಪಡಿಸಿಕೊಂಡರು?**

ಉತ್ತರ : 1453ರಲ್ಲಿ ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.

**3. ಕಾನ್‌ಸ್ಟಾಂಟಿನೋಪಲ್ ಪತನದ ನಂತರ ವರ್ತಕರಿಗೆ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ ಏಕೆ?**

ಉತ್ತರ : ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸಿದರು. ಇದರಿಂದಾಗಿ ವರ್ತಕರಿಗೆ ಕಾನ್‌ಸ್ಟಾಂಟಿನೋಪಲ್ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.

**4. ವಾಸ್ಕೋಡಿಗಾಮಾನು ಭಾರತಕ್ಕೆ ಹೊಸಜಲಮಾರ್ಗ ಕಂಡು ಹಿಡಿಯುವಲ್ಲಿ ಹೇಗೆ ಯಶಸ್ವಿಯಾದನು?**

ಉತ್ತರ : ಯುರೋಪಿನ ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೋಡಿಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪದ 'ಕಾಪ್ಪಡ್' ಎಂಬಲ್ಲಿಗೆ ಬಂದು ತಲುಪಿದನು. ಆ ಮೂಲಕ ಹೊಸ ಜಲಮಾರ್ಗ ಕಂಡುಹಿಡಿಯುವಲ್ಲಿ ಯಶಸ್ವಿಯಾದನು.

**5. ನೀಲಿ ನೀರಿನ ನೀತಿ ಎಂದರೇನು? ಇದನ್ನು ಜಾರಿಗೆ ತಂದವರು ಯಾರು?**

ಉತ್ತರ : ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಬಡಿಸುವ ನೀತಿಯೇ "ನೀಲಿ ನೀರಿನ ನೀತಿ"ಯಾಗಿದೆ. ಇದನ್ನು ಫ್ರಾನ್ಸಿಸ್ಕೋ ಡಿ ಅಲ್ಮೇಡ್ ಜಾರಿಗೆ ತಂದನು.

**6. ವ್ಯಾಪಾರದ ಉದ್ದೇಶದಿಂದ ಭಾರತಕ್ಕೆ ಬಂದ ಯರೋಪಿಯನ್ ಕಂಪನಿಗಳು ಯಾವವು?**

ಉತ್ತರ : ಪೋರ್ಚುಗೀಸ್, ಡಚ್ಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು.

**7. ಡಚ್‌ರು ಪೂರ್ವ ದೇಶಗಳೊಂದಿಗೆ ವ್ಯಾಪಾರವನ್ನು ಹೇಗೆ ಆರಂಭಿಸಿದರು?**

ಉತ್ತರ : ಡಚ್ಚರು 1602ರಲ್ಲಿ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿಕೊಂಡು ಭಾರತ & ಜಾವಾ, ಸುಮಾತ್ರಾ, ಇಂಡೋನೇಷಿಯಾ ಮೊದಲಾದ ಸಾಂಬಾರು ಪ್ರಸಿದ್ದ ದ್ವೀಪಗಳಲ್ಲಿ ವ್ಯಾಪಾರವನ್ನು ಆರಂಭಿಸಿದರು.

**8. ಡಚ್ಚರು ಭಾರತದ ವ್ಯಾಪಾರವನ್ನು ಬಿಟ್ಟು ಕೇವಲ ಸಾಂಭಾರು ದ್ವೀಪಗಳಿಗೆ ಸೀಮಿತವಾಗಲು ಕಾರಣವೇನು?**

ಉತ್ತರ : ಭಾರತಕ್ಕೆ ಬಂದ ಇಂಗ್ಲಿಷರು ಮತ್ತು ಫ್ರೆಂಚರ ಪೈಪೋಟಿಯನ್ನು ಹೆದರಿಸಲಾಗದೆ ಡಚ್ಚರು ಸಾಂಬಾರು ದ್ವೀಪಗಳಿಗೆ ಮಾತ್ರ ಸೀಮಿತರಾದರು.

**9. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವ ದೇಶಗಳೊಂದಿಗೆ ವ್ಯಾಪಾರ ಮಾಡಲು ಯಾರು, ಯಾವಾಗ ಅನುಮತಿ ನೀಡಿದರು?**

ಉತ್ತರ : ಇಂಗ್ಲೆಂಡಿನ ಎಲಿಜಿಬೆತ್ ರಾಣಿಯು 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪೂರ್ವ ದೇಶಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

**10. ಬ್ರಿಟಿಷರು ಸೆಂಟ್ ಜಾರ್ಜ ಫೋರ್ಟ ಕೋಟೆಯನ್ನು ಹೇಗೆ ಕಟ್ಟಿದರು?**

ಉತ್ತರ : ಇಂಗ್ಲಿಷರು 1639ರಲ್ಲಿ ಚಂದ್ರಗಿರಿಯ ರಾಜನಿಂದ ಮದ್ರಾಸನಲ್ಲಿ ಭೂಮಿಯನ್ನು ಪಡೆದು ಸೆಂಟ್ ಜಾರ್ಜ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು.

**11. ಬ್ರಿಟಿಷರು ಫೋರ್ಟ ವಿಲಿಯಂ ಕೋಟೆಯನ್ನು ಹೇಗೆ ಕಟ್ಟಿದರು?**

ಉತ್ತರ : ಬ್ರಿಟಿಷರು 1690ರ ದಶಕದಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ಗೋವಿಂದಪುರ ಎಂಬ ಮೂರು ಹಳ್ಳಿಗಳನ್ನು ಖರೀದಿಸಿ ಫೋರ್ಟ ವಿಲಿಯಂ ಕೋಟೆಯನ್ನು ಕಟ್ಟಿದರು.

**12. ಇಂಗ್ಲಿಷರ ಪ್ರಮುಖ ಪ್ರೆಸಿಡೆನ್ಸಿ ಕೇಂದ್ರಗಳು ಯಾವುವು?**

ಉತ್ತರ : ಮದ್ರಾಸ್, ಬಾಂಬೆ ಮತ್ತು ಕಲ್ಕತ್ತಾಗಳು ಇಂಗ್ಲಿಷರ ಪ್ರಮುಖ ಪ್ರೆಸಿಡೆನ್ಸಿ ಕೇಂದ್ರಗಳಾಗಿವೆ.

**13. ಫೆಂಚರು ಪಾಂಡಿಚೇರಿಯನ್ನು ಹೇಗೆ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು?**

ಉತ್ತರ : ಫ್ರೆಂಚರು 1674ರಲ್ಲಿ ವಾಲಿಕೊಂಡಪುಂನ ಸ್ಥಳೀಯ ಮುಸ್ಲಿಂ ಅಧಿಕಾರಿಯಿಂದ ಒಂದು ಹಳ್ಳಿಯನ್ನು ಪಡೆದರು. ಕ್ರಮೇಣ ಇದನ್ನೇ ದೊಡ್ಡ ವ್ಯಾಪಾರ ಕೇಂದ್ರವಾಗಿ ಪಾರ್ಪಡಿಸಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಡರು.

**14. ಕರ್ನಾಟಿಕ್ ಯುದ್ಧಗಳಿಗೆ ಕಾರಣವೇನು?**

ಉತ್ತರ : ಫ್ರೆಂಚ್ ಗವರ್ನರ್ ಡುಪ್ಲೆಯು ದಕ್ಷಿಣ ಭಾರತದಲ್ಲಿ ಫ್ರೆಂಚರ ಅಧಿಪತ್ಯವನ್ನು ಸ್ಥಾಪಿಸಲು ಹವಣಿಸಿ ಇಂಗ್ಲಿಷರೊಡನೆ ಸಂಘರ್ಷಕ್ಕಿಳಿದನು. ಇದು ಕರ್ನಾಟಿಕ್ ಯುದ್ಧಗಳಿಗೆ ಕಾರಣವಾಯಿತು.

**15. ಬಂಗಾಳದಲ್ಲಿ ಬ್ರಿಟಿಷರ ವ್ಯಾಪಾರ ಹೆಚ್ಚು ಲಾಭದಾಯಕವಾಗಲು ಕಾರಣವೇನು?**

ಉತ್ತರ : 1717ರಲ್ಲಿ ಮೊಗಲ್ ದೊರೆ ಫಾರೂಕ್ ಶಿಯಾರನು ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಕಂಪನಿಗೆ ನೀಡಿದ 'ದಸ್ತಕ'ಗಳಿಂದ ಬ್ರಿಟಿಷರು ಲಾಭಗಳಿಸಲು ಕಾರಣವಾಗಿತ್ತು.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಮಧ್ಯಕಾಲದಲ್ಲಿ ಯುರೋಪ್, ಭಾರತ ಮತ್ತು ಇತರ ಏಷ್ಯಾ ದೇಶಗಳ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು? ಅಥವಾ**

**ಕಾನ್‌ಸ್ಟಾಂಟಿನೋಪಲ್ ನಗರವು ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು. ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ**

**'ಕಾನ್‌ಸ್ಟಾಂಟಿನೋಪಲ್ ನಗರವು ಮಧ್ಯಯುಗದ ಅಂತರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗಿತ್ತು'. ಸಮರ್ಥಿಸಿ.**

**ಉತ್ತರ : ಮಧ್ಯಕಾಲದಲ್ಲಿ ಭಾರತ ಮತ್ತು ಯುರೋಪಗಳ ನಡುವೆ ವ್ಯಾಪಾರ ಸಂಬಂಧ –**

- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು.
- ಇಟಲಿಯ ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಿಗೆ ಮಾರುತ್ತಿದ್ದರು.
- ಕಾನ್‌ಸ್ಟಾಂಟಿನೋಪಲ್ ಅಂತರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.
- ಏಷ್ಯಾದ ಸರಕುಗಳು ಇಟಲಿಯ ವರ್ತಕರಿಗೆ ಒಳ್ಳೆಯ ಲಾಭವನ್ನು ತಂದು ಕೊಡುತ್ತಿದ್ದವು.

**2. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ ಅಥವಾ**

**"ಕಾನ್‌ಸ್ಟಾಂಟಿನೋಪಲ್ ನಗರದ ಪತನವು ಹೊಸ ಸಮುದ್ರ ಮಾರ್ಗಗಳ ಅನ್ವೇಷಣೆಗೆ ದಾರಿ ಮಾಡಿಕೊಟ್ಟಿತು" ಈ ಹೇಳಿಕೆಯನ್ನು ಸಮರ್ಥಿಸಿ.**

**ಉತ್ತರ : ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳು –**

- 1453ರಲ್ಲಿ ಅಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು.
- ಈ ಮಾರ್ಗದ ವ್ಯಾಪಾರದ ಮೇಲೆ ಟರ್ಕರು ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು.
- ವರ್ತಕರಿಗೆ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.
- ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರಿಗೆ ಪ್ರೋತ್ಸಾಹಿಸಲಾರಂಭಿಸಿದರು.
- ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪಕ) ಸಿಡಿಮದ್ದು ಮೊದಲಾದವುಗಳು ನಾವಿಕರ ನೆರವಿಗೆ ಬಂದವು.

**3. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ" ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ ವೈಜ್ಞಾನಿಕ ಆವಿಷ್ಕಾರಗಳು ಹೊಸ ಸಮುದ್ರ ಮಾರ್ಗಗಳ ಅನ್ವೇಷಣೆಗೆ ಸಹಕಾರಿಯಾದವು ಹೇಗೆ?**

ಉತ್ತರ : ಯುರೋಪಿನಲ್ಲಿ ಅನೇಕ ವೈಜ್ಞಾನಿಕ ಸಂಶೋಧನೆಗಳು ಹೊಸ ಸಮುದ್ರಮಾರ್ಗಗಳ ಆವಿಷ್ಕಾರಕ್ಕೆ ಕಾರಣವಾದವು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ

- ದಿಕ್ಸೂಚಿ,
- ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪಕ)
- ಸಿಡಿಮದ್ದು,
- ನೌಕಾ ಉಪಕರಣಗಳು,
- ಭೂಪಟ ಇತ್ಯಾದಿಗಳು

**4. ಅಲ್ಫಾನ್ಸೋ ಅಲ್ಬುಕರ್ಕ ಭಾರತದಲ್ಲಿ ಪೋರ್ಚಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ ಏಕೆ?**

ಉತ್ತರ : ಅಲ್ಫಾನ್ಸೋ ಅಲ್ಬುಕರ್ಕ ಭಾರತದಲ್ಲಿ ಪೋರ್ಚಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕನೆಂದು ಪ್ರಸಿದ್ಧನಾಗಿದ್ದಾನೆ. ಏಕೆಂದರೆ

- ಇವನು ಸಾಶ 1510ರಲ್ಲಿ ಬಿಜಾಪುರ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡನು.
- ಗೋವಾವನ್ನು ಪೋರ್ಚಗೀಸರ ಆಡಳಿತ ಕೇಂದ್ರವನ್ನಾಗಿ ಪರಿವರ್ತಿಸಿದನು.
- ಪೋರ್ಚಗೀಸರು ಮುಂದೆ ಒಂದು ಶತಮಾನ ಕಾಲ ಭಾರತದ ವ್ಯಾಪಾರದ ಮೇಲೆ ಪ್ರಶ್ನಾತೀತ ಏಕಸ್ವಾಮ್ಯವನ್ನು ಸ್ಥಾಪಿಸಿದರು.

**5. ಮೊದಲ ಕರ್ನಾಟಿಕ ಯುದ್ಧ ನಡೆದ ಬಗೆಯನ್ನು ವಿವರಿಸಿ.**

**ಮೊದಲ ಕರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೊದಲ ಕರ್ನಾಟಿಕ ಯುದ್ಧ ನಡೆದ ಬಗೆ –**

- ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ಬ್ರಿಟಿಷರಿಂದ ಮದ್ರಾಸನ್ನು ವಶಪಡಿಸಿಕೊಂಡನು.
- ಬ್ರಿಟಿಷರು ಕರ್ನಾಟಿಕ್ ನವಾಬ ಅನ್ವರುದ್ದೀನ್‌ನಲ್ಲಿ ಮೊರೆ ಇಟ್ಟರು.
- ಫ್ರೆಂಚರಿಂದ ಅನ್ವರುದ್ದೀನ್ ಕಳುಹಿಸಿಕೊಟ್ಟ ಸೇನೆಯು ಸೋತಿತು.
- ಲಾಬೋರ್ಡಿನನು ಬ್ರಿಟಿಷರಿಂದ ಹಣಪಡೆದು ಮದ್ರಾಸನ್ನು ಬಿಟ್ಟುಕೊಟ್ಟು ಮಾರಿಷಸ್‌ಗೆ ಹೊರಟುಹೋದನು.
- ಕೊನೆಗೆ ಈ ಯುದ್ಧವು 'ಎಕ್ಸ್–ಲಾ–ಚಾಪಲ್ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

**6. ಎರಡನೇ ಕಾರ್ನಾಟಿಕ್ ಯದ್ಧ ನಡೆದ ಬಗೆಯನ್ನು ತಿಳಿಸಿ.**

**ಎರಡನೇ ಕರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಎರಡನೇ ಕಾರ್ನಾಟಿಕ್ ಯದ್ಧ ನಡೆದ ಬಗೆ –**

- ಫ್ರೆಂಚರು ಸಲಾಬತ್‌ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದರು.
- ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು.
- ರಾಬರ್ಟ್‌ಕ್ಲೈವನು ಆರ್ಕಾಟಿನ ಮೇಲೆ ದಾಳಿ ಮಾಡಿ ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು.
- ಈ ಯುದ್ಧದಲ್ಲಿ ಚಂದಾಸಾಹೇಬನನ್ನು ಹತ್ಯೆ ಮಾಡಿ ಅನ್ವರುದ್ದೀನನ ಮಗನಾದ ಮಹಮ್ಮದ್ ಅಲಿಯನ್ನು ನವಾಬನ್ನಾಗಿ ನೇಮಕ ಮಡಲಾಯಿತು.
- ಎರಡನೇ ಕರ್ನಾಟಿಕ್ ಯುದ್ಧವು 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

**7. ಮೂರನೇ ಕಾರ್ನಾಟಿಕ್ ಯದ್ಧ ನಡೆದ ಬಗೆಯನ್ನು ತಿಳಿಸಿ. ಅಥವಾ**

**ಮೂರನೇ ಕರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೂರನೇ ಕಾರ್ನಾಟಿಕ್ ಯದ್ಧ ನಡೆದ ಬಗೆ –**

- ಫ್ರೆಂಚರ 'ಕೌಂಟ್ ಡಿ ಲಾಲಿ'ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಿದನು.
- ಬ್ರಿಟಿಷ್ ಸೇನಾಧಿಕಾರಿ ಸರ್ ಐರ್‌ಕೂಟನು ಫ್ರೆಂಚರನ್ನು ಸೋಲಿಸಿದನಲ್ಲದೆ, ಬುಸ್ಸಿಯನ್ನು ಸೆರೆಹಿಡಿದನು.
- ಕೌಂಟ್ ಡಿ ಲಾಲಿಯು ತಪ್ಪಿಸಿಕೊಂಡು ಪಾಂಡಿಚೇರಿಯಲ್ಲಿ ತಲೆಮರೆಸಿಕೊಂಡನು.
- ಐರ್‌ಕೂಟನು ಪಾಂಡಿಚೇರಿಗೂ ಮುತ್ತಿಗೆ ಹಾಕಿದಾಗ ಲಾಲಿಯು 1761ರಲ್ಲಿ ಬೇಷರತ್ತಾಗಿ ಶರಣಾದನು.
- ಈ ಯುದ್ಧವು ಪ್ಯಾರಿಸ್ ಒಪ್ಪಂದದೊಂದಿಗೆ ಕೊನೆಗೊಂಡಿತು.

**8. ಭಾರತದಲ್ಲಿ ಕರ್ನಾಟಿಕ ಯುದ್ಧಗಳು ಯಾರ ಯಾರ ನಡುವೆ ನಡೆದವು? ಈ ಯುದ್ಧಗಳ ಪರಿಣಾಮವೇನು?**

**ಉತ್ತರ** : ಭಾರತದಲ್ಲಿ ಕರ್ನಾಟಿಕ್ ಯುದ್ಧಗಳು ಬ್ರಿಟಿಷರು ಮತ್ತು ಫ್ರೆಂಚರ ನಡುವೆ ನಡೆದವು.

**ಭಾರತದಲ್ಲಿ ನಡೆದ ಕರ್ನಾಟಿಕ್ ಯುದ್ಧಗಳ ಪರಿಣಾಮಗಳು –**

- ಫ್ರೆಂಚರು ಭಾರತದಲ್ಲಿ ತಮ್ಮ ಎಲ್ಲಾ ನೆಲೆಗಳನ್ನು ಕಳೆದುಕೊಂಡರು.
- 1773ರಲ್ಲಿ ನಡೆದ ಪ್ಯಾರಿಸ್ ಒಪ್ಪಂದದ ಪ್ರಕಾರ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.
- ಬ್ರಿಟಿಷರು ದಕ್ಷಿಣ ಭಾರತವನ್ನು ಗೆಲ್ಲುವ ಕಾರ್ಯದಲ್ಲಿ ಮಗ್ನರಾದರು.

**9. ಪ್ಲಾಸಿ ಕದನಕ್ಕೆ ಕಾರಣಗಳೇನು?**

**ಉತ್ತರ : ಪ್ಲಾಸಿ ಕದನಕ್ಕೆ ಕಾರಣಗಳು –**

- 'ದಸ್ತಕ'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಂಡರು.
- ನವಾಬನ ಅನುಮತಿಯನ್ನು ಪಡೆಯದೆ ಬ್ರಿಟಿಷರು ಕಲ್ಕತ್ತಾದ ಕೋಟೆಯನ್ನು ಬಲಪಡಿಸಿದರು.
- ಕಪ್ಪು ಕೋಣೆ ದುರಂತದಲ್ಲಿ ಬ್ರಿಟಿಷ್ ಸೈನಿಕರು ಸೆರೆಸಿಕ್ಕು ಸಾವನ್ನಪ್ಪಿದರು.
- ಇದರಿಂದ ರಾಬರ್ಟ್‌ಕ್ಲೈವ್ ಬಂಗಾಳದ ಮೇಲೆ ದಾಳಿ ಮಾಡಿದನು. ಇದೇ ಪ್ಲಾಸಿ ಕದನ.

**10. ಪ್ಲಾಸಿ ಕದನವು ಯಾವಾಗ, ಯಾರ ಯಾರ ನಡುವೆ ನಡೆಯಿತು? ಯುದ್ಧದ ಫಲಿತಾಂಶವೇನು?**

ಉತ್ತರ : ಬಂಗಾಳದ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757 ಜೂನ್ 23ರಂದು ಪ್ಲಾಸಿ ಕದನ ನಡೆಯಿತು. ಯುದ್ಧದಲ್ಲಿ ಸಿರಾಜ್–ಉದ್–ದೌಲನನ್ನು ಸರೆಹಿಡಿದು ಕೊಲ್ಲಲಾಯಿತು.

**11. ಕಪ್ಪು ಕೋಣೆ ದುರಂತ ಎಂದರೇನು? ಅಥವಾ**

**ಪ್ಲಾಸಿ ಕದನಕ್ಕೆ ಕಪ್ಪು ಕೋಣೆ ದುರಂತ ಹೇಗೆ ಕಾರಣವಾಯಿತು?**

ಉತ್ತರ :

- ಸಿರಾಜನು ಪೋರ್ಟ ವಿಲಿಯಂ ಕೋಟೆಯನ್ನು ಗೆದ್ದನು.
- ಆಕ್ರಮಣದಲ್ಲಿ ಸೆರೆ ಸಿಕ್ಕ 146 ಬ್ರಿಟಿಷರನ್ನು ಚಿಕ್ಕ ಕೋಣಡಿಯೊಂದರಲ್ಲಿ ಬಂಧಿಸಿಟ್ಟನು.
- ಅದರಲ್ಲಿ 123 ಮಂದಿ ಅಸುನೀಗಿದರು.
- ಇದನ್ನು ಕಪ್ಪು ಕೋಣೆಯ ದುರಂತ ಎಂದು ಕರೆಯಲಾಗಿದೆ.
- ಈ ಘಟನೆಯಿಂದ 1757 ಜೂನ್ 23ರಂದು ಪ್ಲಾಸಿ ಕದನ ಆರಂಭವಾಯಿತು.

**12. ರಾಬರ್ಟ ಕ್ಲೈವ್‌ನು ಪ್ಲಾಸಿ ಕದನದಲ್ಲಿ ಬಂಗಾಳದ ನವಾಬನ ವಿರುದ್ಧ ಹೇಗೆ ಜಯಗಳಿಸಿದನು?**

ಉತ್ತರ :

- ರಾಬರ್ಟಕ್ಲೈವ್‌ನು ನವಾಬನ ವಿರೋಧಿಗಳನ್ನು ತನ್ನತ್ತ ಸೆಳೆದುಕೊಂಡನು.
- ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿದ್ದರಿಂದ ಯುದ್ಧದಲ್ಲಿ ತಟಸ್ಥವಾಗಿರಲು ಒಪ್ಪಿದನು.
- ರಾಬರ್ಟಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು.
- ಯುದ್ಧದಲ್ಲಿ ಸಿರಾಜ್-ಉದ್-ದೌಲನನ್ನು ಸರೆಹಿಡಿದು ಕೊಲ್ಲಲಾಯಿತು.

**13. ಪ್ಲಾಸಿ ಕದನದ ಪರಿಣಾಮಗಳೇನು?**

**ಉತ್ತರ : ಪ್ಲಾಸಿ ಕದನದ ಪರಿಣಾಮಗಳು –**

- ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಪ್ರದರ್ಶಿಸಿತು.
- ಮೀರ್ ಜಾಫರನು ಬಂಗಾಳದ ನವಾಬನಾದನು.
- ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಹಕ್ಕನ್ನು ಪಡೆಯಿತು.
- ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ 17 ಕೋಟಿ 70 ಲಕ್ಷ ರೂಪಾಯಿಗಳನ್ನು ನೀಡಿದನು.

**14. ಬಕ್ಸಾರ್ ಕದನಕ್ಕೆ ಕಾರಣಗಳೇನು? ಅಥವಾ**

**ಬ್ರಿಟಿಷರು ಮೀರ್ ಖಾಸಿಂನನ್ನು ಬಂಗಾಳದ ನವಾಬ ಹುದ್ದೆಯಿಂದ ಪದಚ್ಯುತಗೊಳಿಸಿದರು ಏಕೆ?**

**ಉತ್ತರ : ಬಕ್ಸಾರ್ ಕದನಕ್ಕೆ ಕಾರಣಗಳು –**

- ಮೀರ್ ಕಾಸಿಂನು ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು.
- ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು.
- ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತು.
- ಬ್ರಿಟಿಷರು ಮೀರ ಕಾಸಿಂನನ್ನು ಕೆಳಗಿಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನನ್ನಾಗಿ ಮಾಡಿದರು.
- ಮೀರ್ ಕಾಸಿಂ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದೇ ಬಕ್ಸಾರ ಕದನಕ್ಕೆ ಕಾರಣವಾಯಿತು.

**15. ಮೀರ್ ಕಾಸಿಂನು ಬ್ರಿಟಿಷರ ವಿರುದ್ಧ ಹೋರಾಡಲು ಹೇಗೆ ಸಿದ್ಧನಾದನು? ಮತ್ತು ಯುದ್ಧದ ಫಲಿತಾಂಶವೇನು?**

**ಬಕ್ಸಾರ ಕದನ ಯಾರ ಯಾರ ನಡುವೆ ನಡೆಯಿತು? ಯುದ್ಧದ ಫಲಿತಾಂಶವೇನು?**

**ಉತ್ತರ : ಬಕ್ಸಾರ ಕದನ ನಡೆದ ರೀತಿ –**

- ಮೀರ್ ಕಾಸಿಂನು ಮೊಗಲ್ ದೊರೆ 'ಎರಡನೇ ಷಾ ಆಲಂ' ಮತ್ತು ಔದ್‌ನ ನವಾಬ 'ಷುಜ್-ಉದ್-ದೌಲ'ರೊಂದಿಗೆ ಒಪ್ಪಂದ ಮಾಡಿಕೊಂಡನು.
- ಮೀರ್ ಖಾಸಿಂನ ಸಂಯುಕ್ತ ಸೈನ್ಯ ಮತ್ತು 'ಹೆಕ್ಟರ್ ಮನ್ರೋ' ನೇತೃತ್ವದ ಬ್ರಿಟಿಷ್ ಸೈನ್ಯ 1764ರಲ್ಲಿ 'ಬಕ್ಸರ್' ಎಂಬಲ್ಲಿ ಮುಖಾಮುಖಿಯಾದವು.
- ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು.
- ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು.

**16. ಬಕ್ಸಾರ ಕದನದ ಪರಿಣಾಮಗಳೇನು? ಅಥವಾ (ಎಪ್ರಿಲ್ 2019)**

**ಬಕ್ಸಾರ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ನೆರವಾಯಿತು. ಸ್ಪಷ್ಟಿಕರಿಸಿ. ಅಥವಾ**

**ಬಕ್ಸಾರ್ ಕದನವು ಬ್ರಿಟಿಷರಿಗೆ ಭಾರತದಲ್ಲಿ ಭದ್ರವಾಗಿ ನೆಲಯೂರಲು ಹೇಗೆ ಸಹಕರಿಸಿತು?**

**ಉತ್ತರ : ಬಕ್ಸಾರ ಕದನದ ಪರಿಣಾಮಗಳು –**

- ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
- ಔದ್‌ನ ನವಾಬನಾದ ಷುಜ್-ಉದ್-ದೌಲನು ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
- ಮೀರ್ ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು.
- ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು.

**17. ರಾಬರ್ಟಕ್ಲೈವ್ ಜಾರಿಗೆ ತಂದ 'ದ್ವಿ ಪ್ರಭುತ್ವ' ಪದ್ಧತಿಯನ್ನು ವಿವರಿಸಿ.**

**ಉತ್ತರ : ದ್ವಿ ಪ್ರಭುತ್ವ ಪದ್ಧತಿ –**

- 1765ರಲ್ಲಿ ರಾಬರ್ಟ ಕ್ಲೈವ್‌ನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.
- ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು.
- ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.
- ಬ್ರಿಟಿಷರು ತಮ್ಮ ವಾಣಿಜ್ಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಭಾರತದಲ್ಲಿ ರಾಜಕೀಯ ಪರಮಾಧಿಕಾರವನ್ನು ಸ್ಥಾಪಿಸಿದರು.

# ಅಧ್ಯಾಯ – 2

# <u>ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ</u>

## ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.

1. ಬ್ರಿಟಿಷರು ಈ ಯುದ್ಧಗಳ ಮೂಲಕ ಭಾರತದಲ್ಲಿ ಯಾವುದೇ ಯುರೋಪ್ ದೇಶಗಳು ತಮ್ಮ ಎದುರಾಳಿಗಳಾಗಿ ನಿಲ್ಲದಂತೆ ಮಾಡಿದರು. – **ಕರ್ನಾಟಿಕ್ ಯುದ್ಧಗಳು**
2. ಸಿಖ್‌ರನ್ನು ಯಶಸ್ವಿಯಾಗಿ ಸಂಘಟಿಸಿದ ಸಿಖ್ ದೊರೆ – **ರಣಜಿತ್‌ಸಿಂಗ್.**
3. ಪೇಶ್ವೆ ಆಕಾಂಕ್ಷಿಯಾಗಿದ್ದ ರಘೋಬನು ಬ್ರಿಟಿಷರ ಬೆಂಬಲ ಕೋರಲು ಕಾರಣ – **ನಾರಾಯಣರಾಯನ ಮಗ 2ನೇ ಮಾದವರಾಯನಿಗೆ ಮರಾಠ ಒಕ್ಕೂಟ ಪಟ್ಟ ಕಟ್ಟಿತು.**
4. ಮರಾಠರಲ್ಲಿ ಪೇಶ್ವೆ ಹುದ್ದೆಗೆ ಕಲಹ ಏರ್ಪಡಲು ಕಾರಣ – **ನಾರಾಯಣರಾಯನನ್ನು ರಘೋಬನು ಕೊಲೆ ಮಾಡಿದ್ದರಿಂದ**
5. ಮೊದಲ ಆಂಗ್ಲೋ-ಮರಾಠ ಯುದ್ಧವು ಕೊನೆಗೊಂಡ ಒಪ್ಪಂದ – **ಸಾಲ್‌ಬಾಯ್ ಒಪ್ಪಂದ.**
6. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು –**ಲಾರ್ಡ ವೆಲ್ಲಸ್ಲಿ. –1798ರಲ್ಲಿ**
7. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಸೈನಿಕ ಒಪ್ಪಂದ ಇದು – **ಸಹಾಯಕ ಸೈನ್ಯ ಪದ್ಧತಿ**
8. ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ – **ಹೈದರಾಬಾದ ಸಂಸ್ಥಾನ.**
9. 2ನೇ ಆಂಗ್ಲೋ-ಮರಾಠ ಯುದ್ಧಕ್ಕೆ ಪ್ರಮುಖ ಕಾರಣ – **ಮರಾಠ ಮನೆತನಗಳ ನಾಯಕರ ನಡುವಿನ ಆಂತರಿಕ ಸಂಘರ್ಷ.**
10. ಲಾರ್ಡ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ನೀಡಿದ ಸಂಗತಿ – **ಪೇಶ್ವೆ 2ನೇ ಬಾಜಿರಾಯನು ಬ್ರಿಟಿಷರ ಸಹಾಯ ಯಾಚಿಸಿದನು.**
11. ಎರಡನೇ ಭಾಜಿರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣ – **ಹೋಳ್ಕರನ ಸೈನ್ಯ ಎರಡನೇ ಬಾಜಿರಾಯನ ಸೈನ್ಯವನ್ನು ಸೋಲಿಸಿದ್ದರಿಂದ.**
12. ಮರಾಠ ಮನೆತನಗಳು ಪೇಶ್ವೆ ಮಾಡಿಕೊಂಡ ಬೆಸ್ಸಿನ್ ಒಪ್ಪಂದವನ್ನು ತೀವ್ರವಾಗಿ ವಿರೋಧಿಸಿದವು ಏಕೆಂದರೆ – **ಪೇಶ್ವೆಯು ಬೆಸ್ಸಿನ್ ಒಪ್ಪಂದದ ಮೂಲಕ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ್ದನು.**
13. ಪೇಶ್ವೆ 2ನೇ ಬಾಜಿರಾಯನು ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. – **ಬೆಸ್ಸಿನ್ ಒಪ್ಪಂದ.**
14. ಮರಾಠರ ಕೊನೆಯ ಪೇಶ್ವೆ – **ಎರಡನೇ ಬಾಜಿರಾಯ.**
15. ವೆಲ್ಲಸ್ಲಿಯ ಕಾಲದಲ್ಲಿ ಕಂಪನಿಯ ಸಾಲದ ಹೊರೆ ಹೆಚ್ಚಲು ಕಾರಣ – **ಯುದ್ಧಪ್ರೀಯ ನೀತಿ**
16. ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಲು ಕಾರಣ – **1839ರಲ್ಲಿ ರಣಜಿತ್‌ಸಿಂಗ್ ಮರಣ ಹೊಂದಿದ್ದರಿಂದ**
17. ಸಿಖ್‌ರು ಸೋತು ಬ್ರಿಟಿಷರೊಂದಿಗೆ ಮಾಡಿಕೊಂಡ ಒಪ್ಪಂದ – **ಲಾಹೋರ ಒಪ್ಪಂದ. – 1846ರಲ್ಲಿ**
18. ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್ ಆಂಗ್ಲರ ವಿರುದ್ಧ ಪ್ರತಿಭಟಿಸಲು ಕಾರಣ –**ಆಂಗ್ಲರು ಪಂಜಾಬಿನ ಮೇಲೆ ನೇರ ಆಳ್ವಿಕೆ ಹೇರಲು ಮುಂದಾದರು. –1848ರಲ್ಲಿ**
19. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದ ಗವರ್ನರ್ – **ಲಾರ್ಡ ಡಾಲ್‌ಹೌಸಿ.**
20. ಆಂಗ್ಲೋ-ಸಿಖ್ ಯುದ್ಧಗಳ ಅಂತಿಮ ಫಲಿತಾಂಶವೆಂದರೆ – **ಪಂಜಾಬ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು.**
21. ಡಾಲ್‌ಹೌಸಿಯು ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದದ್ದು – **1848ರಲ್ಲಿ**
22. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು – **ಲಾರ್ಡ ಡಾಲ್‌ಹೌಸಿ.**
23. ಲಾರ್ಡ ಡಾಲ್‌ಹೌಸಿಯು ದೇಶಿಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಲು ಅನುಸರಿಸಿದ ನೀತಿ – **ದತ್ತು ಮಕ್ಕಳಿಗೆ ಹಕ್ಕಿಲ್ಲ.**

## ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಬ್ರಿಟಿಷರು ಯಾವ ಕದನಗಳ ಮೂಲಕ ಬಂಗಾಳ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು?**

ಉತ್ತರ : ಬ್ರಿಟಿಷರು ಪ್ಲಾಸಿ ಮತ್ತು ಬಕ್ಸರ್ ಕದನಗಳ ಮೂಲಕ ಬಂಗಾಳ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು.

**2. ಭಾರತೀಯ ರಾಜ್ಯಗಳನ್ನು ಉಪಾಯವಾಗಿ ಕಬಳಿಸಲು ಬ್ರಿಟಿಷರು ಅನುಸರಿಸಿದ ನೀತಿಗಳಾವುವು?**

ಉತ್ತರ : ಬ್ರಿಟಿಷರು 'ಸಹಾಯಕ ಸೈನ್ಯ ಪದ್ಧತಿ' ಮತ್ತು 'ದತ್ತು ಮಕ್ಕಳಿಗೆ ಹಕ್ಕಿಲ್ಲ'ದಂತಹ ನೀತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉಪಾಯವಾಗಿ ಭಾರತೀಯ ರಾಜ್ಯಗಳನ್ನು ಕಬಳಿಸಿದರು.

**3. ಲಾರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ ಬ್ರಿಟಿಷ್ ಆಡಳಿತ ವಿಸ್ತರಣೆ ಸುಲಭವಾಯಿತು. ಏಕೆ?**

ಉತ್ತರ : ಉತ್ತರ : ಲಾರ್ಡ್ ವೆಲ್ಲೆಸ್ಲಿಯ ಆಗಮನದ ಹೊತ್ತಿಗೆ ಬಲಿಷ್ಠ ಮರಾಠ ಮತ್ತು ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದರಿಂದ ಬ್ರಿಟಿಷ್ ಆಡಳಿತದ ವಿಸ್ತರಣೆ ಸುಲಭವಾಯಿತು.

**4. ಲಾರ್ಡ್ ವೆಲ್ಲಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?**

ಉತ್ತರ : ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಲಾರ್ಡ ವೆಲ್ಲಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.

**5. ಸಹಾಯಕ ಸೈನ್ಯ ಪದ್ಧತಿಯನ್ನು ಅರ್ಥೈಸಿರಿ. ಅಥವಾ**
**ಬ್ರಿಟಿಷರು ಸೈನಿಕ ನಿರ್ವಹಣೆಯನ್ನು ಹೇಗೆ ಸುಲಭ ಮಾಡಿಕೊಂಡರು?**

ಉತ್ತರ : ಲಾರ್ಡ ವೆಲ್ಲಸ್ಲಿಯು ಜಾರಿಗೆ ತಂದ ಸಹಾಯಕ ಸೈನ್ಯ ಪದ್ಧತಿಯಿಂದ ಬ್ರಿಟಿಷ್ ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇದರಿಂದ ಬ್ರಿಟಿಷರಿಗೆ ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಯಿತು. ಈ ನೀತಿಯಿಂದ ಬ್ರಿಟಿಷರು ಸೈನಿಕ ನಿರ್ವಹಣೆಯನ್ನು ಸುಲಭ ಮಾಡಿಕೊಂಡರು.

**6. ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟ ದೇಶಿಯ ಸಂಸ್ಥಾನಗಳು ಯಾವುವು?**

ಉತ್ತರ : ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ ಸಂಸ್ಥಾನ. ಆನಂತರ ಮೈಸೂರು, ಔದ್, ತಂಜಾವೂರು, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು.

**7. 2ನೇ ಬಾಜಿರಾಯನು ಬ್ರಿಟಿಷರ ಸಹಾಯ ಯಾಚಿಸಲು ಕಾರಣವೇನು?**

ಉತ್ತರ : 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಇದರಿಂದಾಗಿ ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು.

**8. ಬ್ರಿಟಿಷರು ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸತಾರದಲ್ಲಿ ಅಧಿಕಾರಕ್ಕೆ ತರಲು ಕಾರಣವೇನು?**

ಉತ್ತರ : ಆಂಗ್ಲೋ- ಮರಾಠ ಯುದ್ಧಗಳ ನಂತರ ಮರಾಠರ ತೀವ್ರ ಪ್ರತಿರೋಧವನ್ನು ನಿಗ್ರಹಿಸುವ ಸಲುವಾಗಿ ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸಣ್ಣ ರಾಜ್ಯ ಸತಾರದಲ್ಲಿ ಪ್ರತಿಷ್ಠಾಪಿಸಿ ಮರಾಠರ ಸಾಂಪ್ರದಾಯಿಕ ಮುಖಂಡನನ್ನಾಗಿಸಿದರು.

**9. ಲಾರ್ಡ ವೆಲ್ಲಸ್ಲಿಯು ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಲು ಕಾರಣವೇನು? ಅಥವಾ**
**ಲಾರ್ಡ ವೆಲ್ಲಸ್ಲಿಯು ತನ್ನ ಆಡಳಿತಾವಧಿಯಲ್ಲಿ ತೀವ್ರ ಟೀಕೆಗೆ ಒಳಗಾಗಲು ಕಾರಣವೇನು?**

ಉತ್ತರ : ಲಾರ್ಡವೆಲ್ಲಸ್ಲಿಯ ಯುದ್ಧಪ್ರೀಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ಲಾರ್ಡ ವೆಲ್ಲಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಿದನು.

**10. ಆಂಗ್ಲೋ – ಸಿಖ್ ಯುದ್ಧಗಳಿಗೆ ಪ್ರಮುಖ ಕಾರಣವೇನು?**

ಉತ್ತರ : 1809ರ "ನಿರಂತರ ಮೈತ್ರಿ ಒಪ್ಪಂದ"ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದ್ದೇ ಆಂಗ್ಲೋ-ಸಿಖ್ ಯುದ್ಧಗಳಿಗೆ ಪ್ರಮುಖ ಕಾರಣವಾಯಿತು.

**11. ಲಾರ್ಡ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತರಲು ಕಾರಣವೇನು? ಅಥವಾ**
**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವ್ಯಾಖ್ಯಾನಿಸಿ.**

ಉತ್ತರ : ಲಾರ್ಡ ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯ ಪ್ರಕಾರ ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.

**12. ಲಾರ್ಡ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗೆ ಒಳಪಟ್ಟ ದೇಶಿಯ ಸಂಸ್ಥಾನಗಳು ಯಾವುವು?**

ಉತ್ತರ : ಲಾರ್ಡ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವು ಪ್ರಮುಖವಾಗಿವೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಮೊದಲ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೊದಲ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಮರಾಠ ಪೇಶ್ವೆ ಮಾಧವರಾಯನು ತೀರಿದ ನಂತರ ನಾರಾಯಣರಾಯನು ಅಧಿಕಾರಕ್ಕೆ ಬಂದರೂ ಅವನ ಚಿಕ್ಕಪ್ಪ ರಘೋಬನು ಕೊಲೆ ಮಾಡಿದನು.
- ನಾನಾ ಪಡ್ನವೀಸನ ನೇತೃತ್ವದಲ್ಲಿ ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟ ಪಟ್ಟ ಕಟ್ಟಿತು.
- ರಘೋಬನು ಬ್ರಿಟಿಷರ ಬೆಂಬಲ ಕೋರಿದನು.
- ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775–1782ರವರೆಗೆ ನಡೆದ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರು.
- ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೆ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು.

**2. ಬ್ರಿಟಿಷ್‌ರ ಸಾಮ್ರಾಜ್ಯ ವಿಸ್ತರಿಸಲು ಲಾರ್ಡ ವೆಲ್ಲಸ್ಲಿ ಅನುಸರಿಸಿದ ವಿಧಾನಗಳು ಯಾವುವು?**

ಉತ್ತರ : ಬ್ರಿಟಿಷ್‌ರ ಸಾಮ್ರಾಜ್ಯ ವಿಸ್ತರಿಸಲು ಲಾರ್ಡ ವೆಲ್ಲಸ್ಲಿ ಮೂರು ವಿಧಾನಗಳನ್ನು ಅನುಸರಿಸಿದನು. ಅವುಗಳೆಂದರೆ –

- ಸಹಾಯಕ ಸೈನ್ಯ ಪದ್ಧತಿ,
- ಹೊಸ ರಾಜ್ಯಗಳ ಮೇಲೆ ಯುದ್ಧಗಳು ಮತ್ತು
- ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವುದು.

**3. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ತಿಳಿಸಿ. ಅಥವಾ (ಎಪ್ರಿಲ್ 2019)**
**ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತು? ಅಥವಾ**
**'ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ರಾಜ್ಯಗಳನ್ನು ಶೋಷಣೆಗೆ ಒಳಪಡಿಸಿತು.' ಈ ಹೇಳಿಕೆಯನ್ನು ಸಮರ್ಥಿಸಿ.**

**ಉತ್ತರ : ಲಾರ್ಡ ವೆಲ್ಲಸ್ಲಿಯು ಜಾರಿಗೆ ತಂದ ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು –**

- ಭಾರತೀಯ ರಾಜನು ಬ್ರಿಟಿಷ್ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು.
- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳವಂತಿಲ್ಲ.
- ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿಬೇಕು.
- ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**4. ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು**

- ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು.
- 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು.
- ಬ್ರಿಟಿಷರ ಸಹಾಯವನ್ನು ಯಾಚಿಸಿದ ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
- ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂದಿಯಾ ಮೊದಲಾದ ಮರಾಠ ಮತೆತನಗಳು ಒಗ್ಗೂಡಿದರು.
- 1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲಸ್ಲಿಯು ಅನೇಕ ಯುದ್ಧಗಳಲ್ಲಿ ಸೋಲಿಸಿದನು.

**5. ಮೂರನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೂರನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು–**

- 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು.
- ನಾಗಪುರದ ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.
- ಅಂತಿಮವಾಗಿ ಪೇಶ್ವೆ 2ನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಸೋತು ಶರಣಾದನು.
- ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು.

**6. ಆಂಗ್ಲೋ-ಸಿಖ್ ಯುದ್ಧಗಳನ್ನು ಕುರಿತು ವಿವರಿಸಿ. ಅಥವಾ**
**ಬ್ರಿಟಿಷರು ಸಿಖ್ ಪ್ರದೇಶಗಳನ್ನು ಹೇಗೆ ವಶಪಡಿಸಿಕೊಂಡರು? ಅಥವಾ**
**ಪಂಜಾಬ ಹೇಗೆ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು?**

**ಉತ್ತರ : ಆಂಗ್ಲೋ-ಸಿಖ್ ಯುದ್ಧಗಳು –**

- 1839ರಲ್ಲಿ ರಣಜಿತ್‌ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು.
- 1809ರಲ್ಲಿ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.
- 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು.
- ಸಿಖ್‌ರು ಕೆಲವು ದೇಶದ್ರೋಹಿ ನಾಯಕರ ಪಿತೂರಿಯಿಂದ ಸೋಲೊಪ್ಪಬೇಕಾಯಿತು.
- ಲಾಹೋರ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು.
- ಹೀಗೆ ಪಂಜಾಬ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು.

**7. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು? ಅಥವಾ**
**ಲಾರ್ಡ್ ಡಾಲ್ ಹೌಸಿಯು ತನ್ನ ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಹೇಗೆ ಸಾಧಿಸಿದನು?**

ಉತ್ತರ :

- ಲಾರ್ಡ್ ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು.
- ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.
- ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು.
- ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ ಮೊದಲಾದವು ಪ್ರಮುಖವಾಗಿವೆ.

## ಅಧ್ಯಾಯ – 3
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

### ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು

1. ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದ ಬ್ರಿಟಿಷ್ ಗವರ್ನರ್– **ಲಾರ್ಡ್ ಕಾರ್ನ್‌ವಾಲಿಸ್.**
2. ಹಿಂದುಸ್ತಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ ಎಂದು ಪ್ರತಿಪಾದಿಸಿದವರು – **ಲಾರ್ಡ್ ಕಾರ್ನ್‌ವಾಲೀಸ್.**
3. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು– **ವಾರನ್ ಹೇಸ್ಟಿಂಗ್ಸ್.**
4. ಫೌಜದಾರಿ ಅದಾಲತ್ ಎಂಬ ಅಪರಾಧ ನ್ಯಾಯಾಲಯವನ್ನು ಸ್ಥಾಪಿಸಿದವನು – **ವಾರನ್ ಹೇಸ್ಟಿಂಗ್ಸ್.**
5. **ಲಾರ್ಡ್ ಕಾರ್ನ್‌ವಾಲೀಸ್**ನು 1800ರಲ್ಲಿ ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಲ್ಕತ್ತಾದಲ್ಲಿ ಸ್ಥಾಪಿಸಿದ ಕಾಲೇಜು – **ಫೋರ್ಟ್ ವಿಲಿಯಂ ಕಾಲೇಜು.**
6. ಪ್ರಥಮವಾಗಿ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದ ಗವರ್ನರ್ – **ಲಾರ್ಡ್ ಕಾರ್ನ್‌ವಾಲಿಸ್.**
7. 'ಸುಪರಿಡೆಂಟೆಂಟ್ ಆಫ್ ಪೋಲಿಸ್' ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದವರು – **ಲಾರ್ಡ್ ಕಾರ್ನ್‌ವಾಲಿಸ್.**
8. ಬ್ರಿಟಿಷ್ ಮ್ಯಾಜಿಸ್ಟ್ರೇಟ್‌ಗಳನ್ನು ನೇಮಕ ಮಾಡುವ ಪದ್ಧತಿ ಜಾರಿಗೊಳಿಸಿದ ವರ್ಷ – **1781.**
9. 'ಪೋಲಿಸ್ ಕಾಯ್ದೆ'ಯನ್ನು ಜಾರಿಗೊಳಿಸಲಾದ ವರ್ಷ – **1861.**
10. ಕಾನೂನು ಮತ್ತು ಸುವ್ಯವಸ್ಥೆ ಆಡಳಿತಕ್ಕೆ ಅಡಿಪಾಯ ಹಾಕಿದ ಕಾಯ್ದೆ – **1861ರ ಪೋಲಿಸ್ ಕಾಯ್ದೆ**
11. ಬ್ರಿಟಿಷ್ ಸೈನ್ಯ ವ್ಯವಸ್ಥೆಯಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ – **ಸುಬೇದಾರ ಸ್ಥಾನ**
12. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು – **ಲಾರ್ಡ್ ಕಾರ್ನ್‌ವಾಲಿಸ್**
13. ಬ್ರಿಟಿಷರ ಭೂಕಂದಾಯ ನೀತಿಗಳಿಂದ 'ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು' ಎಂದು ಹೇಳಿದರವರು – **ಚಾರ್ಲ್ಸ್ ಮೆಟಕಾಫ್**
14. ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು – **ಆರ್.ಎಂ.ಬರ್ಡ್ ಮತ್ತು ಜೇಮ್ಸ್ ಥಾಮ್ಸನ್.**
15. ಮಹಲ್ ಎಂದರೆ – **ತಾಲ್ಲೂಕು.**
16. ರೈತವಾರಿ ಪದ್ಧತಿಯನ್ನು ಮೊದಲಿಗೆ ಬಾರಾಮಹಲ್ ಪ್ರಾಂತ್ಯದಲ್ಲಿ ಜಾರಿಗೊಳಿಸಿದವನು – **ಅಲೆಕ್ಸಾಂಡರ್ ರೀಡ್ – 1792ರಲ್ಲಿ**
17. ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದನು. – **ಥಾಮಸ್ ಮನ್ರೋ – 1801ರಲ್ಲಿ**
18. ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ – **ವಾರನ್ ಹೇಸ್ಟಿಂಗ್ಸ್.**
19. 1781ರಲ್ಲಿ ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದವರು – **ವಾರನ್ ಹೇಸ್ಟಿಂಗ್ಸ್**
20. ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವರು – **ಜೊನಾಥನ್ ಡಂಕನ್, – 1792ರಲ್ಲಿ**
21. ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವರು – **ಚಾರ್ಲ್ಸ್ ಗ್ರಾಂಟ್.**
22. ವಿಲಿಯಂ ಬೆಂಟಿಂಕ್‌ನು ಗವರ್ನರ್ ಜನರಲ್ ಆಗಿ ಬಂದ ವರ್ಷ – **1828.**
23. ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನು ಕಾನೂನು ಸದಸ್ಯನನ್ನಾಗಿ ಇವರನ್ನು ನೇಮಿಸಿದನು. – **ಮೆಕಾಲೆ.**
24. ರೆಗ್ಯೂಲೇಟಿಂಗ್ ಕಾಯ್ದೆ ಜಾರಿಗೆ ಬಂದ ವರ್ಷ – **1773.**
25. ಇಂಗ್ಲೆಂಡಿನ ಸರಕಾರವು ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೊಳಿಸಿದ ಉದ್ದೇಶ – **ಕಂಪನಿಯ ಮೇಲೆ ನಿಯಂತ್ರಣವನ್ನು ಹೇರುವುದು.**
26. ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪನೆ ಅವಕಾಶ ಕೊಟ್ಟ ಶಾಸನ – **1773ರ ರೆಗ್ಯುಲೇಟಿಂಗ್ ಕಾಯ್ದೆ.**
27. ಪಿಟ್ಸ್ ಇಂಡಿಯಾ ಕಾಯ್ದೆ ಜಾರಿಗೆ ಬಂದ ವರ್ಷ – **1784.**
28. ಚಾರ್ಟರ್ ಕಾಯ್ದೆಯ ಪ್ರಮುಖ ಉದ್ದೇಶ – **ಈಸ್ಟ್ ಇಂಡಿಯಾ ಕಂಪನಿಯ ಪರವಾನಗಿಯನ್ನು ವಿಸ್ತರಿಸುವುದು.**
29. ಮುಕ್ತ ವ್ಯಾಪಾರದ ಶಖೆ ಆರಂಭವಾದದ್ದು ಈ ಕಾಯಿಯ ಮೂಲಕ – **1813ರ ಚಾರ್ಟರ್ ಕಾಯ್ದೆ.**
30. ಚರ್ಚಗಳಿಗೆ ಭಾರತಕ್ಕೆ ಪ್ರವೇಶ ಮಾಡಲು ಅಧಿಕೃತ ಅವಕಾಶವನ್ನು ನೀಡಿದ ಶಾಸನ – **1813ರ ಚಾರ್ಟರ್ ಕಾಯ್ದೆ.**
31. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಶಾಸನ – **1833ರ ಚಾರ್ಟರ್ ಕಾಯ್ದೆ.**
32. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ ಎನ್ನುವುದನ್ನು ನಿರ್ದೇಶಿಸಿದ ಕಾಯ್ದೆ – **1833ರ ಚಾರ್ಟರ್ ಕಾಯ್ದೆ.**
33. ಭಾರತೀಯರನ್ನು ಸಂತೈಸಲು ಬ್ರಿಟನ್ ರಾಣಿ ವಿಕ್ಟೋರಿಯಾ ಘೋಷಣೆ ಹೊರಡಿಸಿದ್ದು – **ನವಂಬರ್ 1, 1858**
34. 1858ರ ನಂತರ ಭಾರತದ ಮೊದಲ ವೈಸರಾಯ್ – **ಲಾರ್ಡ್ ಕ್ಯಾನಿಂಗ್.**
35. ಬ್ರಿಟಿಷರು ಭಾರತೀಯರನ್ನು ಒಡೆದು ಆಳಲು ಬಳಸಿಕೊಂಡ ಕಾಯ್ದೆ – **1909ರ ಭಾರತೀಯ ಪರಿಷತ್ ಕಾಯ್ದೆ.**
36. ಮೊದಲ ಬಾರಿಗೆ ಭಾರತೀಯರಿಗೆ ಚುನಾವಣೆಯ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ಕಲ್ಪಿಸಿದ ಶಾಸನ – **1909ರ ಭಾರತೀಯ ಪರಿಷತ್ ಕಾಯ್ದೆ.**
37. ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ– **1909ರ ಭಾರತೀಯ ಪರಿಷತ್ ಕಾಯ್ದೆ.**
38. 1909ರಲ್ಲಿ ಪ್ರತ್ಯೇಕ ಚುನಾವಣಾ ವ್ಯವಸ್ಥೆಯನ್ನು ರಚಿಸಲು ಕಾರಣ –(ಎಪ್ರಿಲ್ 2019) **ಮುಸ್ಲಿಂರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು**
39. ಮಾಂಟೆಗೋರವರು 'ಭಾರತೀಯರಿಗೆ ಹಂತ ಹಂತವಾಗಿ ಜವಬ್ದಾರಿ ಸರ್ಕಾರವನ್ನು ನೀಡುವುದೇ ಬ್ರಿಟಿಷ್ ಸರ್ಕಾರದ ಗುರಿ' ಎಂದು ಘೋಷಿಸಿದರು. ಪರಿಣಾಮವಾಗಿ – **1919ರ ಭಾರತೀಯ ಪರಿಷತ್ತು ಕಾಯ್ದೆ ಜಾರಿಗೆ ಬಂದಿತು.**
40. ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿದ ಶಾಸನ – **1919ರ ಭಾರತೀಯ ಪರಿಷತ್ತು ಕಾಯ್ದೆ**
41. ಪ್ರತ್ಯೇಕ ಚುನಾವಣಾ ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಿಸಿದ ಶಾಸನ– **1919ರ ಭಾರತೀಯ ಪರಿಷತ್ತು ಕಾಯ್ದೆ**
42. ಭಾರತದ ಸಂವಿಧಾನದ ರಚನೆಗೆ ಬುನಾದಿಯಾದ ಶಾಸನ– **1935ರ ಭಾರತ ಸರ್ಕಾರದ ಶಾಸನ.**
43. ಭಾರತೀಯ ರಿಜರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ – **1935ರ ಭಾರತ ಸರ್ಕಾರದ ಶಾಸನ.**
44. 1935ರ ಭಾರತ ಸರ್ಕಾರದ ಕಾಯ್ದೆಯು ರೂಪಗೊಳ್ಳಲು ನೆರವಾದ ವರದಿ – **ಮೋತಿಲಾಲ ನೆಹರು ವರದಿ**
45. ಭಾರತದಲ್ಲಿ "ಫೆಡರಲ್ ಕೋರ್ಟ" ಸ್ಥಾಪನೆಗೆ ಅವಕಾಶ ನೀಡಿದ ಶಾಸನ – **1935ರ ಭಾರತ ಸರ್ಕಾರದ ಶಾಸನ.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಬ್ರಿಟಿಷ್ ಆಡಳಿತದಲ್ಲಿ ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ಏಕೆ ನೀಡಲಾಯಿತು?**

ಉತ್ತರ : ಕಾರ್ನವಾಲೀಸನು "ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ ನಿವಾಸಿಯೂ ಭ್ರಷ್ಟ" ಎಂದು ಪ್ರತಿಪಾದಿಸಿದನು. ಇದರಿಂದಾಗಿ ಭಾರತೀಯರಿಗೆ ಕೆಳದರ್ಜೆಯ ಉದ್ಯೋಗಗಳನ್ನು ಮಾತ್ರ ನೀಡಲಾಯಿತು.

**2. ಕೊತ್ವಾಲರ ಕಾರ್ಯಗಳೇನು?**

ಉತ್ತರ : ಹಳ್ಳಿಗಳ ಮಟ್ಟದಲ್ಲಿ ಕಳ್ಳತನ, ಅಪರಾಧಗಳು, ದರೋಡೆಗಳ ನಿಯಂತ್ರಣ ಮಾಡುವುದು ಕೊತ್ವಾಲರ ಕೆಲಸವಾಗಿದೆ.

**3. ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ನೇಮಕವಾದ ಸಮಿತಿ ಯಾವುದು?**

ಉತ್ತರ : ಸೈನಿಕ ವ್ಯವಸ್ಥೆಯನ್ನು ಮರುವಿನ್ಯಾಸಗೊಳಿಸಲು ಪೀಲ್ ಎಂಬುವವರ ನೇತೃತ್ವದ ಸಮಿತಿ ರಚನೆಯಾಯಿತು.

**4. ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಗಳು ಯಾವುವು?**

ಉತ್ತರ : ಬ್ರಿಟಿಷರು ಜಾರಿಗೆ ತಂದ ಭೂಕಂದಾಯ ನೀತಿಗಳೆಂದರೆ – ಖಾಯಂ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿ.

**5. ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು? ಅಥವಾ**
**ಖಾಯಂ ಜಮೀನ್ದಾರಿ ಪದ್ಧತಿಯನ್ನು ದೇಶದ ಯಾವ ಭಾಗದಲ್ಲಿ ಜಾರಿಗೆ ತರಲಾಯಿತು?**

ಉತ್ತರ : ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನವಾಲಿಸ್‌ನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

**6. ಮಹಲ್ವಾರಿ ಪದ್ಧತಿಯು ದೇಶದ ಯಾವ ಭಾಗಗಳಲ್ಲಿ ಜಾರಿಗೆ ಬಂದಿತು?**

ಉತ್ತರ : ಮಹಲ್ವಾರಿ ಪದ್ಧತಿಯು ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಜಾರಿಗೆ ಬಂದಿತು.

**7. ರೈತವಾರಿ ಪದ್ಧತಿಯು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದರೂ ರೈತರನ್ನು ಶೋಷಣೆಗೆ ಒಳಪಡಿಸಿತು. ಹೇಗೆ?**

ಉತ್ತರ : ರೈತವಾರಿ ಪದ್ಧತಿಯು ರೈತರಿಗೆ ಭೂಮಿಯ ಮೇಲಿನ ಹಕ್ಕನ್ನು ನೀಡಿ ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಿದ್ದರೂ ಭೂಕಂದಾಯ ಹೆಚ್ಚಾಗಿದ್ದರಿಂದ ರೈತರನ್ನು ಶೋಷಣೆಗೆ ಒಳಪಡಿಸಿತು.

**8. ಆಧುನಿಕ ಭಾರತದ ಶಿಕ್ಷಣಕ್ಕೆ ಯಾವ ವರದಿಯು ತಳಹದಿಯಾಯಿತು?**

ಉತ್ತರ : 1835ರಲ್ಲಿ ಇಂಗ್ಲೀಷ ಶಿಕ್ಷಣ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.

**9. ಶಿಕ್ಷಣಕ್ಕೆ ಸಂಬಂಧಿಸಿದ ಚಾಲ್ಸ್ ವುಡ್ಸ್‌ನ ಆಯೋಗದ ಶಿಫಾರಸ್ಸುಗಳೇನು?**

ಉತ್ತರ : ಸರ್. ಚಾಲ್ಸ್ ವುಡ್‌ನ (1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಗವರ್ನರ್ ಜನರಲ್ ಲಾರ್ಡ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

**10. ಎಡ್ಮಂಡ್ ಬರ್ಕನು ಈಸ್ಟ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾದ ತೆರಿಗೆ' ಎಂದು ಟೀಕಿಸಲು ಕಾರಣವೇನು?**

ಉತ್ತರ : ಈಸ್ಟ ಇಂಡಿಯಾ ಕಂಪನಿಯ ಅಧಿಕಾರಿಗಳು ಭಾರತದಲ್ಲಿ ನಡೆಸುತ್ತಿದ್ದ ಅನೈತಿಕ ವ್ಯವಹಾರಗಳು ಗೊತ್ತಿದ್ದರೂ ಸಹ ಯಾವುದೇ ಕ್ರಮವನ್ನು ಜರುಗಿಸದೇ ಸುಮ್ಮನಿದ್ದುದನ್ನು ಕಂಡು ಎಡ್ಮಂಡ್ ಬರ್ಕನು ಈಸ್ಟ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾದ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು.

**11. 1784ರ ಪಿಟ್ಸ್ ಇಂಡಿಯಾ ಕಾಯ್ದೆಯು ಭಾರತೀಯರ ರಾಜಕೀಯ ಹಕ್ಕುಗಳನ್ನು ಮೊಟಕುಗೊಳಿಸಿತು ಎಂದು ಹೇಗೆ ಹೇಳುವಿರಿ.**

ಉತ್ತರ : "ಭಾರತೀಯರು ತಮ್ಮ ಸಾರ್ವಭೌಮತ್ವವನ್ನು ಬ್ರಿಟಿಷ್ ರಾಜಸತ್ತೆಯ ಹೆಸರಿನಲ್ಲಿ ಪಡೆದಿದ್ದಾರೆಯೇ ವಿನಃ ಅವರದೇ ಸ್ವಂತ ಹಕ್ಕಲ್ಲ" ಎಂದು 1784ರ ಪಟ್ಸ್ ಇಂಡಿಯಾ ಕಾಯ್ದೆಯಲ್ಲಿ ಹೇಳುವ ಮೂಲಕ ಭಾರತೀಯರ ರಾಜಕೀಯ ಹಕ್ಕುಗಳನ್ನು ನಿರ್ಣಾಯಕವಾಗಿ ಮೊಟಕುಗೊಳಿಸಿತು.

**12. ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬರಲು ಕಾರಣವೇನು?**

ಉತ್ತರ : ಭಾರತೀಯರಲ್ಲಿ ಹೊಸ ಜ್ಞಾನವನ್ನು ಪಸರಿಸುವ, ಅವರ ನೈತಿಕ ಮತ್ತು ಧಾರ್ಮಿಕ ಬದುಕನ್ನು ಎತ್ತರಿಸುವ ಜವಬ್ದಾರಿಯನ್ನು ಮಿಷನರಿ ಸಂಸ್ಥೆಗಳು ವಹಿಸಿಕೊಳ್ಳಬೇಕು ಎಂಬ ನಿರ್ದೇಶನವನ್ನು 1813ರ ಚಾರ್ಟರ್ ಕಾಯ್ದೆಯಲ್ಲಿ ನೀಡಲಾಯಿತು. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬರಲು ಕಾರಣವಾಯಿತು.

**13. ಬ್ರಿಟನ್ ಸರಕಾರವು 1858ರ ಭಾರತ ಸರ್ಕಾರದ ಕಾಯ್ದೆಯನ್ನು ಜಾರಿಗೆ ತರಲು ಕಾರಣವೇನು?**

ಉತ್ತರ : 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಪರಿಣಾಮವಾಗಿ ಭಾರತೀಯರನ್ನು ಸಂತೈಸಲು ಬ್ರಿಟನ್ ಸರಕಾರ 1858ರ ಭಾರತ ಸರ್ಕಾರದ ಕಾಯ್ದೆಯನ್ನು ಜಾರಿಗೆ ತಂದಿತು.

**14. ಪಾಲಸಿ ಆಫ್ ಅಸರ್ಷನ್ (Policy of Association) ಎಂದರೇನು?**

**ಅಥವಾ**

**ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರ ಮತ್ತು ಬ್ರಿಟಿಷರ ನಡುವಿನ ಅಂತರ ಕಡಿಮೆಯಾಯತು? ಅಥವಾ 1861ರ ಭಾರತೀಯ ಪರಿಷತ್ ಕಾಯ್ದೆಯು ಭಾರತೀಯರಿಗೆ ಅತಿ ಪ್ರಮುಖ ಕಾಯ್ದೆಯಾಗಿದೆ ಏಕೆ?**

ಉತ್ತರ : 1861ರ ಕಾಯ್ದೆಯ ಮೂಲಕ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರಿಗೆ ಸ್ಥಾನವನ್ನು ಕಲ್ಪಿಸಿತು. ಅದ್ದರಿಂದ ಇದನ್ನು **ಪಾಲಸಿ ಆಫ್ ಅಸರ್ಷನ್**(Policy of Association) ಎಂದು ಕರೆಯುತ್ತಾರೆ. ಇದರಿಂದ ಭಾರತೀಯರ ಮತ್ತು ಬ್ರಿಟಿಷರ ನಡುವಿನ ಅಂತರ ಕಡಿಮೆಯಾಯಿತು.

**15. 1892ರ ಭಾರತೀಯ ಪರಿಷತ್ತು ಕಾಯ್ದೆಯು ಭಾರತೀಯರಿಗಿದ್ದ ಶಾಸನ ಸಭೆಗಳ ಪ್ರಾತಿನಿಧ್ಯವನ್ನು ಮತ್ತಷ್ಟು ವಿಸ್ತರಿಸಿತು. ಏಕೆ?**

ಉತ್ತರ : ಕಾಂಗ್ರೆಸ್ ಸಂಘಟನೆಯು ಬ್ರಿಟಿಷರ ಆಡಳಿತದ ಬಗ್ಗೆ ತಳೆದ ವಿಮರ್ಶಾತ್ಮಕ ನಿಲುವಿನ ಹಿನ್ನೆಲೆಯಲ್ಲಿ 1892ರ ಭಾರತೀಯ ಪರಿಷತ್ತು ಕಾಯ್ದೆಯು ಭಾರತೀಯರಿಗಿದ್ದ ಶಾಸನ ಸಭೆಗಳ ಪ್ರಾತಿನಿಧ್ಯವನ್ನು ಮತ್ತಷ್ಟು ಹೆಚ್ಚಿಸಲಾಯಿತು.

**16. 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಯಾರು ರೂಪಿಸಿದರು?**

ಉತ್ತರ : 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಭಾರತದ ವೈಸರಾಯ್ ಲಾರ್ಡ ಮಿಂಟೋ ಮತ್ತು ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ ಮಾರ್ಲೆ ರೂಪಿಸಿದರು.

**17. 1909ರ ಭಾರತೀಯ ಪರಿಷತ್ ಕಾಯ್ದೆಯು ಭಾರತವನ್ನು ಮತೀಯ ಆಧಾರದ ಮೇಲೆ ವಿಭಜಿಸಿತು ಎಂದು ಹೇಗೆ ಹೇಳುವಿರಿ.**

ಉತ್ತರ : 1909ರ ಭಾರತೀಯ ಪರಿಷತ್ ಕಾಯ್ದೆಯು ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ " ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಭಾರತವನ್ನು ಮತೀಯ ಆಧಾರದ ಮೇಲೆ ವಿಭಜಿಸಿತು.

**18. 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ರೂಪಿಸಿದವರು ಯಾರು?**

ಉತ್ತರ : 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗೋ ಮತ್ತು ವೈಸರಾಯ ಜೆಮ್ಸ್‌ಫರ್ಡ್ ರೂಪಿಸಿದರು.

**19. 1919ರ ಭಾರತೀಯ ಪರಿಷತ್ ಕಾಯ್ದೆಯನ್ನು ಏಕೆ ಜಾರಿಗೆ ತರಲಾಯಿತು?**

ಉತ್ತರ : ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೆಪಿಸಿದ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು.

**20. 1935ರ ಭಾರತ ಸರ್ಕಾರದ ಕಾಯ್ದೆಯು ಭಾರತದ ಸಂವಿಧಾನದ ರಚನೆಗೆ ಬುನಾದಿಯಾಗಿದೆ ಎಂದು ಹೇಗೆ ಹೇಳುವಿರಿ.**

ಉತ್ತರ : ಸಂವಿಧಾನದ ಬಹುತೇಕ ಅಂಶಗಳು 1935ರ ಭಾರತ ಸರ್ಕಾರದ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಬ್ರಿಟಿಷರು ಭಾರತದಲ್ಲಿ ತಾವು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಹೇಗೆ ಯಶಸ್ವಿಯಾದರು?**

ಉತ್ತರ :

- ಪ್ರಾರಂಭದಲ್ಲಿ ಭಾರತ ಒಂದು ದೇಶವೆಂಬ ಪರಿಕಲ್ಪನೆ ಇರಲಿಲ್ಲ.
- ಭಾರತವು ವಿವಿಧ ರಾಜ್ಯಾಡಳಿಗಳಲ್ಲಿ ಹರಿದು ಹಂಚಿಹೋಗಿತ್ತು.
- ಬ್ರಿಟಿಷರು ವಿವಿಧ ಕಾರಣಗಳಿಂದ ಅನೇಕ ರಾಜ್ಯಗಳನ್ನು ಒಂದುಗೂಡಿಸಲು ಪ್ರಯತ್ನಿಸಿದರು.
- ಬ್ರಿಟಿಷರು ಏಕರೂಪ ರಾಜಕೀಯ ವ್ಯವಸ್ಥೆ ಹಾಗೂ ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು.
- ಶಿಕ್ಷಣ, ನ್ಯಾಯಾಂಗ ವ್ಯವಸ್ಥೆ, ಭೂಕಂದಾಯ, ವ್ಯಾಪಾರ ಕೃಷಿ ಮೊದಲಾದ ಕ್ಷೇತ್ರಗಳಲ್ಲಿ ಹೊಸ ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಿದರು.
- ಬ್ರಿಟಿಷರು ಭಾರತದಲ್ಲಿ ತಾವು ಕಟ್ಟಿದ ರಾಜ್ಯ ವ್ಯವಸ್ಥೆಗೆ ಏಕರೂಪವನ್ನು ನೀಡುವಲ್ಲಿ ಯಶಸ್ವಿಯಾದರು

**2. ಬ್ರಿಟಿಷರು ಜಾರಿಗೆ ತಂದ ನಾಗರಿಕ ಸೇವೆಗಳನ್ನು ವಿವರಿಸಿ.**

**ಉತ್ತರ : ನಾಗರೀಕ ಸೇವೆಗಳು –**

- ಲಾರ್ಡ ಕಾರ್ನ್‌ವಾಲಿಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು.
- 1800ರಲ್ಲಿ ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು.
- 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು.

**3. ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ. ಅಥವಾ ಬ್ರಿಟಿಷರ ಕಾಲದಲ್ಲಿದ್ದ ನಾಗರಿಕ ಮತ್ತು ಅಪರಾಧ ನ್ಯಾಯಾಲಯಗಳ ನಡುವಿನ ವ್ಯತ್ಯಾಸವೇನು?**

**ಉತ್ತರ : ಈಸ್ಟ್ ಇಂಡಿಯಾ ಕಂಪನಿಯು ರೂಪಿಸಿದ ನ್ಯಾಯಾಂಗ ವ್ಯವಸ್ಥೆ –**

- ವಾರನ್ ಹೇಸ್ಟಿಂಗ್ಸ್‌ನು ಎರಡು ಬಗೆಯ ನ್ಯಾಯಾಲಯಗಳನ್ನು ಜಾರಿಗೆ ತಂದನು.

**ದಿವಾನಿ ಅದಾಲತ್ (ನಾಗರಿಕ ನ್ಯಾಯಾಲಯ) –**

- ಹಿಂದುಗಳಿಗೆ ಹಿಂದೂ ಶಾಸ್ತ್ರ ಗ್ರಂಥಗಳ ಪ್ರಕಾರ ನ್ಯಾಯದಾನ.
- ಮುಸ್ಲಿಂರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ.
- ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಣೆ.

**ಫೌಜದಾರಿ ಅದಾಲತ್ ( ಅಪರಾಧ ನ್ಯಾಯಾಲಯ) –**

- ಇಸ್ಲಾಂ ಕಾನೂನು ಪ್ರಕಾರ ವಿಚಾರಣೆ.
- ಕ್ರಮೇಣ ಬ್ರಿಟಿಷ್ ಕಾನೂನುಗಳ ಜಾರಿ ಕ್ರಮ.
- 'ಕಾಜಿ'ಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆ.

**4. ಬ್ರಿಟಿಷರ ಕಾಲದಲ್ಲಿ ಪೋಲಿಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು? ಅಥವಾ ಲಾರ್ಡ ಕಾರ್ನವಾಲಿಸನು ಪೋಲಿಸ್ ವ್ಯವಸ್ಥೆಯನ್ನು ಹೇಗೆ ಸುಧಾರಿಸಿದನು?**

**ಉತ್ತರ : ಬ್ರಿಟಿಷರ ಕಾಲದಲ್ಲಿ ಪೋಲಿಸ್‌ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳು–**

- ಲಾರ್ಡ ಕಾರ್ನವಾಲೀಸನು ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು.
- ಇವನು 'ಸೂಪರಿಂಡೆಂಟೆಂಟ್ ಆಫ್ ಪೋಲಿಸ್' (SP) ಎನ್ನುವ ಹುದ್ದೆಯನ್ನು ಸೃಷ್ಟಿಸಿದನು.
- 1793ರಲ್ಲಿ ಪ್ರತಿ ಜಿಲ್ಲೆಯನ್ನು ಠಾಣೆಗಳನ್ನಾಗಿ ವಿಭಜಿಸಲಾಯಿತು.
- ಪ್ರತಿ ಠಾಣೆಯನ್ನು 'ಕೊತ್ವಾಲ'ರ ಅಧೀನಕ್ಕೆ, ಹಳ್ಳಿಗಳು 'ಚೌಕಿದಾರ'ರ ಅಧೀನಕ್ಕೆ ತರಲಾಯಿತು.
- ಕೊತ್ವಾಲರು ಹಳ್ಳಿಗಳ ಮಟ್ಟದಲ್ಲಿ ಅಪರಾಧಗಳ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿದ್ದರು.
- 1861ರಲ್ಲಿ 'ಪೋಲೀಸ್ ಕಾಯ್ದೆ'ಯನ್ನು ಜಾರಿಗೊಳಿಸಲಾಯಿತು.

- 1902ರಲ್ಲಿ ಪೋಲಿಸ್ ಕಮಿಷನ್ ಕಾಯ್ದೆಯು ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು.

**5. ಖಾಯಂ ಜಮೀನ್ದಾರಿ ಪದ್ಧತಿ ಮತ್ತು ರೈತವಾರಿ ಪದ್ಧತಿಯ ನಡುವಿನ ವ್ಯತ್ಯಾಸಗಳೇನು? ಅಥವಾ**
**ಜಮೀನ್ದಾರಿ ಪದ್ಧತಿಗಿಂತ ರೈತವಾರಿ ಪದ್ಧತಿಯು ಭಿನ್ನ ಹೇಗೆ?**

**ಉತ್ತರ : 6 & 8ನೇ ಪ್ರಶ್ನೆಯ ಉತ್ತರಗಳು**

**6. ಖಾಯಂ ಜಮೀನ್ದಾರಿ ಪದ್ಧತಿಯ ಲಕ್ಷಣಗಳೇನು? ಅಥವಾ**
**"ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು" ವಿಮರ್ಶಿಸಿ.**

**ಉತ್ತರ :**
- ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೊಳಿಸಿದನು.
- ಜಮೀನ್ದಾರರು ಭೂಮಾಲಿಕರಾಗಿ ಪ್ರತಿವರ್ಷವೂ ಕಂದಾಯದ ಮೊತ್ತವನ್ನು ಸರಕಾರಕ್ಕೆ ಸಲ್ಲಿಸಬೇಕಿತ್ತು.
- ಭೂಮಾಲಿಕರಿಗೆ ಈ ಪದ್ಧತಿಯಿಂದ ಹೆಚ್ಚಿನ ಲಾಭವಾಯಿತು.
- ಜಮೀನ್ದಾರರು ಸರಕಾರಕ್ಕೆ ಸಲ್ಲಿಸಬೇಕಾದ ಹಣದ ಮೊತ್ತಕ್ಕಿಂತ ಹೆಚ್ಚಿಗೆ ವಸೂಲು ಮಾಡಿದ ಹಣವನ್ನು ತಮ್ಮಲ್ಲೇ ಇಟ್ಟುಕೊಳ್ಳಬಹುದಾಗಿತ್ತು.
- ಈ ಪದ್ಧತಿಯಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ.
- ಚಾರ್ಲ್ಸ್ ಮೆಟಕಾಫ್ ಹೇಳುವಂತೆ ಬ್ರಿಟಿಷ್ ಭೂಕಂದಾಯ ನೀತಿಗಳಿಂದ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು". ಎಂದು ಹೇಳಿದ್ದಾರೆ.

**7. ಮಹಲ್ವಾರಿ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ಮಹಲ್ವಾರಿ ಪದ್ಧತಿಯ ಲಕ್ಷಣಗಳು –**
- ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ ಪ್ರಾಂತ್ಯಗಳಲ್ಲಿ ಮಹಲ್ಲುಗಳೇ ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು.
- ಈ ಪದ್ಧತಿಯನ್ನು ಆರ್.ಎಂ.ಬರ್ಡ ಮತ್ತು ಜೇಮ್ಸ್ ಥಾಮ್ಸನ್ ಪ್ರಯೋಗಿಸಿದರು.
- ಮಹಲ್ ಎಂದರೆ ತಾಲ್ಲೂಕು ಎಂದರ್ಥ.
- ಕಂಪನಿಯ ಅಧಿಕಾರಿಗಳು ಜಮೀನಿನಲ್ಲಿ ಆಗುವ ಉತ್ಪಾದನೆಗಿಂತಲೂ ಹೆಚ್ಚಿನ ಮೊತ್ತದ ವಾರ್ಷಿಕ ಕಂದಾಯ ನಿರ್ಧರಿಸಿದ್ದರಿಂದ ಅನೇಕ ಜಮೀನ್ದಾರರು ತಮ್ಮ ಭೂಮಾಲಿಕತ್ವವನ್ನು ಕಳೆದುಕೊಂಡರು.

**8. ರೈತವಾರಿ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ರೈತವಾರಿ ಪದ್ಧತಿಯ ಲಕ್ಷಣಗಳು –**
- ರೈತವಾರಿ ಪದ್ಧತಿಯನ್ನು ಮೊದಲಿಗೆ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಗ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.
- ಈ ಪದ್ಧತಿಯನ್ನು ಥಾಮಸ್ ಮನ್ರೋ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು.
- ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರಕಾರ ಮಾನ್ಯಮಾಡಿತು.
- ಅವನೇ ನೇರವಾಗಿ ಉತ್ಪನ್ನದ ಶೇ. 50ರಷ್ಟು ಭಾಗವನ್ನು ಕಂದಾಯದ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾಯಿತು.
- ಹೆಚ್ಚಿನ ಕಂದಾಯ ನಿಗದಿಪಡಿಸಿದ್ದರಿಂದ ರೈತರು ಸಾಲದ ಸುಳಿಗೆ ಸಿಲುಕುವಂತಾಯಿತು.
- ಅವರನ್ನೇ ನೆಚ್ಚಿ ಬದುಕುತ್ತಿದ್ದ ಸಣ್ಣ ಕೃಷಿಕರು, ಕೃಷಿ ಕೂಲಿಕಾರರು ನಿರ್ಗತಿಕರಾದರು.

**9. ಬ್ರಿಟಿಷರ ಕಂದಾಯ ನೀತಿಯಿಂದ ಭಾರತೀಯ ಮೇಲಾದ ಪರಿಣಾಮಗಳಾವುವು?**

**ಉತ್ತರ : ಬ್ರಿಟಿಷರ ಕಂದಾಯ ನೀತಿಯಿಂದ ಭಾರತೀಯ ಮೇಲಾದ ಪರಿಣಾಮಗಳು –**
- ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ಜಮೀನ್ದಾರರ ಶೋಷಣೆಯಿಂದ ರೈತರು ಸಂಕಷ್ಟಗಳಿಗೆ ಒಳಗಾಗಿ ನಿರ್ಗತಿಕರಾದರು.
- ಭೂಮಿ ಮಾರಾಟದ ವಸ್ತುವಾಯಿತು.
- ಜಮೀನ್ದಾರರೂ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರ ವಾಣಿಜ್ಯೀಕರಣಗೊಂಡಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾದರು.
- ಇಂಗ್ಲೆಂಡಿನಲ್ಲಾದ ಕೈಗಾರಿಕಾಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

**10. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು? ಅಥವಾ**
**ಬ್ರಿಟಿಷರ ಆಡಳಿತ ಕಾಲದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಬೆಳವಣಿಗೆಯನ್ನು ವಿವರಿಸಿ.**

**ಉತ್ತರ : ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು –**
- ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ವಾರನ್ ಹೇಸ್ಟಿಂಗ್ಸ್.
- ವಾರನ್ ಹೇಸ್ಟಿಂಗ್ಸ್ ಕಲ್ಕತ್ತಾದಲ್ಲಿ ಮದರಸಾವನ್ನು ಪ್ರಾರಂಭಿಸಿದನು.
- ಜೋನಾಥನ್ ಡಂಕನ್ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.
- ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯು ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.
- ಭಾರತದಲ್ಲಿ ವಿದ್ಯಾಭ್ಯಾಸವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕೊಡಲು ಪ್ರಾರಂಭವಾಯಿತು.
- ಸರ್ ಚಾರ್ಲ್ಸ್ ವುಡ್ ವರದಿಯ ಶಿಫಾರಸ್ಸುಗಳ ಆಧಾರದ ಮೇಲೆ ಗವರ್ನರ್ ಜನರಲ್ ಲಾರ್ಡ್ ಡಾಲ್ ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ನೂತನ ವಿಶ್ವವಿದ್ಯಾಲಯಗಳನ್ನು 1857ರಲ್ಲಿ ಸ್ಥಾಪಿಸಿದನು.

**11. ಭಾರತೀಯ ಮೇಲೆ ಬ್ರಿಟಿಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ. ಅಥವಾ**
**ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು. ಸಮರ್ಥಿಸಿ. (ಎಪ್ರಿಲ್ 2019)**

**ಉತ್ತರ : ಭಾರತೀಯ ಮೇಲೆ ಬ್ರಿಟಿಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳು**
- ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು.
- ವೃತ್ತ ಪತ್ರಿಕೆಗಳು ಸರ್ಕಾರದ ನೀತಿಗಳನ್ನು ವಿಮರ್ಶಿಸಿದವು.
- ಪಾಶ್ಚಾತ್ಯ ಲೇಖಕರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
- ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು.
- ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

**12. 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತರಲು ಕಾರಣವೇನು?**

**ಉತ್ತರ : 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತರಲು ಕಾರಣಗಳು –**
- ದಿವಾನಿ ಹಕ್ಕನ್ನು ಕಂಪನಿ ಅಧಿಕಾರಿಗಳು ತಮ್ಮ ವೈಯಕ್ತಿಕ ಶ್ರೀಮಂತಿಕೆಯನ್ನು ಹೆಚ್ಚು ಮಾಡಿಕೊಳ್ಳಲು ಬಳಸಿಕೊಂಡರು.
- ಭ್ರಷ್ಟಾಚಾರ ವಿಪರೀತವಾಯಿತು.
- ಇವರು ಸಂಪಾದಿಸಿದ ಹಣದ ಪ್ರಮಾಣ ಎಷ್ಟಿತ್ತೆಂದರೆ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದೆನ್ನುವ ಆತಂಕ ಇಂಗ್ಲೆಂಡಿನಲ್ಲಿ ಅನೇಕರಿಗಿತ್ತು.
- ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಉದ್ದೇಶದಿಂದ 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಜಾರಿಗೆ ತಂದರು.

**13. 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳೇನು?**

**ಉತ್ತರ : 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳು –**
- ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
- ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಆದನು.
- ಗವರ್ನರ್ ಜನರಲ್‌ನಿಗೆ ಉಳಿದೆರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರ ಹೊಂದಿದನು.
- ಬಂಗಾಳ ಸರ್ಕಾರದ ಪೂರ್ವಾನುಮತಿಯಿಲ್ಲದೆ ಉಳಿದೆರಡು ಪ್ರೆಸಿಡೆನ್ಸಿಗಳು ಯಾರ ಮೇಲೂ ಯುದ್ಧ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ.
- ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ "ಸುಪ್ರಿಂಕೋರ್ಟ" ಅನ್ನು ಸ್ಥಾಪಿಸಲಾಯಿತು.
- ಕಂಪನಿ ನೌಕರರ ಖಾಸಗಿ ವ್ಯಾಪಾರವನ್ನು ನಿಯಂತ್ರಿಸುವುದು.

**14. 1813ರ ಚಾರ್ಟರ್ ಕಾಯ್ದೆಯ ನಿಬಂಧನೆಗಳೇನು? ಅಥವಾ**
**1813ರ ಕಾಯ್ದೆಯು ಚಾರಿತ್ರಿಕವಾದುದು ಏಕೆ?**

**ಉತ್ತರ : 1813ರ ಚಾರ್ಟರ್ ಕಾಯ್ದೆಯ ನಿಬಂಧನೆಗಳು –**
- ಈ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಗೆ ಮುಂದಿನ 20 ವರ್ಷಗಳು ಭಾರತದಲ್ಲಿರುವ ಅಧಿಕಾರವನ್ನು ನೀಡಿತು.
- ಈ ಕಾಯ್ದೆಯು ಎಲ್ಲರಿಗೂ ವ್ಯಾಪಾರ ಮಾಡುವ ಅವಕಾಶವನ್ನು ಮುಕ್ತವಾಗಿಸಿತು..
- ಮುಕ್ತ ವ್ಯಾಪಾರದ ಹೊಸ ಶಕೆ ಆರಂಭವಾಯಿತು.
- ಗವರ್ನರ್ ಜನರಲ್ ಮತ್ತು ಸೇನೆಯ ಮಹಾ ಮುಖ್ಯಸ್ಥರನ್ನು ನಿರ್ದೇಶಕ ಮಂಡಳಿಯು ನೇಮಿಸುವ ಅಧಿಕಾರವನ್ನು ಹೊಂದಿತು.
- ಚರ್ಚಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು.
- ಇದರಿಂದ ಕ್ರೈಸ್ತ ಧರ್ಮದ ಪ್ರಚಾರ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ ಹೆಚ್ಚಾಯಿತು.

**15. 1833 ರ ಚಾರ್ಟರ್ ಕಾಯ್ದೆಯ ನಿಬಂಧನೆಗಳೇನು?**

**ಉತ್ತರ : 1833ರ ಚಾರ್ಟರ್ ಕಾಯ್ದೆಯ ನಿಬಂಧನೆಗಳು –**
- ಬಂಗಾಳದ ಗವರ್ನರ್ ಜನರಲ್ ಭಾರತದ ಗವರ್ನರ್ ಜನರಲ್ ಆದನು.

➢ ಭಾರತದ ಎಲ್ಲಾ ವ್ಯಾಪಾರಿ ಸರಕುಗಳನ್ನು ಮೇಲೆ ಅಧಿಕಾರವನ್ನು ಹೊಂದಿದನು.
➢ ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ಸಂಬಂಧದ ವಿಷಯಗಳ ತೀರ್ಮಾನ ಬಂಗಾಳ ಸರ್ಕಾರಕ್ಕೆ ಬಂತು.
➢ ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವಂತಿಲ್ಲ.
➢ ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಪರಿಣತನ ನೇಮಕ ಮಾಡಲಾಯಿತು.
➢ ಬ್ರಿಟಿಷ್ ವ್ಯಾಪಾರಿ ಕಂಪನಿಗಳಿಗೆ ಭಾರತಕ್ಕೆ ಬರಲು ಮುಕ್ತ ಪರವಾನಗಿಯನ್ನು ನೀಡಲಾಯಿತು.

**16. 1858ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳೇನು? ಅಥವಾ**
**1858ರ ಕಾಯ್ದೆಯು ಬ್ರಿಟಿಷ್ ಆಳ್ವಿಕೆಯಲ್ಲಿ ಅತ್ಯಂತ ಮಹತ್ವದ ಬದಲಾವಣೆಯನ್ನು ತಂದಿತು. ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ : 1858ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು –**
➢ ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತದ ಆಡಳಿತವನ್ನು ರಾಣಿಯ ಆಡಳಿತಕ್ಕೆ ವರ್ಗಾಯಿಸಲಾಯಿತು.
➢ ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸರಾಯ್" ಎಂಬ ಪದನಾಮವನ್ನು ನೀಡಿದರು.
➢ ವೈಸರಾಯ್ ಆಗಿ ಲಾರ್ಡ್ ಕ್ಯಾನಿಂಗ್ ನೇಮಕಗೊಂಡರು.
➢ "ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು.
➢ ಬ್ರಿಟಿಷ್ ಮಂತ್ರಿಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದರು.

**17. 1909ರ ಭಾರತೀಯ ಪರಿಷತ್ ಕಾಯ್ದೆ (ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳೇನು?**

**ಉತ್ತರ : 1909ರ ಭಾರತೀಯ ಪರಿಷತ್ ಕಾಯ್ದೆ (ಮಿಂಟೋ ಮಾರ್ಲೆ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳು –**
➢ ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16 ರಿಂದ 60ಕ್ಕೆ ಹೆಚ್ಚಿಸಲಾಯಿತು.
➢ ಪ್ರಾಂತ್ಯದಲ್ಲೂ ಶಾಸನ ಸಭೆಗಳ ಸದಸ್ಯರ ಸ್ಥಾನಗಳನ್ನು ಹೆಚ್ಚಿಸಲಾಯಿತು.
➢ ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆಯಾಗಲು ಅವಕಾಶ ನೀಡಲಾಯಿತು.
➢ ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ 'ಪ್ರತ್ಯೇಕ ಚುನಾವಣಾ ಮತಗಟ್ಟೆ' ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

**18. 1919ರ ಭಾರತೀಯ ಪರಿಷತ್ ಕಾಯ್ದೆ (ಮಾಂಟೆಗೋ–ಚೇಮ್ಸ್‌ಫರ್ಡ್ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳೇನು? ಅಥವಾ**
**1919ರ ಭಾರತ ಸರ್ಕಾರ ಕಾಯ್ದೆಯು ಭಾರತದ ಆಡಳಿತದಲ್ಲಿ ಹಲವಾರು ಬದಲಾವಣೆ ತಂದಿತು. ಹೇಗೆ?**

**ಉತ್ತರ : 1919ರ ಭಾರತೀಯ ಪರಿಷತ್ ಕಾಯ್ದೆ (ಮಾಂಟೆಗೋ–ಚೇಮ್ಸ್‌ಫರ್ಡ್ ಸುಧಾರಣಾ ಕಾಯ್ದೆ)ಯ ಶಿಫಾರಸ್ಸುಗಳು –**
➢ ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ ನೀಡಲಾಯಿತು.
➢ ಪ್ರಾಂತ್ಯಗಳಲ್ಲಿ "ದ್ವಿಸರಕಾರ" ಪದ್ಧತಿಗೆ ಅವಕಾಶ ನೀಡಲಾಯಿತು.
➢ ಭಾರತಕ್ಕೆ ಒಬ್ಬ ಹೈಕಮಿಷನರ್‌ರನ್ನು ನೇಮಕ ಮಾಡಲಾಯಿತು.
➢ ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ ನೀಡಲಾಯಿತು.
➢ ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
➢ "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಮುಸಿಂ, ಸಿಖ, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಿಸಲಾಯಿತು.

**19. 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳೇನು? ಅಥವಾ**
**1935ರ ಭಾರತ ಸರ್ಕಾರ ಕಾಯ್ದೆಯು ಭಾರತದ ಆಡಳಿತದಲ್ಲಿ ಹಲವಾರು ಬದಲಾವಣೆ ತಂದಿತು. ಹೇಗೆ? ಅಥವಾ**
**'1935ರ ಭಾರತ ಸರ್ಕಾರ ಕಾಯ್ದೆಯು ಭಾರತ ಸಂವಿಧಾನದ ಬುನಾದಿ' ಸಮರ್ಥಿಸಿ.**

**ಉತ್ತರ : 1935ರ ಭಾರತ ಸರ್ಕಾರದ ಕಾಯ್ದೆಯ ಪ್ರಮುಖ ಅಂಶಗಳು**
➢ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.
➢ ಕೇಂದ್ರದಲ್ಲಿ "ದ್ವಿ ಸರಕಾರ"ವನ್ನು ಸ್ಥಾಪಿಸಲಾಯಿತು.
➢ ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
➢ ಪ್ರಾಂತ್ಯಗಳಲ್ಲಿ 'ದ್ವಿ ಸರಕಾರ' ಪದ್ಧತಿಯನ್ನು ರದ್ದುಗೊಳಿಸಲಾಯಿತು.
➢ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
➢ ಭಾರತದಲ್ಲಿ "ಫಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.

## ಅಧ್ಯಾಯ – 4

## ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**ಪ್ರಶ್ನೆ 1] ಬಹು ಆಯ್ಕೆ ಪ್ರಶ್ನೆಗಳು**

1. ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣವಾದ ಪ್ರಮುಖ ಘಟನೆಯೆಂದರೆ – **1707ರಲ್ಲಿ ಸಂಭವಿಸಿದ ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ.**
2. ಮೊಘಲರ ರಾಜಕೀಯ ಸರ್ವಭೌಮತ್ವವನ್ನು ಕುಗ್ಗಿಸಿದ ಘಟನೆ – **ಔರಂಗಜೇಬನ ಮರಣ.**
3. ಮೈಸೂರಿನ ಚಿಕ್ಕದೇವರಾಜ ಒಡೆಯರ್ ಮರಣ ಹೊಂದಿದ ವರ್ಷ – **1704.**
4. ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿದ ಘಟನೆ. – **ಚಿಕ್ಕದೇವರಾಜ ಒಡೆಯರ. ಮರಣ.**
5. ಮೊದಲನೇ ಆಂಗ್ಲೋ–ಮೈಸೂರು ಯುದ್ಧದ ಕಾಲಾವಧಿ – **1767 ರಿಂದ 1769**
6. ಮೊದಲನೇ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ–(ಎಪ್ರಿಲ್ 2019) **1769ರಲ್ಲಿ – ಮದ್ರಾಸ್ ಒಪ್ಪಂದ**
7. 2ನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ – **ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು.**
8. ಬ್ರಿಟಿಷರಿಂದ ಪೋರ್ಟೋನೋವೆ ಕದನದಲ್ಲಿ ಪರಾಭವಗೊಂಡವರು – **ಹೈದರಾಲಿ –1781ರಲ್ಲಿ**
9. ಹೈದರಾಲಿಯು ಅನಾರೋಗ್ಯದಿಂದ ಮೃತಪಟ್ಟ ವರ್ಷ – **1782.**
10. ಎರಡನೇ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ – **1784ರಲ್ಲಿ - ಮಂಗಳೂರು ಒಪ್ಪಂದ**
11. ಮೂರನೇ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಬ್ರಿಟಿಷ್ ಸೇನೆಯ ನೇತೃತ್ವವನ್ನು ವಹಿಸಿದವರು – **ಲಾರ್ಡ ಕಾರ್ನವಾಲಿಸ್.**
12. ಮೂರನೇ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ – **1792ರಲ್ಲಿ – ಶ್ರೀರಂಗಪಟ್ಟಣ ಒಪ್ಪಂದ.**
13. ಲಾರ್ಡ ವೆಲ್ಲಸ್ಲಿಯು ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದದ್ದು – **1798ರಲ್ಲಿ**
14. ಮರಾಠಿಯಲ್ಲಿ ವಾಘ್ ಎಂದರೆ ________ ಎಂದರ್ಥ. – **ಹುಲಿ.**
15. ಬ್ರಿಟಿಷ್ ಸೈನ್ಯ ದೊಂಡಿಯಾನನ್ನು ಹತ್ಯೆಗೈದ ಸ್ಥಳ – **ಕೋಣ್‌ಗಲ್.**
16. ಕಿತ್ತೂರು ಚೆನ್ನಮ್ಮನ ದತ್ತುಪುತ್ರ – **ಶಿವಲಿಂಗಪ್ಪ**
17. ಸಂಗೋಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ್ದು –**1831ರಲ್ಲಿ – ನಂದಗಡದಲ್ಲಿ**
18. ರೈತ ಬಂಡಾಯ ಎಂದು ಕರೆಯಲ್ಪಡುವುದು – **ಅಮರ ಸುಳ್ಯ ಬಂಡಾಯ.**
19. ಕೊಡಗಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ರಾಜಮನೆತನ – **ಹಾಲೇರಿ ಮನೆತನ**
20. ಬ್ರಿಟಿಷರು ಪದಚ್ಯುತಗೊಳಿಸಿದ ಕೊಡಗಿನ ರಾಜ – **ಹಾಲೇರಿ ಮನೆತನದ ಚಿಕ್ಕವೀರರಾಜೇಂದ್ರ**
21. ಸುರಪುರವು ಈಗಿನ ಈ ಜಿಲ್ಲೆಯಲ್ಲಿದೆ. – **ಯಾದಗಿರಿ ಜಿಲ್ಲೆ.**
22. ಸುರುಪುರದ ಬಂಡಾಯದ ನಾಯಕ – **ವೆಂಕಟಪ್ಪ ನಾಯಕ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಚಿಕ್ಕ ದೇವರಾಜ ಒಡೆಯರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ಹೇಗೆ ಪರಿಣಾಮ ಬೀರಿತು?**
ಉತ್ತರ : ಚಿಕ್ಕ ದೇವರಾಜ ಒಡೆಯರ ಮರಣದಿಂದಾಗಿ ಮೈಸೂರು ರಾಜ್ಯದಲ್ಲಿ ಉತ್ತರಾಧಿಕಾರದ ಸಮಸ್ಯೆ ಕಂಡು ಬಂದಿದ್ದರ ಜೊತೆಗೆ ಆಡಳಿತವು ಕುಸಿಯಿತು.

**2. 18ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ತಮ್ಮ ಅಸ್ತಿತ್ವ ಮತ್ತು ಮೇಲ್ಮೈ ಸಾಧನೆಗಾಗಿ ಯಾರ ಯಾರ ನಡುವೆ ಪೈಪೋಟಿ ಆರಂಭವಾಯಿತು?**
ಉತ್ತರ : 18ನೇ ಶತಮಾನದಲ್ಲಿ ಹೈದರಾಲಿ, ಮರಾಠರು, ಹೈದರಾಬಾದಿನ ನಿಜಾಮ ಮತ್ತು ಆರ್ಕಾಟಿನ ನವಾಬ ಮತ್ತು ಬ್ರಿಟಿಷರ ನಡುವೆ ತಮ್ಮ ಅಸ್ತಿತ್ವ ಮತ್ತು ಸಾಧನೆಗಾಗಿ ಪೈಪೋಟಿ ನಡೆದವು.

**3. ಹೈದರಾಲಿಯು ಹೇಗೆ ಪ್ರವರ್ಧಮಾನಕ್ಕೆ ಬಂದನು?**
ಉತ್ತರ : ಮೈಸೂರಿನ ಸೂಕ್ಷ್ಮ ಬೆಳವಣಿಗೆಗಳನ್ನು ಗಮನಿಸುತ್ತಿದ್ದ ಹೈದರಾಲಿಯು ದೇವನಹಳ್ಳಿ ಮುತ್ತಿಗೆ ಮತ್ತು ಆರ್ಕಾಟಿನ ನಿಜಾಮನ ವಿಷಯಕ್ಕೆ ಸಂಬಂಧಿಸಿದ ಸೈನಿಕ ಕಾರ್ಯಾಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು.

**4. ಬ್ರಿಟಿಷರು ಹೈದರಾಲಿಯೊಂದಿಗೆ ಮದ್ರಾಸ್ ಒಪ್ಪಂದ ಮಾಡಿಕೊಳ್ಳವುದು ಅನಿವಾರ್ಯವಾಯಿತು ಏಕೆ?**
ಉತ್ತರ : ಮೊದಲ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಹೈದರನ ಸೈನ್ಯ ಮದ್ರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು. ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ 1769ರಲ್ಲಿ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**5. ಪೋರ್ಟೋನೋವೆ ಯುದ್ಧದ ಪರಿಣಾಮವೇನು?**
ಉತ್ತರ : 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ಬ್ರಿಟಿಷರೊಂದಿಗೆ ನಡೆದ ಯುದ್ಧದಲ್ಲಿ ಹೈದರಾಲಿಯು ಪರಾಭವಗೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು. ಬ್ರಿಟಿಷರಲ್ಲಿ ಸ್ಥೈರ್ಯವನ್ನು ಹೆಚ್ಚಿಸಿತು.

**6. ಮೂರನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು?**

ಉತ್ತರ : ಮೂರನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ.

**7. ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಬಂಡೇಳಲು ಕಾರಣವೇನು?**

ಉತ್ತರ : ಕಿತ್ತೂರು ಚೆನ್ನಮ್ಮ ಬ್ರಿಟಿಷರು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವಿರೋಧಿಸಿ ಅವರ ವಿರುದ್ಧ ಬಂಡೆದ್ದಳು.

**8. ಶಿವಲಿಂಗರುದ್ರ ಸರ್ಜನಿಗೆ ಬ್ರಿಟಿಷರು ಕಿತ್ತೂರು ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ನೀಡಿದರು ಏಕೆ?**

ಉತ್ತರ : ಶಿವಲಿಂಗರುದ್ರ ಸರ್ಜನು ಮರಾಠರ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯವನ್ನು ನೀಡಿದ್ದನು. ಇದರಿಂದಾಗಿ ಬ್ರಿಟಿಷರು ಆ ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಆತನಿಗೆ ನೀಡಿದರು. ಪ್ರತಿಯಾಗಿ ವಾರ್ಷಿಕ ಕಾಣಿಕೆಯನ್ನು ಪಡೆದುಕೊಳ್ಳುತ್ತಿದ್ದರು.

**9. ಬ್ರಿಟಿಷರು ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಲು ಕಾರಣವೇನು?**

ಉತ್ತರ : ಬ್ರಿಟಿಷರು ರಾಯಣ್ಣನು ರಾಣಿ ಚೆನ್ನಮ್ಮಳ ಕುಮ್ಮಕ್ಕಿನಿಂದ ಸೈನಿಕ ಕಾರ್ಯಾಚರಣೆ ನಡೆಸುತ್ತಿದ್ದಾನೆ ಎಂದು ಭಾವಿಸಿದ್ದರು. ಹೀಗಾಗಿ ಚೆನ್ನಮ್ಮಳನ್ನು ಬೈಲಹೊಂಗಲದಿಂದ ಕುಸುಗಲ್ಲಿನ
ಸೆರೆಮನೆಗೆ ಸ್ಥಳಾಂತರಿಸಿದರು.

**10. ಅಮರ ಸುಳ್ಯದ ಬಂಡಾಯದ ಕೇದ್ರ ಸ್ಥಾನಗಳು ಯಾವುವು?**

ಉತ್ತರ : ಅಮರ ಸುಳ್ಯದ ಬಂಡಾಯದ ಕೇಂದ್ರ ಸ್ಥಾನಗಳೆಂದರೆ – ಸುಳ್ಯ, ಬೆಳ್ಳಾರೆ, ಪುತ್ತೂರು.

**11. ಕೊಡಗಿನಲ್ಲಿ ಸಶಸ್ತ್ರ ಬಂಡಾಯವನ್ನು ಸಂಘಟಿಸಿದವರು ಯಾರು? ಅಥವಾ ಕೊಡಗಿನಲ್ಲಿ ಸಶಸ್ತ್ರ ಬಂಡಾಯವೇಳಲು ಕಾರಣವೇನು?**

ಉತ್ತರ : ಬಿಟಿಷರು ಕೊಡಗಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಹಾಲೇರಿ ಮನೆತನದ ಚಿಕ್ಕವೀರರಾಜೇಂದ್ರನನ್ನು 1834ರಲ್ಲಿ ಪದಚ್ಯುತಗೊಳಿಸಿದರು. ಇದನ್ನು ಪ್ರತಿಭಟಿಸಿ ಕೊಡಗಿನಲ್ಲಿ ಸ್ವಾಮಿ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಎಂಬುವವರು ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು.

**12. 1842ರಲ್ಲಿ ಸುರುಪುರ ಸಂಸ್ಥಾನದ ಪೊಲಿಟಿಕಲ್ ಎಜೆಂಟ್ ಆಗಿ ನೇಮಕಗೊಂಡ ಬ್ರಿಟಿಷ್ ಅಧಿಕಾರಿ ಯಾರು?**

ಉತ್ತರ : 1842ರಲ್ಲಿ ಬ್ರಿಟಿಷರು ಮೆಡೋಸ್ ಟೇಲರ್ ಎಂಬುವವನನ್ನು ಸುರಪುರ ಸಂಸ್ಥಾನದಲ್ಲಿ ಪೊಲಿಟಿಕಲ್ ಎಜೆಂಟ್‌ನನ್ನಾಗಿ ನೇಮಿಸಿದರು.

**13. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದರು?**

ಉತ್ತರ : ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶದಿಂದ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ನಿರಾಕರಿಸಿ ಬ್ರಿಟಿಷರ ವಿರುದ್ಧವಾಗಿ ಸಿಡಿದೆದ್ದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣಗಳೇನು? (ಎಪ್ರಿಲ್ 2019)**

**ಉತ್ತರ : ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣಗಳೇಂದರೆ –**

- 1707ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ ಹೊಂದಿದ್ದು, ಮೊಘಲರ ರಾಜಕೀಯ ಸಾರ್ವಭೌಮತ್ವವನ್ನು ಕುಗ್ಗಿಸಿತು.
- ದಕ್ಷಿಣ ಭಾರತದ ಮೇಲೆ ಮೊಘಲರ ಹತೋಟಿ ತಪ್ಪಿತು.
- ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು ಆರಂಭಗೊಂಡವು.
- 1704ರ ಚಿಕ್ಕದೇವರಾಜ ಒಡೆಯರ ಮರಣ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿತು.
- ಮೈಸೂರಿನಲ್ಲಿ ಆಡಳಿತ ಕುಸಿಯಿತು.

**2. ಹೈದರಾಲಿಯು ಮೈಸೂರಿನಲ್ಲಿ ಹೇಗೆ ಪ್ರವರ್ಧಮಾನಕ್ಕೆ ಬಂದನು? ಅಥವಾ ಹೈದರಾಲಿ ಹೇಗೆ ಅಧಿಕಾರಕ್ಕೆ ಬಂದನು?**



**ಉತ್ತರ : ಮೈಸೂರಿನಲ್ಲಿ ಹೈದರಾಲಿಯ ಪ್ರಾಭಲ್ಯ –**

- ಹೈದರಾಲಿಯು ದೇವನಹಳ್ಳಿಯ ಮುತ್ತಿಗೆ ಸಂದರ್ಭ ಮತ್ತು ಆರ್ಕಾಟಿನ ನಿಜಾಮನ ವಿಷಯಕ್ಕೆ ಸಂಬಂಧಿಸಿದ ಸೈನಿಕ ಕಾರ್ಯಾಚರಣೆಯಲ್ಲಿ ಪ್ರವರ್ಧಮಾನಕ್ಕೆ ಬಂದನು.
- ಸೈನಿಕರನ್ನು ತನ್ನ ವಿಶ್ವಾಸಕ್ಕೆ ಪಡೆದುಕೊಳ್ಳುವಲ್ಲಿ ಸಫಲನಾದನು.
- ಶಸ್ತ್ರಾಸ್ತ್ರ ಉಪಯೋಗ ಮತ್ತು ಪ್ರಯೋಗದಲ್ಲಿ ಖ್ಯಾತಿಗಳಿಸಿದನು.
- ಚುರುಕಿನ ಕಾರ್ಯಾಚರಣೆಗಳ ಮೂಲಕ ದಳವಾಯಿಗಳ ಬಲ ಕುಂದಿಸಿದನು.
- ಅರಸನಾಗಿದ್ದ ಕೃಷ್ಣರಾಜ ಒಡೆಯರನ್ನು ಮೂಲೆಗುಂಪಾಗಿಸಿ ಅಧಿಕಾರದ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿದನು.
- ಹೈದರ್ ನವಾಬ್ ಹೈದರಾಲಿಖಾನ್ ಎಂದು ಹೆಸರಾದನು.

**3. ಮೊದಲನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೊದಲನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಮೊದಲನೇ ಮೈಸೂರು ಯುದ್ಧವು ಕ್ರಿಶ 1767 ರಿಂದ 1769ರವರೆಗೆ ನಡೆಯಿತು.
- ಹೈದರಾಲಿಯ ರಾಜಕೀಯ ಪ್ರಾಭಲ್ಯ ಬ್ರಿಟಿಷರು, ಹೈದರಾಬಾದ ನಿಜಾಮ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು.
- ಹೈದರಾಲಿಯನ್ನು ಮಣಿಸಲು ಬ್ರಿಟಿಷರು ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು.
- ಹೈದರಾಲಿಯು ಈ ಮೈತ್ರಿಕೂಟವನ್ನು ಬೇರ್ಪಡಿಸಿದನು.
- 1767ರಲ್ಲಿ ಹೈದರಾಲಿ ಮತ್ತು ನಿಜಾಮರು ಆರ್ಕಾಟಿಗೆ ಮುತ್ತಿಗೆ ಹಾಕಿದರು.
- 1769ರಲ್ಲಿ ಹೈದರಾಲಿಯ ಸೈನ್ಯ ಮದ್ರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು.
- ಬ್ರಿಟಿಷರು ಹೈದರಾಲಿಯೊಂದಿಗೆ 1769ರಲ್ಲಿ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು.

**4. ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು.
- ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು ಎರಡನೆಯ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣವಾಯಿತು.
- 1780ರಲ್ಲಿ ಎರಡನೆಯ ಆಂಗ್ಲೋ-ಮೈಸೂರು ಯುದ್ಧ ಆರಂಭವಾಯಿತು.
- ಹೈದರ್ ಕರ್ನಾಟಿಕ್ ಪ್ರಾಂತ್ಯದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು.
- 1781ರ ಪೋರ್ಟೋನೋವೆ ಎಂಬಲ್ಲಿ ನೆಡೆದ ಕದನದಲ್ಲಿ ಹೈದರ್ ಪರಾಭವಗೊಂಡನು.
- ಯುದ್ಧದ ಮಧ್ಯದಲ್ಲಿ 1782ರಲ್ಲಿ ಅನಾರೋಗ್ಯದಿಂದ ಮರಣಹೊಂದಿದನು.
- ಟಿಪ್ಪು ಯುದ್ಧವನ್ನು ಮುನ್ನೆಡೆಸಿದನು.
- ಟಿಪ್ಪ ಮಂಗಳೂರಿನತ್ತ ಮುನ್ನೆಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು.
- 1784ರಲ್ಲಿ 'ಮಂಗಳೂರು ಒಪ್ಪಂದ'ದ ಮೂಲಕ ಎರಡನೆಯ ಆಂಗ್ಲೋ-ಮೈಸೂರು ಯುದ್ಧ ಕೊನೆಗೊಂಡಿತು.

**5. ಬ್ರಿಟಿಷರ ಪ್ರಾಭಲ್ಯ ಕುಂದಿಸಲು ಟಿಪ್ಪು ಹೇಗೆ ಪ್ರಯತ್ನಿಸಿದನು? ಅಥವಾ ಬ್ರಿಟಿಷರಿಗೆ ಟಿಪ್ಪುವಿನ ಮೇಲೆ ದ್ವೇಷ ಭಾವನೆಗಳು ಮೂಡಲು ಕಾರಣಗಳೇನು?**

**ಉತ್ತರ :**



- ಬ್ರಿಟಿಷರನ್ನು ಶತ್ರುಗಳು ಎಂದು ಭಾವಿಸಿ ಟಿಪ್ಪು ಅವರನ್ನು ಓಡಿಸುವ ಗಂಭೀರ ಪ್ರಯತ್ನಗಳನ್ನು ಮಾಡಿದನು.
- ಬ್ರಿಟಿಷರಿಗೆ ವ್ಯಾಪಾರದಲ್ಲಿ ನಷ್ಟವಾದಲ್ಲಿ ಅದು ಅವರ ರಾಜಕೀಯ ಸ್ವಾಮ್ಯವನ್ನು ಕುಂದಿಸುತ್ತದೆ ಎಂದು ಅರಿತಿದ್ದನು.
- ಟಿಪ್ಪು ಬ್ರಿಟಿಷ್‌ರನ್ನು ವಿರೋಧಿಸುತ್ತಿದ್ದವರ ನೆರವನ್ನು ಅಪೇಕ್ಷಿಸಲು ಪ್ರಯತ್ನಿಸಿದನು.
- ಬ್ರಿಟಿಷರಿಗೆ ವ್ಯಾಪಾರದಲ್ಲಿ ಲಾಭವಾಗದಂತೆ ನೋಡಿಕೊಳ್ಳುವ ಪ್ರಯತ್ನಗಳನ್ನು ನಡೆಸಿದನು.
- ಇವು ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ಮತ್ತಷ್ಟು ದ್ವೇಷ ಭಾವನೆಗಳನ್ನು ಮೂಡಿಸಿದವು.

**6. ಮೂರನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ಮೂರನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಈ ಯುದ್ಧಕ್ಕೆ ನೇರ ಕಾರಣ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ್ದು.
- ಲಾರ್ಡ್ ಕಾರ್ನವಾಲಿಸ್‌ನು ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡು ಯುದ್ಧದ ಗತಿಯನ್ನು ಬದಲಾಯಿಸಿದನು.
- ಬ್ರಿಟಿಷರು ಹೈದರಬಾದಿನ ನಿಜಾಮ ಮತ್ತು ಮರಾಠರ ಸಹಾಯದಿಂದ ಟಿಪ್ಪುವಿನ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡರು.
- 1792ರಲ್ಲಿ ಸಂಘಟಿತ ಸೈನ್ಯ ಒಂದೊಂದಾಗಿ ಕೋಟೆಗಳನ್ನು ವಶಪಡಿಸಿಕೊಂಡು ಶ್ರೀರಂಗಪಟ್ಟಣದ ಕಡೆ ಸಾಗಿತು.
- ರಾತ್ರಿ ವೇಳೆ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಲಾಯಿತು.
- ಟಿಪ್ಪು 1792 ರಲ್ಲಿ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮೂರನೆ ಆಂಗ್ಲೊ-ಮೈಸೂರು ಯುದ್ಧ ಕೊನೆಗೊಂಡಿತು.

**7. ಶ್ರೀರಂಗಪಟ್ಟಣದ ಒಪ್ಪಂದದ ಷರತ್ತುಗಳೇನು?**

**ಉತ್ತರ : ಟಿಪ್ಪುವನ್ನು ಮಣಿಸಲು ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಅಸಮಾನ ಷರತ್ತುಗಳು ಇರುವಂತೆ ನೋಡಿಕೊಂಡರು. ಆ ಷರತ್ತುಗಳೆಂದರೆ –**

- ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು.
- ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಭರ್ತಿಯಾಗಿ ಕೊಡುವುದು.
- ಯುದ್ಧನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು.
- ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆ ಮಾಡುವುದು.

**8. ನಾಲ್ಕನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**

**ಉತ್ತರ : ನಾಲ್ಕನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳು –**

- ಟಿಪ್ಪು ಫ್ರೆಂಚರ ಸಹಕಾರ ಪಡೆಯಲು ರಾಯಭಾರಿಗಳನ್ನು ಕಳುಹಿಸಿದ್ದನು.
- ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಬ್ರಿಟಿಷರನ್ನು ಕೆರಳಿಸಿತು.
- ಸಹಾಯಕ ಸೈನ್ಯ ಪದ್ಧತಿಯನ್ನು ವೆಲ್ಲಸ್ಲಿಯು ಟಿಪ್ಪುವಿನ ಮೇಲೆ ಹೇರಿದನು.
- ಟಿಪ್ಪು ಈ ಒಪ್ಪಂದವನ್ನು ಒಪ್ಪಿಕೊಳ್ಳಲು ನಿರಾಕರಿಸಿದನು.
- ಇದು ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಯಿತು.
- 1799 ರಲ್ಲಿ ಯುದ್ಧ ಆರಂಭವಾಯಿತು.
- ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ್ತ ಹೋರಾಡಿ 1799ರಲ್ಲಿ ಹತನಾದನು.
- ಬ್ರಿಟಿಷರು ಟಿಪ್ಪುವಿನ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.

**9. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ವಿಮರ್ಶಿಸಿ.**


**ಉತ್ತರ : ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಹೇಗೆಂದರೆ –**

- ನಾಲ್ಕನೇ ಮೈಸೂರು ಯುದ್ಧವು 1799ರಲ್ಲಿ ಆರಂಭವಾಯಿತು.
- ಟಿಪ್ಪು ತನ್ನ ಸೈನ್ಯವನ್ನು ಹುರುದುಂಬಿಸುತ್ತ ಹೋರಾಟಿ ಹತನಾದನು.
- ಆತನ ಮರಣ ಬ್ರಿಟಿಷರಿಗೆ ಇಡೀ ಭಾರತವೇ ತಮ್ಮ ಕೈವಶವಾದ ಸಂತೋಷವನ್ನು ತಂದಿತು.
- ಬ್ರಿಟಿಷರು ಟಿಪ್ಪುವಿನ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.
- ಒಂದು ಸಣ್ಣ ಭೌಗೋಳಿಕ ಪ್ರದೇಶವು ಮೈಸೂರು ಒಡೆಯರಿಗೆ ವರ್ಗಾಹಿಸಲಾಯಿತು.
- ಬ್ರಿಟಿಷರನ್ನು ಈ ಯುದ್ಧವು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು.

**10. ಕಿತ್ತೂರು ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಬಂಡಾಯವೇಳಲು ಕಾರಣವೇನು? ಅದರ ಪರಿಣಾಮವೇನು? ಅಥವಾ**

**ಕಿತ್ತೂರು ರಾಣಿ ಚೆನ್ನಮ್ಮಳಿಗೆ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವಾಗಿತ್ತು ಏಕೆ?**

**ಉತ್ತರ : ಕಿತ್ತೂರು ಚೆನ್ನಮ್ಮಳು ಬ್ರಿಟಿಷರ ವಿರುದ್ಧ ಬಂಡಾಯವೇಳಲು ಕಾರಣ –**



- ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು.
- ಥ್ಯಾಕರೆಯು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.
- ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.
- ಕಿತ್ತೂರಿನ ಸೈನ್ಯ ಚೆನ್ನಮ್ಮಳ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ದಾಳಿ ಮಾಡಿತು.
- ಥ್ಯಾಕರೆ ಗುಂಡೇಟಿಗೆ ಬಲಿಯಾದ.
- ಕಿತ್ತೂರನ್ನು ವಶಪಡಿಸಿಕೊಳ್ಳಲು ಲೆಫ್ಟಿನೆಂಟ್ ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು.
- ಬ್ರಿಟಿಷರ ಸೈನ್ಯ ಚೆನ್ನಮ್ಮನನ್ನು ಸೆರೆಹಿಡಿದು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು.
- ಚೆನ್ನಮ್ಮ ಸೆರೆಮನೆಯಲ್ಲೇ ಮರಣ ಹೊಂದಿದಳು.

**11. ದೊಂಡಿಯ ವಾಘ ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.**

**ಉತ್ತರ :**

- ದೊಂಡಿಯ ವಾಘ ಬ್ರಿಟಿಷರ ವಿರುದ್ಧ ಸೈನಿಕ ಕಾರ್ಯಾಚರಣೆಯನ್ನು ಪ್ರಾರಂಭಿಸಿದನು.
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆಗಳನ್ನು ವಶಪಡಿಸಿಕೊಂಡನು.
- ಲಾರ್ಡ್ ವೆಲ್ಲಸ್ಲಿ ವಾಘನ ಬಂಡಾಯವನ್ನು ಹತ್ತಿಕ್ಕಲು ಪ್ರಾರಂಭಿಸಿದನು.
- ದೊಂಡಿಯಾನ ನಿಯಂತ್ರಣದಲ್ಲಿದ್ದ ಶಿವಮೊಗ್ಗ, ಹೊನ್ನಾಳಿ, ಹರಿಹರ ಮೇಲೆ ಬ್ರಿಟಿಷ್ ಸೇನೆ ಆಕ್ರಮಣ ನಡೆಸಿತು.
- ದೊಂಡಿಯಾನನ್ನು ಕೊನೆಗಾಣಿಸಲು ದೇಶಿಯ ರಾಜರ ಸಹಾಯವನ್ನು ಬ್ರಿಟಿಷರು ಕೋರಿದರು.
- ಎಲ್ಲಾ ದಿಕ್ಕುಗಳಿಂದಲೂ ಆತನನ್ನು ಬ್ರಿಟಿಷ್ ಸೈನ್ಯ ಸುತ್ತುವರೆಯಿತು.
- ದೊಂಡಿಯಾನನ್ನು ಬ್ರಿಟಿಷರು ಕೋನ್‌ಗಲ್ ಎಂಬ ಸ್ಥಳದಲ್ಲಿ ಹತ್ಯೆಗೈದರು.

**12. ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನು ಹೋರಾಡಿದ ಕ್ರಮವನ್ನು ವಿವರಿಸಿ.**

**ಉತ್ತರ : ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರ**



- ರಾಯಣ್ಣನು ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆ ಹೋರಾಡಿದ್ದನು.
- ಸೈನಿಕರನ್ನು ಸಂಘಟಿಸುತ್ತ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು.
- ಬ್ರಿಟಿಷರ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡಿದನು.
- ನಂದಗಡ, ಖಾನಾಪುರ & ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ಅಮಲ್ದಾರ ಕೃಷ್ಣರಾಯನ ಸಹಾಯದಿಂದ ರಾಯಣ್ಣನನ್ನು ಬಂಧಿಸಿ ಧಾರವಾಡಕ್ಕೆ ತಂದರು.
- ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು.

**13. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ.**

**ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರ –**

- ಕೊಡಗಿನ ಪ್ರಾಂತ್ಯದಲ್ಲಿ ಪುಟ್ಟಬಸಪ್ಪನು ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು.
- ಬೆಳ್ಳಾರೆಯಲ್ಲಿ ಸರ್ಕಾರಿ ಅಧಿಕಾರಿಗಳನ್ನು ಬಂಧಿಸಿದ್ದು ಬಂಡಾಯದ ಪ್ರಥಮ ಹೆಜ್ಜೆಯಾಗಿದೆ.
- ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನೊರ್ವನ ಹತ್ಯೆ ಪುಟ್ಟಬಸಪ್ಪನ ಜನಪ್ರಿಯತೆಯನ್ನು ಹೆಚ್ಚಿಸಿತು.
- ಹೋರಾಟಗಾರರು ಪಾಣೆಮಂಗಳೂರು & ಬಂಟ್ವಾಳದಲ್ಲಿ ಕಾರ್ಯಾಚರಣೆಗಳನ್ನು ನಡೆಸಿದರು.
- ಬ್ರಿಟಿಷರು ಕಣ್ಣಾನೂರು, ತಲ್ಲಿಚೇರಿ ಮತ್ತು ಬಾಂಬೆಯ ಸೈನ್ಯವನ್ನು ತರಿಸಿದರು.
- ಪುಟ್ಟಬಸಪ್ಪ ಮತ್ತು ಆತನ ಸಂಗಡಿಗರು ಸುಳ್ಯಕ್ಕೆ ಪಲಾಯನ ಮಾಡಿದರು.
- ಬ್ರಿಟಿಷ್ ಸೈನ್ಯ ಕೊಡಗಿನಲ್ಲಿ ಸ್ಥಳೀಯರ ಸಹಕಾರದಿಂದ ಪುಟ್ಟಬಸಪ್ಪ ಮತ್ತು ಆತನ ಸಹಚರರನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು.

**14. ಅಮರ ಸುಳ್ಯ ಬಂಡಾಯಕ್ಕೆ ಕಾರಣಗಳೇನು?**

**ಉತ್ತರ : ಅಮರ ಸುಳ್ಯ ಬಂಡಾಯಕ್ಕೆ ಕಾರಣಗಳು –**

- ಕೊಡಗಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಹಾಲೇರಿ ರಾಜವಂಶದ ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಗಡಿಪಾರು ಮಾಡಿದರು.
- ಆತನ ಪದಚ್ಯುತಿ ಕೊಡಗಿನಲ್ಲಿ ರಾಜಕೀಯ ಅಸಮಾಧಾನವನ್ನು ಸೃಷ್ಟಿಸಿತು.
- ಕೊಡಗಿನಲ್ಲಿ ಸ್ವಾಮಿ ಅಪರಾಂಪರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು.
- ಸ್ವಾಮಿ ಅಪರಾಂಪರ ಬಂಡಾಯದ ಮುಖಂಡನಾದನು.
- ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರುಗಳು 'ಅಮರಸುಳ್ಯ' ಬಂಡಾಯದ ಕೇಂದ್ರ ಸ್ಥಾನಗಳಾದವು.

**15. ಮೆಡೋಸ್ ಟೇಲರ್ ಸುರಪುರ ಸಂಸ್ಥಾನವನ್ನು ಹೇಗೆ ಅಭಿವೃದ್ಧಿಪಡಿಸಿದನು?**

ಉತ್ತರ :

- ಮೆಡೋಸ್ ಟೇಲರ್ ಸುಧಾರಣವಾದಿಯಾಗಿದ್ದನು.
- ಸುರುಪುರ ಸಂಸ್ಥಾನವನ್ನು ಅಭಿವೃದ್ಧಿಪಡಿಸಿದನು.
- ಪೆದ್ದನಾಯಕನನ್ನು ಸಂಸ್ಥಾನದ ದಿನಾನನ್ನಾಗಿ ನೇಮಿಸಿದನು.
- ಸಂಸ್ಥಾನದಾದ್ಯಂತ ಭೂಸಮೀಕ್ಷೆಯನ್ನು ನಡೆಸಿದನು.
- ಸಂಸ್ಥಾನದ ಆದಾಯ ಹೆಚ್ಚಿಸಲು ಈತನು ಅನುಸರಿಸಿದ ನೀತಿಗಳೇ ಕಾರಣಗಳಾಗಿವೆ.
- ವೆಂಕಟಪ್ಪ ನಾಯಕನಿಗೆ ಸೂಕ್ತವಾದ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟನು.

**16. ಆಂಗ್ಲರ ವಿರುದ್ಧದ ಸುರಪುರದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಸುರಪುರದ ದಂಗೆ –**

- 1853ರಲ್ಲಿ ವೆಂಕಟಪ್ಪನಾಯಕ ಸುರಪರದಲ್ಲಿ ಅಧಿಕಾರಕ್ಕೆ ಬಂದನು.
- 1857ರ ಹೋರಾಟದಲ್ಲಿ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡುಬಂದಿತು.
- ಬ್ರಿಟಿಷರು ರಾಜನ ಆಡಳಿತದ ಬಗ್ಗೆ ವರದಿ ನೀಡಲು ಬ್ರಿಟಿಷ್ ಸರ್ಕಾರ ಕ್ಯಾಂಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಿತು.
- ಇವನು ರಾಜನು ಆಡಳಿತ ದುರ್ವ್ಯವಹಾರದಲ್ಲಿ ನಿರತನಾಗಿದ್ದಾನೆ ಎಂಬ ಅಂಶವನ್ನು ವರದಿಯಲ್ಲಿ ಕಾಣಿಸಿ ಹೈದರಾಬಾದ ರೆಸಿಡೆಂಟ್‌ಗೆ ಸಲ್ಲಿಸಿದನು.
- 1858ರಲ್ಲಿ ಬ್ರಿಟಿಷ್ ಸೈನ್ಯ ಸುರಪುರವನ್ನು ಆಕ್ರಮಿಸಿತು.
- ಯುದ್ಧ ಮುಂದುವರೆಯಿತು. ಬ್ರಿಟಿಷರು ಸುರಪುರ ಕೋಟೆಯನ್ನು ವಶಪಡಿಸಿಕೊಂಡರು.

**17. ಕೊಪ್ಪಳದ ವೀರಪ್ಪನು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದನು?**

**ಉತ್ತರ :**

- ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ಕೊಪ್ಪಳದ ಜಮಿನ್ದಾರ ವೀರಪ್ಪನು ಬಂಡೆದ್ದನು.
- ಕೊಪ್ಪಳ ಮತ್ತು ಸನಿಹದ ಕೋಟೆಗಳನ್ನು ತನ್ನ ಸುಪರ್ದಿಗೆ ವಹಿಸಿಕೊಂಡನು.
- ವೀರಪ್ಪನಿಗೆ ರೈತರು ಮತ್ತು ಜಮೀನ್ದಾರರು ಕೈ ಜೋಡಿಸಿದರು.
- ಬ್ರಿಟಿಷರು ವೀರಪ್ಪನ ಬಂಡಾಯವನ್ನು ಸದೆಬಡಿಯಲು ಸೈನ್ಯವನ್ನು ನಿಯೋಜಿಸಿದರು.

➢ ವೀರಪ್ಪ ಸತತವಾಗಿ ಹೋರಾಟವನ್ನು ನಡೆಸಿ ಮರಣ ಹೊಂದಿದನು.

**18. ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.**

**ಉತ್ತರ : ಹಲಗಲಿಯ ಬೇಡರ ದಂಗೆ –**

- ➢ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ.
- ➢ ಬ್ರಿಟಿಷರು ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು.
- ➢ ಹಲಗಲಿಯ ಬೇಡರು ಬೇಟೆಯಾಡುವ ಉದ್ದೇಶಕ್ಕೆ ಬಳಸುತ್ತಿದ್ದ ಬಂದುಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ.
- ➢ ಬೇಡರು ತಮ್ಮ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು.
- ➢ ಬಂಡಾಯವನ್ನು ಹತ್ತಿಕ್ಕಲು ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು.
- ➢ ಬೇಡರನ್ನು ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು.
- ➢ ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು.

## ಅಧ್ಯಾಯ – 5

## <u>ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು</u>

### ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು

1. ಭಾರತೀಯ ಇತಿಹಾಸದಲ್ಲಿ ಈ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. – **19ನೇ ಶತಮಾನ.**
2. ಸತಿ ಪದ್ಧತಿಯನ್ನು ನಿಷೇಧಿಸಿದ ಬ್ರಿಟಿಷ್ ಗವರ್ನರ್– ಲಾರ್ಡ ವಿಲಿಯಂ ಬೆಂಟಿಂಕ್– **1829ರಲ್ಲಿ**
3. ಆಧುನಿಕ ಕಾಲ ಘಟ್ಟದಲ್ಲಿ ಭಾರತದಲ್ಲಿ ಸಮಾಜ ಸುಧಾರಣೆಗೆ ಚಾಲನೆಯನ್ನು ನೀಡಿದವರು. – **ರಾಜಾ ರಾಮಮೋಹನರಾಯರು.**
4. ರಾಜಾರಾಮ ಮೋಹನರಾಯರು **ಹಿಬ್ರೂ & ಗ್ರೀಕ್** ಭಾಷೆಗಳನ್ನು ಕಲಿಯಲು ಕಾರಣ. **–ಬೈಬಲನ್ನು ಮೂಲದಲ್ಲಿ ಅರ್ಥಮಾಡಿಕೊಳ್ಳಲು**
5. ಬ್ರಹ್ಮ ಸಮಾಜದ ಸ್ಥಾಪಕರು – **ರಾಜಾ ರಾಮಮೋಹನರಾಯರು – 1828ರಲ್ಲಿ.**
6. ರಾಜಾರಾಮ ಮೋಹನರಾಯರ ಪ್ರಯತ್ನದ ಫಲವಾಗಿ **ಸತಿಪದ್ಧತಿಯನ್ನು** ನಿಷೇಧಿಸಿದವರು – **ಲಾರ್ಡ ವಿಲಿಯಂ ಬೆಂಟಿಂಕ್ – 1829ರಲ್ಲಿ**
7. ರಾಜಾ ರಾಮಮೋಹನರಾಯರು ಬಂಗಾಳಿ ಭಾಷೆಯಲ್ಲಿ ಆರಂಭಿಸಿದ ಪತ್ರಿಕೆ – **ಸಂವಾದ ಕೌಮುದಿ.**
8. ರಾಜಾ ರಾಮಮೋಹನರಾಯರು ಬಂಗಾಳಿ ಭಾಷೆಯಲ್ಲಿ **ಸಂವಾದ ಕೌಮುದಿ** ಪತ್ರಿಕೆಯನ್ನು ಆರಂಭಿಸಿದ ಉದ್ದೇಶ – **ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು.**
9. ಯುವಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು – **ಹೆನ್ರಿ ವಿವಿಯನ್ ಡಿರೋಜಿಯೋ.**
10. ಹೆನ್ರಿ ವಿವಿಯನ್ ಡಿರೋಜಿಯೋ ಹುಟ್ಟು ಹಾಕಿದ ಚರ್ಚಾವೇದಿಕೆ – **ಅಕಾಡೆಮಿಕ್ ಅಸೋಸಿಯೇಷನ್ – 1828ರಲ್ಲಿ**
11. ಹೆನ್ರಿ ವಿವಿಯನ್ ಡಿರೋಜಿಯೋ 22ನೇ ವಯಸ್ಸಿನಲ್ಲಿ ಕಾಲರಾ ರೋಗಕ್ಕೆ ತುತ್ತಾದುದು– **1831ರಲ್ಲಿ**
12. ದಯಾನಂದ ಸರಸ್ವತಿಯವರ ಮೂಲ ಹೆಸರು – **'ಮೂಲಶಂಕರ'**
13. ದಯಾನಂದ ಸರಸ್ವತಿಯವರ ಜನನ – **ಗುಜರಾತಿನ ಕಾಥೇವಾಡ – 1824ರಲ್ಲಿ.**
14. ದಯಾನಂದ ಸರಸ್ವತಿಯವರು ರಚಿಸಿದ ಗ್ರಂಥ – **ಸತ್ಯಾರ್ಥ ಪ್ರಕಾಶ.**
15. 1877ರಲ್ಲಿ ಆರ್ಯ ಸಮಾಜದ ಕೇಂದ್ರ ಕಛೇರಿಯನ್ನು ತೆರೆದ ಸ್ಥಳ – **ಲಾಹೋರ**
16. ವೇದಗಳಿಗೆ ಮರಳಿ ಎಂದು ಕರೆಕೊಟ್ಟವರು – **ದಯಾನಂದ ಸರಸ್ವತಿ.**
17. ದಯಾನಂದ ಸರಸ್ವತಿಯವರು ಗೋವುಗಳ ರಕ್ಷಣೆಗಾಗಿ ಸ್ಥಾಪಿಸಿದ ಸಂಘ – **ಗೋ ರಕ್ಷಣಾ ಸಂಘ.**
18. ದಯಾನಂದ ಆಂಗ್ಲೋ–ವೈದಿಕ ಕಾಲೇಜು ಸ್ಥಾಪನೆಯಾದ ವರ್ಷ – **1886**
19. ಭಾರತೀಯ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಆರ್ಯ ಸಮಾಜದ ತತ್ವಗಳಿಂದ ಪ್ರೇರಣೆ ಪಡೆದವರು – **ಲಾಲಾ ಲಜಪತ್‌ರಾಯ್.**
20. ಶುದ್ಧಿ ಚಳುವಳಿಯನ್ನು ಆರಂಭಿಸಿದ್ದು – **ದಯಾನಂದ ಸರಸ್ವತಿ. – ಅರ್ಯ ಸಮಾಜ.**
21. ರಾನಡೆಯವರು ಜನಪ್ರಿಯಗೊಳಿಸಿದ ಸಮಾಜ – **ಪ್ರಾರ್ಥನಾ ಸಮಾಜ.**
22. ಸತ್ಯಶೋಧಕ ಸಮಾಜದ ಸ್ಥಾಪಕರು – **ಜ್ಯೋತಿಭಾ ಫುಲೆ – 1773ರಲ್ಲಿ**
23. ಬಾಬಾಸಾಹೇಬ ಅಂಬೇಡ್ಕರ್ **ಇವರ** ಆಶಯಗಳಿಂದ ಪ್ರೇರಣೆ ಪಡೆದರು.– **ಜ್ಯೋತಿ ಬಾ ಫುಲೆ**
24. ಮಹಮಡನ್ ಲಿಬರ್ಟಿ ಚಳುವಳಿಯು ಆರಂಭವಾದ ವರ್ಷ – **1863.**
25. ಕಾಲ ಬದಲಾದಂತೆ ಧರ್ಮವನ್ನು ಅರ್ಥೈಸಿಕೊಳ್ಳುವ ಮತ್ತು ಪರಿಭಾವಿಸುವ ರೀತಿಯೂ ಬದಲಾಗಬೇಕು, ಇಲ್ಲದಿದ್ದರೆ ಧರ್ಮವೂ ಜಡವಾಗುತ್ತದೆ ಎಂದು ಹೇಳಿದವರು – **ಸರ್ ಸೈಯದ್ ಅಹಮ್ಮದ ಖಾನರು**
26. ಮಹಮ್ಮದನ್ ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಆರಂಭಿಸಿದವರು – **ಸರ್ ಸೈಯದ್ ಅಹಮ್ಮದ ಖಾನರು – 1875ರಲ್ಲಿ**
27. ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾದ ಕಾಲೇಜು – **ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜು.**
28. ಅಲಿಘರ್ ಚಳುವಳಿಯನ್ನು ಹುಟ್ಟು ಹಾಕಿದವರು **–ಸರ್ ಸೈಯದ್ ಅಹಮ್ಮದ ಖಾನ**
29. ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು. ಇಲ್ಲದಿದ್ದರೆ ಅದು ಧರ್ಮವೇ ಅಲ್ಲ ಎಂದು ಸಾರಿದವರು – **ಸ್ವಾಮಿ ವಿವೇಕಾನಂದರು.**
30. ಯಾರ ಆತ್ಮ ಬಡವರಿಗಾಗಿ ಮಿಡಿಯುವದೋ ಅವನು ಮಹಾತ್ಮ. ಇಲ್ಲದಿದ್ದರೆ ಅವನು ದುರಾತ್ಮ ಎಂದು ಹೇಳಿದವರು – **ಸ್ವಾಮಿ ವಿವೇಕಾನಂದರು**
31. ವಿವೇಕಾನಂದರು ವಿಶ್ವಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದು – **1893, ಅಮೇರಿಕಾದ ಚಿಕಾಗೋ.ನಗರ**
32. ಸ್ವಾಮಿ ವಿವೇಕಾನಂದರ ಸಲಹೆಯಂತೆ ಅಸ್ಪೃಶ್ಯ ವರ್ಗದ ಮಕ್ಕಳಿಗೆ ಶಾಲೆಗಳನ್ನು ಪ್ರಾರಂಭಿಸಿದ ಮೈಸೂರು ಒಡೆಯರು – **ಹತ್ತನೇ ಚಾಮರಾಜ ಒಡೆಯರು.**
33. ಐರಿಶ್ ಮಹಿಳೆ ಅನಿಬೆಸೆಂಟರು ಭಾರತಕ್ಕೆ ಬಂದದ್ದು – **1893ರಲ್ಲಿ**
34. ಐಹಿಕ ಸಂಪತ್ತಿನ ಮೇಲೆ ನಿಂತಿರುವ ಪಶ್ಚಿಮದ ಸಂಸ್ಕೃತಿಗಿಂತ ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತ ಸಂಸ್ಕೃತಿ ಶ್ರೇಷ್ಠವಾದ್ದೆಂದು ಪ್ರತಿಪಾದಿಸಿದವರು **–ಅನಿಬೆಸೆಂಟ್.**
35. ಅನಿಬೆಸೆಂಟರನ್ನು ಶ್ವೇತ ಸರಸ್ವತಿ ಎಂದು ಕರೆಯಲು ಕಾರಣ – **'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದಿಸಿದ್ದರಿಂದ.**
36. ಅನಿಬೆಸೆಂಟರು 1898ರಲ್ಲಿ ಬನಾರಸ್‌ನಲ್ಲಿ ಪ್ರಾರಂಭಿಸಿದ ಕಾಲೇಜು – **ಸೆಂಟ್ರಲ್ ಹಿಂದೂ ಕಾಲೇಜು.**
37. ಅನಿಬೆಸೆಂಟರು ಪ್ರಾರಂಭಿಸಿದ ಸೆಂಟ್ರಲ್ ಹಿಂದೂ ಕಾಲೇಜು ಇವರ ಪ್ರಯತ್ನದ ಫಲವಾಗಿ 1916ರಲ್ಲಿ ಹಿಂದೂ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಯಿತು.– **ಮದನಮೋಹನ ಮಾಳವೀಯ.**
38. ಹೋಮ್ ರೂಲ್‌ಲೀಗ್‌ನ್ನು ಪ್ರಾರಂಭಿಸಿದವರು – **ಅನಿಬೆಸೆಂಟ್ – 1916ರಲ್ಲಿ**
39. 'ನ್ಯೂ ಇಂಡಿಯಾ' ವೃತ್ತ ಪತ್ರಿಕೆಯನ್ನು ಆರಂಭಿಸಿದವರು – **ಅನಿಬೆಸೆಂಟ್ (ಎಪ್ರಿಲ್ 2019)**
40. ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ – **ಅನಿಬೆಸೆಂಟ್.**
41. ಶ್ರೀ ನಾರಾಯಣಗುರು ಅವರು **1903**ರಲ್ಲಿ ಆರಂಭಿಸಿದ ಸುಧಾರಣಾ ಸಂಘಟನೆ– **ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ.**
42. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಚಳುವಳಿಯನ್ನು ಮುನ್ನೆಡಿಸಿದವರು – **ಡಾ : ಪಲ್ಪು ಮತ್ತು ಕುಮಾರನ್ ಆಸನ್**
43. 'ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು ಇವರ ಆಶಯ. – **ಶ್ರೀ ನಾರಾಯಣಗುರು.**
44. ಮನುಷ್ಯ ಘನತೆಯಿಂದ ಬದುಕುವ ಸಮಾಜವನ್ನು ನಿರ್ಮಾಣ ಮಾಡುವ ಉದ್ದೇಶವನ್ನು ಹೊಂದಿದ ಸಂಘಟನೆ – **ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ.**
45. 1924ರಲ್ಲಿ ವೈಕಂ ಸತ್ಯಾಗ್ರಹವನ್ನು ಆರಂಭಿಸಿದವರು – **ಶ್ರೀ ನಾರಾಯಣಗುರು.**
46. ವೈಕಂ ಸತ್ಯಾಗ್ರಹ ಎಂಬುದು – **ದೇವಾಲಯ ಪ್ರವೇಶ ಚಳುವಳಿ**
47. ಬ್ರಾಹ್ಮಣೇತರ ಚಳುವಳಿಯನ್ನು ಮುನ್ನೆಡಿಸಿದ್ದು – **ಜಸ್ಟೀಸ್ ಪಾರ್ಟಿ.**
48. **ತಮಿಳುನಾಡಿನಲ್ಲಿ** ಜಸ್ಟೀಸ್ ಪಾರ್ಟಿ ಪ್ರಾರಂಭವಾದದ್ದು – **1916**ರಲ್ಲಿ.
49. ಆತ್ಮಗೌರವ ಚಳುವಳಿಯನ್ನು ಆರಂಭಿಸಿದವರು – **ಇ ವಿ ರಾಮಸ್ವಾಮಿ ನಾಯ್ಕರ್.**
50. ಸೆಲ್ಫ್ ರೆಸ್ಪೆಕ್ಟ್ ಲೀಗ್‌ನ್ನು ಆರಂಭಿಸಿದವರು – **ಇ ವಿ ರಾಮಸ್ವಾಮಿ ನಾಯ್ಕರ್ –1926ರಲ್ಲಿ**
51. ಪರಿಯಾರ್‌ರವರು ದ್ರಾವಿಡ ಭಾಷೆಯೆಂದು ಕರೆದದ್ದು – **ತಮಿಳು ಭಾಷೆಯನ್ನು**
52. ಪರಿಯಾರ್‌ರವರು ರಾಮಾಯಣ ಮಹಾಕಾವ್ಯದಲ್ಲಿ ದ್ರಾವಿಡರ ನಾಯಕನೆಂದು ಬಿಂಬಿಸಿದ್ದು – **ರಾವಣ**
53. ಇ ವಿ ರಾಮಸ್ವಾಮಿ ನಾಯ್ಕರ್‌ರವರನ್ನು ಜನ ಪ್ರೀತಿಯಿಂದ ಹೀಗೆ ಎಂದು ಕರೆದರು. **– ಪರಿಯಾರ್ (ಹಿರಿಯರು)**
54. ತಮಿಳುನಾಡಿನಲ್ಲಿ ದ್ರಾವಿಡ ಚಳುವಳಿಯನ್ನು ಹುಟ್ಟುಹಾಕಿದವರು– **ಇ.ವಿ.ರಾಮಸ್ವಾಮಿ ನಾಯ್ಕರ್.**
55. ಪರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆ – **ದ್ರಾವಿಡ ಕಳಗಂ.**
56. ಪರಿಯಾರ್‌ರವರು ಆರಂಭಿಸದ ಪತ್ರಿಕೆ – **ಜಸ್ಟೀಸ್ ಪತ್ರಿಕೆ.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಸಾಮಾಜಿಕ ಸುಧಾರಣೆ ಎಂದರೇನು?**

ಉತ್ತರ : ಮೇಲು ಕೀಳೆಂಬ ಬೇಧಭಾವಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿ ಮೌಢ್ಯಮುಕ್ತ ಸಮಾಜದ ಕಡೆಗೆ ಕೊಂಡೊಯ್ಯುವ ಪ್ರಯತ್ನವೇ ಸಮಾಜ ಸುಧಾರಣೆಯಾಗಿದೆ.

**2. 'ಬಿಳಿಯನ ಮೇಲಿನ ಹೊರೆ ಸಿದ್ದಾಂತ ಎಂದರೇನು? ಅಥವಾ**

**ಬ್ರಿಟಿಷರು ಬಿಳಿಯನ ಮೇಲಿನ ಹೊರೆ ಸಿದ್ಧಾಂತವನ್ನು ಪ್ರಚಾರ ಮಾಡಿದರು. ಏಕೆ?**

ಉತ್ತರ : ಬ್ರಿಟಿಷರು ಭಾರತೀಯ ಸಮಾಜ ಸುಧಾರಣೆಯಲ್ಲಿ ಆಸಕ್ತಿಯನ್ನು ತಳೆದರು. ತಮ್ಮನ್ನು ನಾಗರಿಕರು ಎಂದು ಚಿತ್ರಿಸಿಕೊಳ್ಳುತ್ತ ತಾವು ಇಲ್ಲಿಗೆ ಬಂದಿರುವುದೇ ಭಾರತೀಯರನ್ನು ನಾಗರಿಕರನ್ನಾಗಿ ಮಾಡಲು ಎನ್ನುವ 'ಬಿಳಿಯನ ಮೇಲಿನ ಹೊರೆ' ಸಿದ್ಧಾಂತವನ್ನು ಪ್ರಚುರಪಡಿಸಿದರು.

**3. 19ನೇ ಶತಮಾನದ ಕಾಲಘಟ್ಟದ ಸುಧಾರಣೆಯ ಪ್ರಮುಖ ಲಕ್ಷಣವೇನು?**

ಉತ್ತರ : 19ನೇ ಶತಮಾನದ ಕಾಲಘಟ್ಟದ ಸುಧಾರಣೆಯ ಪ್ರಮುಖ ಲಕ್ಷಣವೇಂದರೆ – ಸಮಾಜಕ್ಕೆ ಹಾನಿಕಾರಕವಾದ ಪದ್ಧತಿಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಪ್ರಯತ್ನಿಸಲಾಯಿತು.

**4. ರಾಜಾ ರಾಮಮೋಹನರಾಯರು ಆರಂಭಿಸಿದ 'ಆತ್ಮೀಯ ಸಭಾ'ದ ಪ್ರಮುಖ ಆಶಯವೇನು?**

ಉತ್ತರ : ರಾಜಾ ರಾಮಮೋಹನರಾಯರು ಆರಂಭಿಸಿದ 'ಆತ್ಮೀಯ ಸಭಾ'ದ ಪ್ರಮುಖ ಆಶಯವೇಂದರೆ ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗಾಣಿಸುವುದು.

**5. ರಾಜಾರಾಮಮೋಹನರಾಯರ ಸೇವೆಯನ್ನು ರವೀಂದ್ರನಾಥ ಠಾಗೂರರ ಹೇಗೆ ವಿಶ್ಲೇಷಿಸಿದ್ದಾರೆ?**

ಉತ್ತರ : ರವೀಂದ್ರನಾಥ ಠಾಗೂರರು 'ರಾಜಾ ರಾಮಮೋಹನರಾಯರು ಆಧುನಿಕ ಭಾರತದ ಹರಿಕಾರ, ಭಾರತದ ಪುನರುಜ್ಜೀವನದ ಜನಕ ಮತ್ತು ಭಾರತೀಯ ರಾಷ್ಟ್ರೀಯತೆಯ ಪ್ರವಾದಿ' ಎಂದು ಹೇಳುವ ಮೂಲಕ ರಾಜಾ ರಾಮಮೋಹನರಾಯರು ಮತ್ತು ಬ್ರಹ್ಮಸಮಾಜವು ಮಾಡಿದ ಸೇವೆಯನ್ನು ವಿಶ್ಲೇಷಿಸಿದ್ದಾರೆ.

**6. ಯುವ ಬಂಗಾಳಿ ನೇತಾರ ಹೆನ್ರಿ ವಿವಿಯನ್ ಡಿರೋಜಿಯೋ ಅವರನ್ನು ಆಂಗ್ಲೋ–ಇಂಡಿಯನ್ ಎಂದು ಏಕೆ ಕರೆಯುತ್ತಾರೆ?**

ಉತ್ತರ : ಯುವ ಬಂಗಾಳಿ ನೇತಾರ ಹನ್ರಿ ವಿವಿಯನ್ ಡಿರೋಜಿಯೋರವರ ತಂದೆ ಪೋರ್ಚುಗೀಸ್, ತಾಯಿ ಭಾರತೀಯಳು. ಹೀಗಾಗಿ ಡಿರೋಜಿಯೋ ಅವರನ್ನು ಆಂಗ್ಲೋ–ಇಂಡಿಯನ್ ಎಂದು ಕರೆಯುತ್ತಾರೆ.

**7. ಹೆನ್ರಿ ವಿವಿಯನ್ ಡಿರೋಜಿಯೋರವರು ಸಂಪ್ರದಾಯವಾದಿಗಳ ಆಕ್ರೋಶಕ್ಕೆ ಗುರಿಯಾಗಲು ಕಾರಣವೇನು?**

ಉತ್ತರ : ಹೆನ್ರಿ ವಿವಿಯನ್ ಡಿರೋಜಿಯೋರವರು ತಮ್ಮ ವಿದ್ಯಾರ್ಥಿಗಳು ಮತ್ತು ಸಹವರ್ತಿಗಳಲ್ಲಿ ಪ್ರಶ್ನಿಸುವ, ವೈಜ್ಞಾನಿಕ ಮನೋಭಾವವನ್ನು ರೂಡಿಸಿಕೊಳ್ಳಲು ಬೇಕಾದ ಪ್ರೇರಣೆಯನ್ನು ಒದಗಿಸುವ ಪಠ್ಯಗಳನ್ನು ತಂದರು. ಇದರಿಂದ ಅಂದಿನ ಸಂಪ್ರದಾಯವಾದಿಗಳ ಆಕ್ರೋಶಕ್ಕೆ ಗುರಿಯಾದರು.

**8. ಆರ್ಯ ಸಮಾಜವನ್ನು ಯಾರು, ಯಾವಾಗ ಆರಂಭಿಸಿದರು?**

ಉತ್ತರ : 1875ರಲ್ಲಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಕಾಥೇವಾಡದಲ್ಲಿ ಆರಂಭಿಸಿದರು.

**9. ದಯಾನಂದ ಸರಸ್ವತಿಯವರು 'ವೇದಗಳಿಗೆಮರಳಿ' ಎಂದು ಕರೆ ಕೊಡಲು ಕಾರಣವೇನು?**

ಉತ್ತರ : ದಯಾನಂದ ಸರಸ್ವತಿಯವರು ಆಧುನಿಕ ಸಮಸ್ಯೆಗಳಿಗೆ ಪರಿಹಾರಗಳು ವೇದಗಳಲ್ಲಿವೆ ಎಂಬ ಹಿನ್ನೆಲೆಯಲ್ಲಿ ಅವರು ವೇದಗಳಿಗೆ ಮರಳಿ ಎಂದು ಘೋಷಿಸಿದರು.

**10. ಶುದ್ಧಿ ಚಳುವಳಿ ಎಂದರೇನು? ಅಥವಾ**

**ಶುದ್ಧಿ ಚಳುವಳಿಯನ್ನು ಏಕೆ ಆರಂಭಿಸಲಾಯಿತು? (ಏಪ್ರಿಲ್ 2019)**

ಉತ್ತರ : ಶುದ್ಧಿ ಚಳುವಳಿ ಎಂದರೆ ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳುವುದಾಗಿದೆ.

**11. ಪ್ರಾರ್ಥನಾ ಸಮಾಜವನ್ನು ಆತ್ಮರಾಮ ಪಾಂಡುರಂಗರವರು ಏಕೆ ಸ್ಥಾಪಿಸಿದರು?**

ಉತ್ತರ : ಮಹಿಳೆಯರ ಸಮಸ್ಯೆಗಳನ್ನಷ್ಟೇ ಅಲ್ಲದೆ ಶೂದ್ರಾತಿಶೂದ್ರ ಸಮುದಾಯಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಡಾ. ಆತ್ಮಾರಾಮ್ ಪಾಂಡುರಂಗರವರು ಮುಂಬೈಯಲ್ಲಿ 1867ರಲ್ಲಿ ಪ್ರಾರ್ಥನಾ ಸಮಾಜವನ್ನು ಪ್ರಾರಂಭಿಸಿದರು.

**12. ಸತ್ಯಶೋಧಕ ಸಮಾಜದ ಸ್ಥಾಪನೆಯ ಉದ್ದೇಶವೇನು?**

ಉತ್ತರ : 1873ರಲ್ಲಿ ಜ್ಯೋತಿಭಾ ಫುಲೆಯವರು ಸ್ಥಾಪಿಸಿದ ಸತ್ಯಶೋಧಕ ಸಮಾಜವು ಬ್ರಾಹ್ಮಣೇತರ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ಸ್ಥಾಪನೆಯಾಯಿತು.

**13. ಜ್ಯೋತಿಭಾ ಫುಲೆಯವರು ರಚಿಸಿದ ಗ್ರಂಥಗಳು ಯಾವುವು?**

ಉತ್ತರ : ಜ್ಯೋತಿಭಾ ಫುಲೆಯವರು ಸೈದ್ಧಾಂತಿಕ ಹೋರಾಟವನ್ನು ಕಟ್ಟುವ ಹಿನ್ನೆಲೆಯಲ್ಲಿ 'ಗುಲಾಮಗಿರಿ' ಮತ್ತು 'ಶೇಟ್ಕಾರ್ಯಚಾ ಅಸೂದ' ಎನ್ನುವ ಗಂಥ ರಚಿಸಿದರು.

**14. ರಾಮಕೃಷ್ಣ ಆಶ್ರಮವನ್ನು ಯಾರು, ಎಲ್ಲಿ ಸ್ಥಾಪಿಸಿದರು?**

ಉತ್ತರ : ಸ್ವಾಮಿ ವಿವೇಕಾನಂದರು 1897ರಲ್ಲಿ ಕಲ್ಕತ್ತಾದ ಬಳಿಯ ಬೇಲೂರಿನಲ್ಲಿ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿದರು.

**15. ರಾಮಕೃಷ್ಣ ಮಠವನ್ನು ಸ್ಥಾಪಿಸಿದ ಉದ್ದೇಶವೇನು?**

ಉತ್ತರ : ರಾಮಕೃಷ್ಣ ಮಠವನ್ನು ಸ್ಥಾಪಿಸಿದ ಉದ್ದೇಶವೇಂದರೆ ಸ್ವಾಮಿ ವಿವೇಕಾನಂದರ ಗುರುಗಳಾದ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು.

**16. ರಾಮಕೃಷ್ಣ ಪರಮಹಂಸರು ತಮ್ಮ ಬದುಕಿನ ಮೂಲಕ ಜಗತ್ತಿಗೆ ನೀಡಿದ ಸಂದೇಶವೇನು?**

ಉತ್ತರ : ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯಬೇಕೆಂದು ತಮ್ಮ ಬದುಕಿನ ಉದಾಹರಣೆಯ ಮೂಲಕ ತೋರಿಸಿಕೊಟ್ಟರು.

**17.ಥಿಯೋಸಾಫಿಕಲ್ ಸೈಸೈಟಿಯನ್ನು ಎಲ್ಲಿ, ಯಾವಾಗ, ಯಾರು ಆರಂಭಿಸಿದವರು ಯಾರು?**

ಉತ್ತರ : ಥಿಯೋಸಾಫಿಕಲ್ ಸೋಸೈಟಿಯನ್ನು ಮೇಡಂ ಬ್ಲಾವಾಟ್‌ಸ್ಕೆ ಮತ್ತು ಅಮೆರಿಕನ್ನರಾದ ಕರ್ನಲ್ ಎಚ್ ಎಸ್ ಅಲ್ಕಾಟ್ ಪ್ರಾರಂಭಿಸಿದರು. ಇವರು ಭಾರತಕ್ಕೆ ಬಂದು ಮದರಾಸಿನ ಹತ್ತಿರವಿರುವ ಅಡ್ಯಾರ್ ಎಂಬಲ್ಲಿ ಇದರ ಕೇಂದ್ರ ಕಚೇರಿಯನ್ನು 1886ರಲ್ಲಿ ಆರಂಭಿಸಿದರು.

**18. ಥಿಯೋಸಾಫಿಕಲ್ ಸೊಸೈಟಿ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಥಯೋಸಾಫಿಕಲ್ ಸೊಸೈಟಿ ಸ್ಥಾಪನೆಯ ಉದ್ದೇಶವೇಂದರೆ ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು. ಮನುಷ್ಯನ ಅಂತರ್ಯದಲ್ಲಿರು ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು.

**19. ಅನಿಬೆಸೆಂಟರು ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಯಾವ ಯಾವ ಪತ್ರಿಕೆಗಳನ್ನು ಆರಂಭಿಸಿದರು?**

ಉತ್ತರ : ಅನಿಬೆಸೆಂಟರು ಸಮಕಾಲೀನ ಸಮಸ್ಯೆಗಳನ್ನು ಚರ್ಚೆ ಮತ್ತು ಸಂವಾದಕ್ಕೆ ಈಡುಮಾಡಲು 'ನ್ಯೂ ಇಂಡಿಯಾ' ಮತ್ತು 'ಕಾಮನ್ ವೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.

**20. ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಪ್ರಮುಖ ಉದ್ದೇಶವೇನು?**

ಉತ್ತರ : ಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಯೋಗಂ ಸಂಘಟನೆಯ ಪ್ರಮುಖ ಉದ್ದೇಶವೇಂದರೆ – ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಬಲೀಕರಣ ಮಾಡುವುದು.

**21. ಶ್ರೀ ನಾರಾಯಣಗುರು ಅವರ ಪ್ರಮುಖ ಆಶಯವೇನು?**

ಉತ್ತರ : ಶ್ರೀ ನಾರಾಯಣಗುರು ಅವರ ಪ್ರಮುಖ ಆಶಯ – ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

1. **19ನೆಯ ಶತಮಾನವನ್ನು ಭಾರತೀಯ ಇತಿಹಾಸದಲ್ಲಿ ಸಮಾಜ ಸುಧಾರಣಾ ಕಾಲ ಮತ್ತು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ವಿಮರ್ಶಿಸಿ.**

**ಉತ್ತರ : 19ನೆಯ ಶತಮಾನವನ್ನು ಭಾರತೀಯ ಇತಿಹಾಸದಲ್ಲಿ ಸಮಾಜ ಸುಧಾರಣಾ ಕಾಲ ಮತ್ತು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ಯಾಕೆಂದರೆ –**

- ಇಂಗ್ಲಿಷ್ ಶಿಕ್ಷಣದಿಂದ ಭಾರತೀಯ ಇಂಗ್ಲಿಷ್ ವಿದ್ಯಾವಂತ ವರ್ಗವೊಂದು ಸೃಷ್ಟಿಯಾಯಿತು.
- ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಸಮಾನತೆ ಮುಂತಾದ ಯುರೋಪಿಯನ್ ಪರಿಕಲ್ಪನೆಗಳು ಭಾರತೀಯ ಸಮಾಜಕ್ಕೆ ಪರಿಚಯವಾಗಲಾರಂಭಿಸಿದವು.
- ಇದು ಮೂಡನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿತು.
- ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಭಾರತೀಯರು ತಮ್ಮ ಸಮಾಜವನ್ನು ವಿಶ್ಲೇಷಿಸಲು ಆರಂಭಿಸಿದರು.

**2. 19ನೇ ಶತಮಾನದ ಪ್ರಮುಖ ಸಮಾಜ ಸುಧಾರಕರನ್ನು ಪಟ್ಟಿಮಾಡಿರಿ.**

ಉತ್ತರ : 19ನೇ ಶತಮಾನದ ಪ್ರಮುಖ ಸಮಾಜ ಸುಧಾರಕರೆಂದರೆ – ರಾಜಾರಾಮಮೋಹನರಾಯ್, ದಯಾನಂದ ಸರಸ್ವತಿ, ಎಂ.ಜಿ.ರಾನಡೆ, ಜ್ಯೋತಿಭಾಫುಲೆ, ಸ್ವಾಮಿ ವಿವೇಕಾನಂದ, ಅನಿಬೆಸೆಂಟ್, ಸರ್ ಸಯ್ಯದ್ ಅಹ್ಮದ್ ಖಾನ್, ಪೆರಿಯಾರ್, ನಾರಾಯಣಗುರು ಮೊದಲಾದವರು.

**3. 19ನೇ ಶತಮಾನದ ಭಾರತೀಯ ಸಾಮಾಜಿಕ ಸ್ಥಿತಿಗತಿಗಳು ಹೇಗಿದ್ದವು?**

**ಉತ್ತರ : 19ನೇ ಶತಮಾನದ ಭಾರತೀಯ ಸಮಾಜದ ಸ್ಥಿತಿಗತಿಗಳು –**

- ಭಾರತೀಯ ಸಮಾಜದಲ್ಲಿ ಮಹಿಳೆಯ ಹಾಗೂ ಶೂದ್ರ, ಶೂದ್ರಾತಿ ಸಮುದಾಯಗಳು ಅನೇಕ ಹಕ್ಕುಗಳಿಂದ ವಂಚಿತರಾಗಿದ್ದರು.
- ಜಾತಿಪದ್ಧತಿ, ಲಿಂಗ ಅಸಮಾನತೆ, ಸತಿಪದ್ಧತಿ, ಸಮಾಜದಲ್ಲಿ ತಲೆ ಎತ್ತಿದ್ದವು.
- ಅಂದಿನ ಸಮಾಜವು ಅನೇಕ ಮೌಢ್ಯತೆಗಳಿಂದ ಕೂಡಿತ್ತು.
- ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು.

**4. ರಾಜಾ ರಾಮಮೋಹನರಾಯರು ಭಾರತೀಯ ಸಮಾಜವನ್ನು ಸುಧಾರಿಸಲು ಹೇಗೆ ಶ್ರಮಿಸಿದರು?**

**ಉತ್ತರ :**



- ರಾಜಾ ರಾಮಮೋಹನರಾಯರು ಧಾರ್ಮಿಕ ಮತ್ತು ಸಾಮಾಜಿಕ ಪಿಡುಗುಗಳನ್ನು ಬಂಗಾಳದ ಸಮಾಜದಿಂದ ಕೊನೆಗಾಣಿಸಲು ಪ್ರಯತ್ನಿಸಿದರು.
- 1828ರಲ್ಲಿ ಬ್ರಹ್ಮಸಮಾಜವನ್ನು ಪ್ರಾರಂಭಿಸಿದರು.
- ಜಾತಿಪದ್ಧತಿ ಮತ್ತು ಮೂಢನಂಬಿಕೆಗಳಿಂದ ಹಿಂದೂ ಧರ್ಮವನ್ನು ಶುದ್ಧಿಗೊಳಿಸುವುದು ಇವರ ಕಾಳಜಿಯಾಗಿತ್ತು.
- ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್‌ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇದಿಸಲಾಯಿತು.
- ಬಂಗಾಳದಲ್ಲಿ ಸಂವಾದ ಕೌಮುದಿ ಎನ್ನುವ ಪತ್ರಿಕೆಯನ್ನು ಆರಂಭಿಸುವ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಲು ಪ್ರಯತ್ನಿಸಿದರು.

**5. ರಾಜಾರಾಮಮೋಹನರಾಯರು ಸ್ಥಾಪಿಸಿದ ಬ್ರಹ್ಮ ಸಮಾಜದ ಪ್ರಮುಖ ಅಂಶಗಳಾವುವು? ಅಥವಾ**

PSG

**ಭಾರತದ ಸಾಮಾಜಿಕ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು?**

**ಉತ್ತರ : ರಾಜಾರಾಮಮೋಹನರಾಯರು ಸ್ಥಾಪಿಸಿದ ಬ್ರಹ್ಮ ಸಮಾಜದ ಪ್ರಮುಖ ಅಂಶಗಳು. –**

- ಏಕದೇವತಾರಾಧನೆಯನ್ನು ಪ್ರತಿಪಾದಿಸುವುದು.
- ಅರ್ಥಹೀನ ಆಚರಣೆಗಳನ್ನು ವಿರೋಧಿಸುವುದು.
- ಬಹುಪತ್ನಿತ್ವ ಬಾಲ್ಯವಿವಾಹ ಪದ್ಧತಿಯನ್ನು ವಿರೋಧಿಸಿತು.
- ಸಮಾಜದಲ್ಲಿ ಸ್ತ್ರೀಯರಿಗೆ ಸಮಾನತೆ ತರಲು ಪ್ರಯತ್ನಿಸಿತು.
- ವಿಧವೆಯರಿಗೆ ಆಸ್ತಿಯಲ್ಲಿ ಪಾಲು ಇರಬೇಕೆಂದು ಪ್ರತಿಪಾದಿಸಿತು.
- ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬಹುದು ಎಂದು ಬ್ರಹ್ಮಸಮಾಜವು ಸಾರಿತು.

**6. ಸಮಾಜ ಸುಧಾರಣೆಯಲ್ಲಿ ಯುವಬಂಗಾಳಿ ಚಳುವಳಿಯು ವಹಿಸಿದ ಪಾತ್ರವನ್ನು ವಿವರಿಸಿ.**

**ಅಥವಾ ಹೆನ್ರಿ ವಿವಿಯನ್ ಡಿರೋಜಿಯೋರವರ ಸುಧಾರಣಗಳನ್ನು ಪಟ್ಟಿ ಮಾಡಿ.**

**ಉತ್ತರ : ಸಮಾಜ ಸುಧಾರಣೆಯಲ್ಲಿ ಯುವಬಂಗಾಳಿ ಚಳುವಳಿಯು ವಹಿಸಿದ ಪಾತ್ರ**

- ಯುವಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು ಹೆನ್ರಿ ವಿವಿಯನ್ ಡಿರೋಜಿಯೋ.
- ಪ್ರಕೃತಿ, ಮಾನವೀಯತೆ ವಿಷಯಗಳನ್ನು ಕುರಿತು ಚರ್ಚೆ & ಸಂವಾದಗಳನ್ನು ನಡೆಸಿತು.
- ಮಹಿಳಾ ಹಕ್ಕುಗಳ ಪ್ರತಿಪಾದಕರಾಗಿದ್ದರು.
- ಜಾತಿಪ್ರೇರಿತ ಶೋಷಣೆಯ ವಿರೋಧಿಯಾಗಿದ್ದರು.
- ಸಮಾಜವನ್ನು ವೈಜ್ಞಾನಿಕವಾಗಿ ನೋಡುವ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು.

**7. ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜದ ಪ್ರಮುಖ ಉದ್ದೇಶಗಳನ್ನು ತಿಳಿಸಿ.**

**ಉತ್ತರ : ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜದ ಪ್ರಮುಖ ಉದ್ದೇಶಗಳು –**



- ಹಿಂದುಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು.
- ಹುಟ್ಟಿನಿಂದ ಯಾರೂ ಶೂದ್ರರೂ ಅಲ್ಲ ಅಥವಾ ಬ್ರಾಹ್ಮಣರೂ ಅಲ್ಲವೆಂದು ಜಾತಿ ಆಧಾರವನ್ನು ತಿರಸ್ಕರಿಸಿದರು.
- ಅಂತರ್ಜಾತಿಯ ವಿವಾಹಗಳನ್ನು ಪ್ರೋತ್ಸಾಹಿಸುವುದು.
- ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ಪದ್ಧತಿಯನ್ನು ತಿರಸ್ಕರಿಸುವುದು.
- ಸ್ತ್ರೀ ಮತ್ತು ಪುರುಷರು ಸಮಾನರು.
- ವೇದಗಳು ಮಾತ್ರ ಶ್ರೇಷ್ಠ.

**8. ಪ್ರಾರ್ಥನಾ ಸಮಾಜಕ್ಕೆ ರಾನಡೆಯವರು ನೀಡಿದ ಕೊಡುಗೆಯನ್ನು ತಿಳಿಸಿ.**

ಉತ್ತರ : **ಪ್ರಾರ್ಥನಾ ಸಮಾಜಕ್ಕೆ ರಾನಡೆಯವರು ನೀಡಿದ ಕೊಡುಗೆ –**

- ರಾನಡೆಯವರು ಪ್ರಾರ್ಥನಾ ಸಮಾಜದ ಸುಧಾರಣೆಗೆ ಪ್ರಯತ್ನಿಸಿದರು.
- ರಾನಡೆಯವರು ಬಾಲ್ಯವಿವಾಹವನ್ನು ವಿರೋಧಿಸಿದರು.
- ವಿಧವೆಯರನ್ನು ತಿರಸ್ಕೃತ ಬದುಕಿನಿಂದ ಹೊರತರುವುದು.
- ವಿಧವಾ ಪುನರ್‌ವಿವಾಹ ಸುಧಾರಣೆಗೆ ಕಾನೂನಿನ ಕ್ರಮ ಅತ್ಯವಶ್ಯಕವೆಂದು ಭಾವಿಸಿದರು.

**9. ಜ್ಯೋತಿಭಾ ಪುಲೆಯವರು ಸ್ಥಾಪಿಸಿದ ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.**

**ಉತ್ತರ : ಜ್ಯೋತಿಭಾ ಪುಲೆಯವರು ಸ್ಥಾಪಿಸಿದ ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು –**



- ಹಿಂದುಳಿದ ವರ್ಗಗಳಿಗೆ ಮತ್ತು ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ದೊರಕಿಸಿಕೊಡುವುದು.
- ಸೈದ್ಧಾಂತಿಕ ಹೋರಾಟವನ್ನು ನಡೆಸಲು 'ಗುಲಾಮಗಿರಿ' ಮತ್ತು ಶೇಟ್ಕಾರ್ಯಚಾ ಅಸೂದ್ ಎನ್ನುವ ಗ್ರಂಥ ರಚಿಸಿದರು.
- ಶಾಲೆಗಳನ್ನು ಆರಂಭಿಸಿ ಶೂದ್ರರಿಗೆ ಮತ್ತು ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ನೀಡಿದರು.
- ಪುಲೆಯವರು ತಮ್ಮ ಬಾವಿಯಲ್ಲಿ ಅಸ್ಪೃಶ್ಯರು ಮತ್ತು ಎಲ್ಲಾ ಜಾತಿಯವರಿಗೆ ನೀರು ಸೇದಿಕೊಳ್ಳುಲು ಅವಕಾಶವನ್ನು ಕೊಟ್ಟರು.
- ಹೆಣ್ಣುಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಲಾಯಿತು.


**10. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು? ಅಥವಾ**

**ಅಲಿಘರ್ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು? ಅಥವಾ**

**ಸರ್ ಸೈಯದ್ ಅಹಮದ್ ಖಾನರು ಮುಸ್ಲಿಂ ಸಮಾಜದ ಸುಧಾರಣೆಗೆ ಹೇಗೆ ಶ್ರಮಿಸಿದರು? ಅಥವಾ**

**ಅಲಿಘರ್ ಚಳುವಳಿಯನ್ನು ವಿವರಿಸಿ.**


**ಉತ್ತರ : ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರ –**



- ಅಲಿಘರ್‌ಚಳುವಳಿಯ ನಾಯಕತ್ವವನ್ನು ಸರ್ ಸಯದ್ ಅಹಮದ್‌ಖಾನರವರು ವಹಿಸಿದ್ದರು.
- ಸರ್ ಅಹಮದ್ ಖಾನ್‌ರು ಸಂಪ್ರದಾಯ, ಮೌಢ್ಯಗಳು, ಅಜ್ಞಾನ ವಿರುದ್ಧ ಹೋರಾಡಿದರು.
- ಸಮುದಾಯದಲ್ಲಿದ್ದ ಬಹುಪತ್ನಿತ್ವ & ಪರದಾಪದ್ಧತಿಯನ್ನು ವಿರೋಧಿಸಿದರು.
- ಮುಸ್ಲಿಂ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು ಎಂದು ಸಾರಿದರು.
- 1875ರಲ್ಲಿ ಮಹಮದನ್ ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಅಲಿಘರ್‌ನಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯೇ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಯಿತು.

**11. ರಾಮಕೃಷ್ಣಮಿಷನ್ ದೃಷ್ಟಿಕೋನವನ್ನು ವಿವರಿಸಿ.**

**ಉತ್ತರ : ರಾಮಕೃಷ್ಣಮಿಷನ್‌ನ ದೃಷ್ಟಿಕೋನ (ಸೇವೆಗಳು)**



- ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದ ಉದ್ದೇಶ ರಾಮಕೃಷ್ಣ ಪರಮಹಂಸರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲುಪಿಸುವುದು.
- ಸನ್ಯಾಸ, ಧ್ಯಾನ ಮತ್ತು ಭಕ್ತಿಯ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಪಡೆಯುವುದು.
- ಭಾರತೀಯ ದಾರ್ಶನಿಕತೆಯ ವಿವಿಧ ದೃಷ್ಟಿಕೋನಗಳನ್ನು ಭಾರತೀಯರಿಗೆ ಮತ್ತು ಪಾಶ್ಚಿಮಾತ್ಯರಿಗೆ ತಿಳಿಸುವುದು.
- ಭಾರತದ ಸಮಾಜಕ್ಕೆ ಶೋಷಣೆಮುಕ್ತ ರೂಪವನ್ನು ಕೊಡುವುದು.

**12. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕ ರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.**

**ಉತ್ತರ :**



- ಸ್ವಾಮಿ ವಿವೇಕಾನಂದರು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
- ಮೋಕ್ಷಕ್ಕಾಗಿ ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು.
- ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು.
- ಯುವಜನತೆಗೆ ವಿವೇಕಾನಂದರು 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದು ಕರೆಕೊಟ್ಟರು.
- ಭಾರತೀಯ ಸಂಸ್ಕೃತಿಯ ಘನತೆಯನ್ನು ವಿಶ್ವಕ್ಕೆ ಪರಿಚಯಿಸುವ ಮೂಲಕ ಅಸಂಖ್ಯಾತ ಯುವಕರಿಗೆ ಪ್ರೇರಣಾಶಕ್ತಿಯಾಗಿದ್ದಾರೆ.

**13. ಸಮಾಜ ಸುಧಾರಣಾ ಚಳುವಳಿಯಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆಗಳನ್ನು ತಿಳಿಸಿ.**

**ಉತ್ತರ : ಸಮಾಜ ಸುಧಾರಣಾ ಚಳುವಳಿಯಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆಗಳು –**

- ವಿವೇಕಾನಂದರ ಆಶಯವೆಂದರೆ, ಮೊದಲು ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು.
- ಸಮಾಜ ಸುಧಾರಣಾ ಕಾನೂನುಗಳು ಜಾರಿಗೊಳ್ಳಬೇಕು ಎಂದು ಬಯಸಿದರು.
- ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕೆಂದರು.
- ಧರ್ಮದ ಕರ್ತವ್ಯವೆಂದರೆ ಕತ್ತಲಲ್ಲಿರುವವರಿಗೆ ಬೆಳಕನ್ನು ನೀಡಬೇಕು. ಇಲ್ಲದಿದ್ದರೆ ಅದು ಧರ್ಮವೇ ಅಲ್ಲ ಎಂದರು.
- ಯಾರ ಆತ್ಮ ಬಡವರಿಗಾಗಿ ನಿಡಿಯುವುದೋ ಅವನೇ ಮಹಾತ್ಮ, ಇಲ್ಲದಿದ್ದರೆ ಅವನು ದುರಾತ್ಮ ಎಂದರು.

**14. ಸ್ವಾಮಿ ವಿವೇಕಾನಂದರು ಜಗತ್ತಿಗೆ ಭಾರತೀಯ ಸಂಸ್ಕೃತಿಯನ್ನು ಹೇಗೆ ಪರಿಚಯಿಸಿದರು?**

**ಉತ್ತರ :**

- ವಿವೇಕಾನಂದರು 1893ರಲ್ಲಿ ಅಮೇರಿಕದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧಾರ್ಮಿಕ ಸಮ್ಮೇಳನದಲ್ಲಿ ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಪ್ರಪಂಚಕ್ಕೆ ಪರಿಚಯಿಸಿದರು.
- 1900ರಲ್ಲಿ ಪ್ಯಾರಿಸ್‌ನಲ್ಲಿ ನಡೆದ 'ಕಾಂಗ್ರೆಸ್ ಆಫ್ ರಿಲಿಜಿಯನ್ಸ್' ಸಮ್ಮೇಳನದಲ್ಲೂ ಮಾತನಾಡಿ ಜನರನ್ನು ಸಮ್ಮೋಹನಗೊಳಿಸಿದರು.
- ಅವರ ಭಾಷಣಗಳು ಅವರ ರಾಷ್ಟ್ರೀಯತೆಯ ಆಲೋಚನೆಗಳಿಗೆ ಕೈಗನ್ನಡಿಯಾಗಿವೆ.

**15.ಸಮಾಜ ಸುಧಾರಣೆಯಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಪಾತ್ರವನ್ನು ವಿವರಿಸಿ. ಅಥವಾ**

**ಭಾರತದಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಸುಧಾರಣೆಗಳನ್ನು ಹಿಂದು ಧರ್ಮದ ಪುನರುತ್ಥಾನ ಚಳುವಳಿ ಎಂದು ಕರೆಯಲಾಗಿದೆ. ಈ ಹೇಳಿಕೆಯನ್ನು ವಿಮರ್ಶಿಸಿ.**

**ಉತ್ತರ : ಸಮಾಜ ಸುಧಾರಣೆಯಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಪಾತ್ರ –**

- ಮನುಷ್ಯನಿಗೆ 'ವಿಶ್ವಭ್ರಾತೃತ್ವ' ಪ್ರಜ್ಞೆ ಮುಖ್ಯವಾದದ್ದೆಂದು ಥಿಯೋಸಾಫಿಕಲ್ ಸೊಸೈಟಿಯು ಘೋಷಿಸಿತು.
- ಹಿಂದು ಧರ್ಮಕ್ಕೆ ಸೇರಿದ ತಾತ್ವಿಕ ಚಿಂತನೆಗಳಿಂದ ತನ್ನ ಮೂಲತತ್ವಗಳನ್ನು ಪಡೆದುಕೊಂಡು ಪ್ರಚುರಪಡಿಸಿತು.
- ಭಾರತದ ಸಮಕಾಲೀನ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿತು.
- ಈ ಸೊಸೈಟಿಯು ನಡೆಸಿದ ಪ್ರಯತ್ನಗಳನ್ನು ಹಿಂದು ಧರ್ಮದ ಪುನರುತ್ಥಾನ ಚಳವಳಿ ಎಂದು ಕರೆಯಲಾಗಿದೆ.

**16. ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು? ಅಥವಾ ಥಿಯೋಸಾಫಿಕಲ್ ಸೊಸೈಟಿಗೆ ಅನಿಬೆಸೆಂಟರ್ ಕೊಡುಗೆ ಏನು?**



**ಉತ್ತರ : ಅನಿಬೆಸೆಂಟರ ಸುಧಾರಣಾ ಕ್ರಮಗಳು ಅಥವಾ ಥಿಯೋಸಾಫಿಕಲ್ ಸೊಸೈಟಿಗೆ ಅನಿಬೆಸೆಂಟರ್ ಕೊಡುಗೆ –**

- ಅನಿಬೆಸೆಂಟರು ಆಧ್ಯಾತ್ಮಿಕ ಶಕ್ತಿಯ ಮೇಲೆ ನಿಂತಿರುವ ಭಾರತ ಸಂಸ್ಕೃತಿ ಶ್ರೇಷ್ಠವಾದ್ದೆಂದು ಪ್ರತಿಪಾದಿಸಿದವರು.
- ಅನಿಬೆಸೆಂಟರು 'ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದ ಮಾಡಿ 'ಶ್ವೇತ ಸರಸ್ವತಿ' ಎನಿಸಿಕೊಂಡರು.
- ಎಲ್ಲಾ ವರ್ಗದವರಿಗೂ ಶಿಕ್ಷಣ ನೀಡಬೇಕೆಂಬ ಆಸೆಯನ್ನು ಹೊಂದಿದ್ದರು.
- 1898ರಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಬನಾರಸ್‌ನಲ್ಲಿ ಪ್ರಾರಂಭಿಸಿದರು.
- ಈ ಸಂಸ್ಥೆಯು ಮದನಮೋಹನ ಮಾಳವೀಯರವರ ಪ್ರಯತ್ನದಿಂದ 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಯಿತು.
- ಅನಿಬೆಸೆಂಟರು 'ನ್ಯೂಇಂಡಿಯಾ' & 'ಕಾಮನ್ ವ್ಹೀಲ್' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು.


**17. ಕೇರಳದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು ಶ್ರೀ ನಾರಾಣಣಗುರು ಅವರಿಗೆ ಧರ್ಮ ಪರಿಪಾಲನಾ ಯೋಗಂ ಸಂಘಟನೆಯನ್ನು ಪ್ರಾರಂಭಿಸಲು ಕಾರಣವಾದವು ಹೇಗೆ?**

**ಉತ್ತರ : ಕೇರಳದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು ಶ್ರೀ ನಾರಾಣಣಗುರು ಅವರಿಗೆ ಧರ್ಮ ಪರಿಪಾಲನಾ ಯೋಗಂ ಸಂಘಟನೆಯನ್ನು ಪ್ರಾರಂಭಿಸಲು ಕಾರಣವಾದವು ಹೇಗೆಂದರೆ –**

- ಕೇರಳದ ಸಮಾಜದಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ನಿರ್ಬಂಧಗಳನ್ನು ಹೇರಲಾಗಿತ್ತು.
- ಈ ಸಮುದಾಯಗಳು ಕೆರೆ ಬಾವಿಗಳಲ್ಲಿ ನೀರನ್ನು ತೆಗೆದುಕೊಳ್ಳುವಂತಿರಲಿಲ್ಲ.
- ರಸ್ತೆಗಳ ಮೂಲಕ ಓಡಾಡುವಂತಿರಲಿಲ್ಲ.. ದೇವಸ್ಥಾನಕ್ಕೆ ಪ್ರವೇಶಿಸುವಂತಿರಲಿಲ್ಲ.
- ಶಾಲೆಗಳಿಗೂ ಇವರಿಗೆ ಪ್ರವೇಶವಿರಲಿಲ್ಲ.
- ಈ ಸಮುದಾಯಗಳು ಉಸಿರುಗಟ್ಟಿ ಬದುಕಬೇಕಾದ ಪರಿಸ್ಥಿತಿ ಇತ್ತು.
- ಈ ವಿಷಯಗಳನ್ನು ಕೈಗೆತ್ತಿಕೊಂಡ ನಾರಾಯಣಗುರು ಅವರು ಧರ್ಮ ಪರಿಪಾಲನಾ ಯೋಗಂ ಮೂಲಕ ಸಾಮಾಜಿಕ ಪ್ರತಿರೋಧದ ಚಳುವಳಿಗಳನ್ನು ಪ್ರಾರಂಭಿಸಿದರು.

**18. ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ.**

**ಉತ್ತರ : ನಾರಾಯಣಗುರು ಧರ್ಮಪರಿಪಾಲನಾ ಯೋಗಂ ಸಂಘಟನೆಯ ಕೊಡುಗೆಗಳು –**




- ಶ್ರೀ ನಾರಾಯಣಗುರು ಅವರು ಧರ್ಮಪರಿಪಾಲನಾ ಯೋಗಂ ಚಳುವಳಿಯನ್ನು ಆರಂಭಿಸಿದರು.
- ಮನುಷ್ಯ ಘನತೆಯಿಂದ ಬದುಕುವ ಸಮಾಜದ ನಿರ್ಮಾಣವೇ ಈ ಸಂಘಟನೆಯ ಉದ್ದೇಶವಾಗಿತ್ತು.
- ನಾರಾಯಣಗುರು ಅವರ ಪ್ರಮುಖ ಆಶಯ ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು ಎಂಬುದು.
- ಇದನ್ನು ಸಾಧಿಸಲು ಶಿಕ್ಷಣವೇ ಮಾರ್ಗವೆಂದು ಸಾರಿದರು.
- ಕೆಳ ಸಮುದಾಯಗಳ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳನ್ನು ಕಟ್ಟಿದರು.

**19. ಬ್ರಹ್ಮಣೇತರ ಚಳುವಳಿಯ ಮುಖ್ಯ ಉದ್ದೇಶಗಳೇನು?**

**ಉತ್ತರ : ಬ್ರಹ್ಮಣೇತರ ಚಳುವಳಿಯ ಮುಖ್ಯ ಉದ್ದೇಶಗಳು –**

- ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಇದ್ದ ಅವಕಾಶಗಳಲ್ಲಿ ತಮ್ಮ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟವನ್ನು ಆರಂಭಿಸಿದರು.
- ಬ್ರಾಹ್ಮಣೇತರ ಸಮುದಾಯಗಳು ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸತೊಡಗಿದರು.
- ಬ್ರಿಟಿಷರು 1870ರ ನಂತರ ತಂದ ಜನಗಣತಿ ವರದಿಗಳು, ಬ್ರಾಹ್ಮಣೇತರರಿಗೆ ತಮ್ಮ ಜನಸಂಖ್ಯೆಯ ಅರಿವನ್ನು ತಂದುಕೊಟ್ಟವು.
- ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟೀಸ್ ಪಾರ್ಟಿ'ಯು ಈ ಚಳುವಳಿಯನ್ನು ಮುನ್ನೆಡಿಸಿತು.

**20. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**



**ಉತ್ತರ : ಪೆರಿಯಾರ್ ಚಳವಳಿಯ ಮುಖ್ಯಾಂಶಗಳು –**

- ಪೆರಿಯಾರ್‌ರವರು ದ್ರಾವಿಡ ಚಳುವಳಿಯನ್ನು ರೂಪಿಸತೊಡಗಿದರು.
- ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು.
- ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ, ರಾಮನನ್ನು ವೈದಿಕ ವರ್ಗದ ದೇವರೆಂದು ತಿರಸ್ಕರಿಸಿದರು.
- ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು.
- 1924ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು.

## ಅಧ್ಯಾಯ – 6

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**ಪ್ರಶ್ನೆ 1] ಬಹು ಆಯ್ಕೆಯ ಪ್ರಶ್ನೆಗಳು**

1. 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ಹೀಗೆ ಎಂದು ಕರೆದರು. – **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ.**
2. 1857ರ ದಂಗೆಯನ್ನು ಇಂಗ್ಲಿಷ್ ಇತಿಹಾಸಕಾರರು ಹೀಗೆ ಎಂದು ಕರೆದಿದ್ದಾರೆ.– **ಸಿಪಾಯಿ ದಂಗೆ.**
3. ತಂಜಾವೂರ ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜಪದವಿಯನ್ನು ರದ್ದುಪಡಿಸಿದವರು – **ಲಾರ್ಡ ಡಾಲ್ ಹೌಸಿ**
4. ಭಾರತದ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಲು ಕಾರಣ – **ಇಂಗ್ಲಂಡಿನಲ್ಲಾದ ಕೈಗಾರಿಕಾ ಕ್ರಾಂತಿ**
5. 1857ರ ದಂಗೆಯ ಸಮಯದಲ್ಲಿ ಬ್ಯಾರಕ್‌ಪುರದಲ್ಲಿ ಬ್ರಿಟಿಷರ ಅಧಿಕಾರಿಯನ್ನು ಕೊಂದವನು — **ಮಂಗಳಪಾಂಡೆ.**
6. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಿಜಾಂಕುರಕ್ಕೆ ನಾಂದಿಯಾದ ಘಟನೆ – **ಮೀರತ್ ದಂಗೆ.**
7. 1857ರ ದಂಗೆಯ ಸಂದರ್ಭದಲ್ಲಿ ಭಾರತದ ಚಕ್ರವರ್ತಿ ಎಂದು ಘೋಷಿಸಲ್ಪಟ್ಟ ಮೊಘಲ್ ದೊರೆ – **ಎರಡನೇ ಬಹದ್ದೂರ್ ಷಾ**
8. ಕಾನ್ಪುರದಲ್ಲಿ ದಂಗೆಯ ನಾಯಕತ್ವವನ್ನು ವಹಿಸಿಕೊಂಡವನು – **ನಾನಾಸಾಹೇಬ.**
9. ನಾನಾಸಾಹೇಬನ ಆಪ್ತ ಸಹಾಯಕ – **ತಾತ್ಯಾಟೋಪಿ**



10. ಝಾನ್ಸಿ ರಾಣಿ ಲಕ್ಷ್ಮೀಬಾಯಿಯು ಬ್ರಿಟಿಷರ ವಿರುದ್ಧ ಯುದ್ಧ ಸಾರಲು ಕಾರಣ – **ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವಿರೋಧಿಸಿ.**
11. ಝಾನ್ಸಿ ರಾಣಿಯ ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ವಶಪಡಿಸಿಕೊಂಡ ಪ್ರದೇಶ – **ಗ್ವಾಲಿಯರ್.**
12. 1857ರ ಸಂದರ್ಭದಲ್ಲಿ ಅತ್ಯಂತ ಶೂರ ಮಹಿಳೆ ಎಂದು ಕರೆಸಿಕೊಂಡವರು **ಝಾನ್ಸಿ ರಾಣಿ ಲಕ್ಷ್ಮೀಬಾಯಿ.**



**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಯಾವ ನೀತಿಗಳನ್ನು ಜಾರಿಗೆ ತಂದಿದ್ದರು?**

ಉತ್ತರ : ಭಾರತದಲ್ಲಿ ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಇಂಗ್ಲಿಷರು ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದಿದ್ದರು.

**2. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಭಾರತದ ಕೈಗಾರಿಕೆಗಳ ಮೇಲೆ ಬೀರಿದ ಪರಿಣಾಮವೇನು?**

ಉತ್ತರ : ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಭಾರತದ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.

**3. ಬ್ರಿಟಿಷರು ಇನಾಂ ಆಯೋಗವನ್ನು ರಚಿಸಿದ್ದರ ಉದ್ದೇಶವೇನು?**

ಉತ್ತರ : ಇನಾಂ ಭೂಮಿಯನ್ನು ವಾಪಾಸು ಪಡೆಯಲು ಬ್ರಿಟಿಷರು ಇನಾಂ ಆಯೋಗವನ್ನು ರಚಿಸಿದರು.

**4. ಬ್ರಿಟಿಷರು ಇನಾಂ ಆಯೋಗವನ್ನು ರಚಿಸಿದ್ದರಿಂದಾದ ಪರಿಣಾಮವೇನು?**

ಉತ್ತರ : ಬ್ರಿಟಿಷರು ಇನಾಂ ಆಯೋಗವನ್ನು ರಚಿಸಿದ್ದರಿಂದಾಗಿ ಕೃಷಿಕರು ತೀವ್ರ ಅವಮಾನ ಮತ್ತು ಆರ್ಥಿಕ ನಷ್ಟವನ್ನು ಅನುಭವಿಸಿದರು.

**5. 1857ರ ದಂಗೆಗೆ ಕಾರಣವಾದ ವದಂತಿ ಯಾವುದು? ಅಥವಾ ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ಏಕೆ ವಿರೋಧಿಸಿದರು? (ಎಪ್ರಿಲ್ 2019)**

ಉತ್ತರ : ರಾಯಲ್ ಎನ್‌ಫೀಲ್ಡ್ ಎಂಬ ಬಂದೂಕುಗಳಿಗೆ ಉಪಯೋಗಿಸುತ್ತಿದ್ದ ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿಯು ಹಬ್ಬಿತು. ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ವಿರೋಧಿಸಿದರು. ಈ ವದಂತಿ 1857ರ ದಂಗೆಗೆ ಕಾರಣವಾಯಿತು.

**6. 1857ರ ದಂಗೆಯಲ್ಲಿ ಸಿಪಾಯಿಗಳು ಜನರ ವಿಶ್ವಾಸ ಕಳೆದುಕೊಂಡರು ಏಕೆ?**

ಉತ್ತರ : 1857ರ ದಂಗೆಯಲ್ಲಿ ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**7. 1857ರ ದಂಗೆಯ ಪರಿಣಾಮವೇನು?**

ಉತ್ತರ : ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಅಂತ್ಯಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತ ವರ್ಗಾವಣೆಗೊಂಡಿತು.

**8. 1857ರ ದಂಗೆಯ ನಂತರ ಬ್ರಿಟನ್ ಸರ್ಕಾರ ಭಾರತದ ವ್ಯವಹಾರದ ಉಸ್ತುವಾರಿಯನ್ನು ಯಾರಿಗೆ ಒಪ್ಪಿಸಲಾಯಿತು?**

ಉತ್ತರ : 1857ರ ದಂಗೆಯ ನಂತರ ಬ್ರಿಟನ್ ಸರ್ಕಾರ ಭಾರತದ ವ್ಯವಹಾರದ ಉಸ್ತುವಾರಿಯನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳಾವುವು?**
**ಅಥವಾ**
**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳಾವವು? ವಿಶ್ಲೇಷಿಸಿ.**

**ಉತ್ತರ : ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಅಥವಾ ದಂಗೆಗೆ ರಾಜಕೀಯ ಕಾರಣಗಳು.–**

- 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯಿಂದ ದೇಶೀ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಳ್ಳಬೇಕಾಯಿತು.
- ಸತಾರ, ಝಾನ್ಸಿ, ಜೈಪುರ, ಉದಯಪುರ ಮೊದಲಾದ ಸಂಸ್ಥಾನಗಳು ಬ್ರಿಟಿಷರ ವಶವಾದವು.
- ಡಾಲ್‌ಹೌಸಿಯು ತಂಜಾವೂರು ಮತ್ತು ಕಾರ್ನಾಟಿಕ್ ನವಾಬರಿಗಿದ್ದ ರಾಜಪದವಿಯನ್ನು ರದ್ದುಪಡಿಸಿದನು.
- ಮೊಘಲ್ ಚಕ್ರವರ್ತಿ, ಔದ್‌ನ ನವಾಬನನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು.
- ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**2. ಕ್ರಿಶ 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಸಹ ಕಾರಣ ಸಮರ್ಥಿಸಿ.**
**ಅಥವಾ**
**'ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ ಭಾರತೀಯ ದೇಶಿಯ ಕೈಗಾರಿಕೆಗಳ ಅವನತಿಗೆ ಕಾರಣವಾಯಿತು'. ಈ ಹೇಳಿಕೆಯನ್ನು ವಿಶ್ಲೇಷಿಸಿ.**

**ಉತ್ತರ : ಕ್ರಿಶ 1857ರ ದಂಗೆಗೆ ಆರ್ಥಿಕ ಕಾರಣಗಳು**

- ಕೈಗಾರಿಕಾ ಕ್ರಾಂತಿಯಿಂದ ಭಾರತದ ಕರಕುಶಲ ಮತ್ತು ದೇಶಿಯ ಗೃಹಕೈಗಾರಿಕೆಗಳು ಅವನತಿ ಹೊಂದಿದವು.
- ಭಾರತದಲ್ಲಿದ್ದ ಕರಕುಶಲಗಾರರು ನಿರುದ್ಯೋಗಿಗಳಾದರು.
- ಬಟ್ಟೆ ಮತ್ತು ಉಣ್ಣೆ ಕೈಗಾರಿಕೆಗಳು ಅವನತಿ ಹೊಂದಿದವು.
- ನೇಕಾರಿಕೆ ವೃತ್ತಿಯವರು ಉದ್ಯೋಗ ಕಳೆದುಕೊಂಡರು.
- ಭಾರತದ ವಸ್ತುಗಳ ಮೇಲೆ ಇಂಗ್ಲಿಷರು ದುಬಾರಿ ಸುಂಕವನ್ನು ಹೇರಿದರು.
- ಜಮಿನ್ದಾರಿ ಪದ್ಧತಿ ಜಾರಿಗೆ ತಂದು ರೈತರನ್ನು ಶೋಷಣೆಗೆ ಒಳಪಡಿಸಿದರು.

**3. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವವು? ಅಥವಾ**
**ಬ್ರಿಟಿಷರು ಜಾರಿಗೆ ತಂದ ನಾಗರಿಕ ಮತ್ತು ಅಪರಾಧ ಕಾಯ್ದೆಗಳು ಭಾರತೀಯರ ಪರವಾಗಿರಲಿಲ್ಲವೆಂದು ಹೇಗೆ ಹೇಳುವಿರಿ.**

**ಉತ್ತರ : 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳು –**

- ಇಂಗ್ಲಿಷರು ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಜಾರಿಗೆ ತಂದರು.
- ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
- ಇಂಗ್ಲಿಷ್ ನ್ಯಾಯಾಧೀಶರು ಇಂಗ್ಲಿಷರ ಪರವಾಗಿ ನ್ಯಾಯದಾನ ನೀಡುತ್ತಿದ್ದರು.
- ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಗಿದ್ದರಿಂದ ಜನಸಾಮಾನ್ಯರಿಗೆ ಅರ್ಥವಾಗಲಿಲ್ಲ.
- ಹೊಸ ಕಾನೂನಿನ ಆಶಯಗಳು ಜನರಿಗೆ ಅರಿವಾಗಲಿಲ್ಲ.

**4. 1857ರ ದಂಗೆಗೆ ಸೈನಿಕ ಕಾರಣಗಳಾವುವು? ಅಥವಾ**
**ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು ಎಂದು ಹೇಗೆ ಹೇಳುವಿರಿ. (ಎಪ್ರಿಲ್ 2019)**

**ಉತ್ತರ : 1857ರ ದಂಗೆಗೆ ಸೈನಿಕ ಕಾರಣಗಳು –**

- ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು.
- ಬ್ರಿಟಿಷ್ ಸೈನಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.
- ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

**5. 1857ರ ದಂಗೆಗೆ ತಕ್ಷಣದ ಕಾರಣವೇನು?**

**ಉತ್ತರ : 1857ರ ದಂಗೆಗೆ ತಕ್ಷಣದ ಕಾರಣ –**

- ಭಾರತದಲ್ಲಿನ ಸೈನಿಕರಿಗೆ ರಾಯಲ್ ಎನ್‌ಫೀಲ್ಡ್ ಎಂಬ ಹೊಸ ಬಂದೂಕುಗಳನ್ನು ನೀಡಲಾಗಿತ್ತು.
- ಬಂದೂಕುಗಳಿಗೆ ಬಳಸುತ್ತಿದ್ದ ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತು.
- ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.
- ಈ ವದಂತಿಯು ದಂಗೆಗೆ ತಕ್ಷಣದ ಕಾರಣವಾಯಿತು.

**6. ಬ್ಯಾರಕ್‌ಪುರ ಘಟನೆಯು 1857ರ ದಂಗೆಯಲ್ಲಿ ಮಹತ್ವದ ಪಾತ್ರವಹಿಸಿತು. ಈ ಹೇಳಿಕೆಯನ್ನು ವಿಶ್ಲೇಷಿಸಿ. ಅಥವಾ**
**1857ರ ದಂಗೆಯಲ್ಲಿ ಮಂಗಳಪಾಂಡೆಯ ಪಾತ್ರವೇನು? ಅಥವಾ**
**1857ರ ದಂಗೆ ಆರಂಭಕ್ಕೆ ಬ್ಯಾರಕ್‌ಪುರ ಹೇಗೆ ಕಾರಣವಾಯಿತು? ವಿವರಿಸಿ.**

**ಉತ್ತರ :**

- ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿಯು ಬ್ಯಾರಕಪುರದಲ್ಲಿನ ಸೈನಿಕ ಪಡೆಯಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.
- ಸೈನಿಕರಿಗೆ ತುಪಾಕಿಗಳನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಬ್ರಿಟಿಷರು ಆದೇಶಿಸಿದಾಗ ಮೇಲಾಧಿಕಾರಿಯ ವಿರುದ್ಧ ಬ್ಯಾರಕಪುರ ಸೈನಿಕರು ದಂಗೆಯೆದ್ದರು.
- ಮಂಗಲ ಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಮೇಲಾಧಿಕಾರಿಯೊಬ್ಬನನ್ನು ಕೊಂದನು.
- ಮಂಗಲ ಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.
- ಪರಿಣಾಮವಾಗಿ ದಂಗೆಯು ಎಲ್ಲೆಡೆ ತೀವ್ರವಾಗಿ ಹಬ್ಬಿತು.

**7. 1857ರ ದಂಗೆಯು ನಡೆದ ರೀತಿಯನ್ನು ವಿವರಿಸಿ.**

**ಉತ್ತರ : 1857ರ ದಂಗೆ ಹರಡುವಿಕೆ –**

- ಮೀರತ್ ಸೇನಾನೆಲೆಯಲ್ಲಿ ಇಂಗ್ಲಿಷರು ಭಾರತೀಯ ಸೈನಿಕರಿಗೆ ತುಪಾಕಿಗಳನ್ನು ಬಳಸಲು ಆದೇಶಿದಾಗ ಭಾರತೀಯ ಸೈನಿಕರು ಅದನ್ನು ನಿರಾಕರಿಸಿ ದಂಗೆಯೆದ್ದರು.
- ಮೀರತ್‌ನ ಸೈನಿಕರು ಕೆಂಪುಕೋಟೆಗೆ ನುಗ್ಗಿ ಮೊಘಲ್ ದೊರೆ ಎರಡನೇ ಬಹದ್ದೂರ್ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು.
- ಪ್ರತಿಭಟನೆಯು ತೀವ್ರ ಸ್ವರೂಪ ತಾಳಿ ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು.
- ಕಾನ್ಪುರದಲ್ಲಿ ನಾನಾ ಸಾಹೇಬನು ಸಿಡಿದೆದ್ದನು.
- ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿಯು ಇಂಗ್ಲಿಷರ ವಿರುದ್ಧ ಯುದ್ಧ ಸಾರಿದಳು.
- ಈ ಎಲ್ಲಾ ಹೋರಾಟವನ್ನು ಬ್ರಿಟಿಷರು ದೇಶಿಯ ಅರಸರ ಸಹಾಯದಿಂದ ಹತ್ತಿಕ್ಕಿದರು.

**8. 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ. ಅಥವಾ**
**1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ?**

**ಉತ್ತರ : 1857 ರ ದಂಗೆಯ ವೈಫಲ್ಯಕ್ಕೆ ಕಾರಣಗಳು**

- ಇದು ದೇಶದ ಬಿಡುಗಡೆಗಾಗಿ ನಡೆದಿದ್ದಕ್ಕಿಂತ ರಾಜರ/ರಾಣಿಯರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು.
- ಬ್ರಿಟಿಷ್ ಸೈನಿಕರಲ್ಲಿನ ಒಗ್ಗಟ್ಟು ಮತ್ತು ಭಾರತೀಯ ಸೈನಿಕರಲ್ಲಿರಲಿಲ್ಲ.
- ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು.
- ಭಾರತೀಯರಲ್ಲಿ ಯುದ್ಧ ತಂತ್ರ, ಸೈನಿಕ ಪರಿಣಿತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತು ಮುಂತಾದವುಗಳ ಕೊರತೆ ಇತ್ತು.
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ಸಿಗಲಿಲ್ಲ.
- ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು.

**9. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು? ಅಥವಾ**
**1858ರ ಮಹಾರಾಣಿ ಘೋಷಣೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಸಂತೃಪ್ತಿಸಲು ಪ್ರಯತ್ನಿಸಿದರು. ಹೇಗೆ? ಅಥವಾ**
**1857ರ ದಂಗೆಯು ಉಂಟು ಮಾಡಿದ ಬದಲಾವಣೆಗಳೇನು? ಅಥವಾ**

**ಉತ್ತರ : 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳು**

- ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ
- ಧಾರ್ಮಿಕ ಸಹಿಷ್ಣುತೆಯೊಂದಿಗೆ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

**ಪ್ರಶ್ನೆ 10. 1857ರ ದಂಗೆಯ ಪರಿಣಾಮಗಳಾವವು?**

**ಉತ್ತರ : 1857ರ ದಂಗೆಯ ಪರಿಣಾಮಗಳು**

- ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡು ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು.
- ಭಾರತೀಯರ ಪ್ರೀತಿ, ಬೆಂಬಲ, ವಿಶ್ವಾಸವಿಲ್ಲದಿದ್ದರೆ ನಾವು ಶಾಂತಿಯಿಂದ ಆಳ್ವಿಕೆ ಮಾಡಲು ಸಾಧ್ಯವಿಲ್ಲವೆಂಬುದನ್ನು ಬ್ರಿಟಿಷರು ಅರಿತರು.
- ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯನ್ನು ಜಾರಿಗೊಳಿಸಿದರು.
- ಇದು ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿಯನ್ನು ನೀಡಿತು.

# ರಾಜ್ಯಶಾಸ್ತ್ರ – ಅಧ್ಯಾಯ 1.

## ಭಾರತದ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದಲ್ಲಿ ನಿರುದ್ಯೋಗಕ್ಕೆ ಅತಿ ಮುಖ್ಯ ಕಾರಣಗಳೆಂದರೆ – **ಮಿತಿಮೀರಿದ ಜನಸಂಖ್ಯೆ ಹಾಗೂ ಹೆಚ್ಚಾದ ತಂತ್ರಜ್ಞಾನ ಬಳಕೆ**

2. 2011ರ ಜನಗಣತಿಯ ಪ್ರಕಾರ ಬಡತನದ ಶೇ. ದರ – **ಶೇ. 21.9%.**

3. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದು– **ಪ್ರಾದೇಶಿಕವಾದ.**

4. ಭಾರತದಲ್ಲಿ ಭಾಷಾವಾರು ರಾಜ್ಯಗಳ ರಚನೆಯಾದದ್ದು – **1956ರಲ್ಲಿ**

5. ದೇಶದ ಐಕ್ಯತೆಯ ಶತ್ರು – **ಪ್ರಾದೇಶಿಕವಾದ.**

6. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕರ್ನಾಟಕ ಸರಕಾರ ನೇಮಿಸಿದ ಸಮಿತಿ– **–ಡಿ.ಎಂ.ನಂಜುಂಡಪ್ಪ ಸಮಿತಿ – 2001ರಲ್ಲಿ**

7. ಕರ್ನಾಟಕದಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಿದ ಸಂವಿಧಾನದ ವಿಧಿ. – **ಸಂವಿಧಾನದ 371 (ಜೆ) ವಿಧಿ.**

8. ಸಮಾಜದ ಐಕ್ಯತೆಯ ಶತ್ರು – **ಕೋಮುವಾದ.**

9. ಕರ್ನಾಟಕ ಸರ್ಕಾರ 'ಸ್ತ್ರೀ ಶಕ್ತಿ' ಕಾರ್ಯಕ್ರಮ ರೂಪಿಸಿದ ಉದ್ದೇಶ – **ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ.**

10. ಭಯೋತ್ಪಾದಕ ಸಂಘಟನೆಯು ಅಮೆರಿಕಾದ ವಿಶ್ವ ವ್ಯಾಪಾರ ಕೇಂದ್ರವನ್ನು ಧ್ವಂಸಗೊಳಿಸಿದ್ದು – **2001ರಲ್ಲಿ.**

11. ಭಯೋತ್ಪಾದಕರು ಮುಂಬೈನ ತಾಜ್ ಹೋಟೆಲ್ ಮೇಲೆ ದಾಳಿಮಾಡಿದ್ದು – **2007 ನವಂಬರ್ 26ರಂದು.**

12. ಭಾರತದಲ್ಲಿ ಇತ್ತೀಚೆಗೆ ಲೋಕಪಾಲ ಸಂಸ್ಥೆಯ ಸ್ಥಾಪನೆಯ ಕುರಿತು ಸಾಕಷ್ಟು ಚರ್ಚೆಗಳು ಪ್ರಾರಂಭವಾಗಿವೆ. ಈ ಸಂಸ್ಥೆಯ ಸ್ಥಾಪನೆಯ ಉದ್ದೇಶ – **ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ನಿರುದ್ಯೋಗ ಎಂದರೇನು?**

ಉತ್ತರ : ನಿರುದ್ಯೋಗ ಎಂದರೆ ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗದ ದೊರಕದಿರುವುದಾಗಿದೆ.

**2. ಭಾರತದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಎಂತಹ ಶಿಕ್ಷಣ ಅಗತ್ಯ?**

ಉತ್ತರ : ಭಾರತದಲ್ಲಿನ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವುದು ಅಗತ್ಯವಾಗಿದೆ.

**3. ಭ್ರಷ್ಟಾಚಾರ ಎಂದರೇನು?**

ಉತ್ತರ : ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವುದು ಎಂದರ್ಥ.

**4. ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಪರಿಧಿಯೊಳಗೆ ಬರುವ ಅಂಶಗಳಾವುವು?**

ಉತ್ತರ : ಆಡಳಿತ ವ್ಯವಸ್ಥೆಯಲ್ಲಿ ಲಂಚಗುಳಿತನ, ಸ್ವಜನ ಪಕ್ಷಪಾತ, ಜಾತೀಯತೆ, ನಿಧಾನ ದ್ರೋಹ ಇವೆಲ್ಲವೂ ಭ್ರಷ್ಟಾಚಾರದ ಪರಿಧಿಯೊಳಗೆ ಬರುವ ಸಂಗತಿಗಳಾಗಿವೆ.

**5. ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ಅಂಶಗಳಾವುವು?**

ಉತ್ತರ : ಮಾನವ ಸಹಜ ಸ್ವಾರ್ಥ, ಆಪತ್ತುಗಳ ನಿವಾರಣೆಯ ಲೆಕ್ಕಾಚಾರ, ವೈಯಕ್ತಿಕ ಲಾಭ ಇವೆಲ್ಲಾ ಭ್ರಷ್ಟಾಚಾರಕ್ಕೆ ಮುಂದಾಗಲು ಪ್ರೇರೇಪಿಸುತ್ತವೆ. ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣೆ ಇಲ್ಲದಿರುವುದು. ಹಾಗೂ ದುರ್ಬಲ ಕಾನೂನು ವ್ಯವಸ್ಥೆ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುತ್ತದೆ.

**6. ಭ್ರಷ್ಟಾಚಾರದ ಚಾಲದಲ್ಲಿ ಸೇರಿಕೊಂಡಿರುವ ಅಂಶಗಳು ಯಾವುವು?**

ಉತ್ತರ : ತರಿಗೆಕಳ್ಳತನ, ಅಕ್ರಮ ದಾಸ್ತಾನು, ಕಳ್ಳಸಾಗಾಣಿಕೆ, ಆರ್ಥಿಕ ವಂಚನೆ, ಮೋಸಗಾರಿಕೆ, ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ, ಔದ್ಯೋಗಿಕ ವಂಚನೆ ಈ ಎಲ್ಲವೂ ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿದೆ.

**7. ಲಿಂಗ ತಾರತಮ್ಯ ಎಂದರೇನು?**

ಉತ್ತರ : ಭಾರತೀಯ ಸಂಪ್ರದಾಯಿಕ ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯದಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ನಿರಾಕರಿಸಿ ಶೋಷಿಸುವುದನ್ನು ಲಿಂಗ ತಾರತಮ್ಯ ಎನ್ನುವರು.

**8. ಸಂವಿಧಾನದ 371 (ಜೆ) ವಿಧಿಯು ಕರ್ನಾಟಕಕ್ಕೆ ಅತ್ಯಂತ ಪ್ರಮುಖವಾದುದು ಏಕೆ?**

ಉತ್ತರ : ನಮ್ಮ ಸಂವಿಧಾನಕ್ಕೆ 371 (ಜೆ) ವಿಧಿಯನ್ನು ಸೇರ್ಪಡೆ ಮಾಡುವ ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ.

**9. ಮಹಿಳಾ ಸಬಲೀಕರಣಕ್ಕೆ ಪ್ರೇರಣೆಯಾದ ಭಾರತದ ಮಹಾನ್ ಮಹಿಳೆಯರನ್ನು ಹೆಸರಿಸಿ.**

**ಉತ್ತರ :**



ಪ್ರತಿಭಾ ಸಿಂಗ್ ಪಾಟೀಲ್ ಪ್ರಥಮ ಮಹಿಳಾ ರಾಷ್ಟ್ರಪತಿ | ಇಂದಿರಾಗಾಂಧಿ ಪ್ರಥಮ ಮಹಿಳಾ ಪ್ರಧಾನಿ | ಸರೋಜಿನಿ ನಾಯ್ಡು ಪ್ರಥಮ ಮಹಿಳಾ ರಾಜ್ಯಪಾಲರ | ಸುಚೇತಾ ಕೃಪಲಾನಿ ಪ್ರಥಮ ಮಹಿಳಾ ಮುಖ್ಯಮಂತ್ರಿ

**10. ಕೋಮುವಾದ ಎಂದರೇನು?**

ಉತ್ತರ : ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ.

**11. ಭಯೋತ್ಪಾದಕತೆ ಎಂದರೇನು?**

ಉತ್ತರ : ಉಗ್ರಗಾಮಿ ಸಂಘಟನೆಗಳ ಉದ್ದೇಶ ಪೂರೈಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆಯನ್ನು ಭಯೋತ್ಪಾದಕತೆ ಎನ್ನುತ್ತಾರೆ.

**12. ಭಯೋತ್ಪಾದನೆಯು ಯಾವ ಯಾವ ವಿಚಾರಧಾರೆಗಳಿಂದ ಪ್ರೇರಿತವಾಗಿದೆ?**

**ಅಥವಾ**

**ಉಗ್ರಗಾಮಿತ್ವವನ್ನು ಪ್ರೇರೇಪಿಸುವ ಅಂಶಗಳಾವುವು?**

ಉತ್ತರ : ಭಯೋತ್ಪಾದನೆಯು ಧಾರ್ಮಿಕ ಮೂಲಭೂತ ಚಿಂತನೆಗಳಿಂದ, ಪ್ರತ್ಯೇಕವಾದದಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣದ್ವೇಷ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ.

**13. ಭಾರತದ ಯಾವ ನೆರೆಯ ರಾಷ್ಟ್ರಗಳು ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತವೆ ಎಂಬ ಟೀಕೆಗೆ ಒಳಗಾಗಿವೆ?**

ಉತ್ತರ : ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೀನಾ ನಮ್ಮಲ್ಲಿನ ಇಂತಹ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

**14. ಕಾರ್ಪೋರೇಟ್ ತಂತ್ರಗಾರಿಕೆ ಎಂದರೇನು?**

ಉತ್ತರ : ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾರ್ಪೋರೇಟ್ ತಂತ್ರಗಾರಿಕೆ ಎಂದು ಕರೆಯಲಾಗುತ್ತದೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಸ್ವತಂತ್ರ್ಯಾನಂತರ ಭಾರತ ದೇಶ ಎದುರಿಸುತ್ತಿರುವ ಸಮಸ್ಯೆಗಳಾವವು?**

**ಉತ್ತರ :** ಸ್ವಾತಂತ್ರ್ಯಾನಂತರ ಭಾರತ ದೇಶ ಎದುರಿಸುತ್ತಿರುವ ಸಮಸ್ಯೆಗಳು –

- ➢ ನಿರುದ್ಯೋಗ,
- ➢ ಭ್ರಷ್ಟಾಚಾರ,
- ➢ ಜಾತಿ, ಲಿಂಗ, ಪ್ರಾದೇಶಿಕ ಅಸಮಾನತೆ,
- ➢ ಕೋಮುವಾದ,
- ➢ ಮಹಿಳಾ ಅಸಮಾನತೆ,
- ➢ ಭಯೋತ್ಪಾದಕತೆ,
- ➢ ಕಾರ್ಪೋರೇಟ್ ತಂತ್ರಗಾರಿಕೆ ಮುಂತಾದವು.

PSG

**2. ಭಾರತ ಎದುರಿಸುತ್ತಿರುವ ಸಮಸ್ಯೆಗಳನ್ನು ಯಾವ ರೀತಿ ನಿಗ್ರಹಿಸುವ ಪ್ರಯತ್ನ ಮಾಡಬೇಕಿದೆ?**

ಉತ್ತರ :

- ➢ ಸಮಸ್ಯೆಗಳಿಗೆ ಸೂಕ್ತ ಎನಿಸುವ ಮಾನವೀಯ ಪರಿಹಾರಗಳನ್ನು ಕಂಡುಕೊಳ್ಳಬೇಕು.
- ➢ ಉತ್ತಮ ಶಾಸನಾತ್ಮಕ, ಸಾಮಾಜಿಕ ಸುಧಾರಣೆಗಳು, ದಕ್ಷ ಆಡಳಿತ,
- ➢ ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ,
- ➢ ಜನತೆಯ ಸಹಕಾರಗಳಿಂದ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ನಡೆಯಬೇಕು.

**3. ನಿರುದ್ಯೋಗ ಸಮಸ್ಯೆಗೆ ಕಾರಣಗಳಾವುವು? ಅಥವಾ ಭಾರತದಲ್ಲಿ ನಿರುದ್ಯೋಗವು ಒಂದು ದೊಡ್ಡ ಸಮಸ್ಯೆಯಾಗಿ ಬೆಳೆದಿದೆ ಏಕೆ? (ಎಪ್ರಿಲ್ 2019)**

**ಉತ್ತರ : ನಿರುದ್ಯೋಗ ಸಮಸ್ಯೆಗೆ ಕಾರಣಗಳು –**

- ➢ ಮಿತಿಮೀರಿದ ಜನಸಂಖ್ಯೆ,
- ➢ ಹೆಚ್ಚಾದ ತಂತ್ರಜ್ಞಾನದ ಬಳಕೆ,
- ➢ ನೈಸರ್ಗಿಕ ಸಂಪನ್ಮೂಲಗಳ ಬಳಕೆ,
- ➢ ಕೃಷಿಯ ಮೇಲಿನ ಅಧಿಕ ಅವಲಂಬನೆ,
- ➢ ಗೃಹ ಕೈಗಾರಿಕೆಗಳ ನಾಶ,
- ➢ ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**4. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳಾವುವು?**

**ಉತ್ತರ : ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳು,**

- ➢ ವಿವಿಧ ರೀತಿಯ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳ ಜಾರಿ.
- ➢ ಜನತೆಗೆ ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡುವುದು.
- ➢ ಸ್ವಯಂ ಉದ್ಯೋಗ ಕೈಗೊಳ್ಳಲು ಬಂಡವಾಳವನ್ನು ಸಾಲದ ರೂಪದಲ್ಲಿ ನೀಡುವುದು.
- ➢ ಸಹಾಯಧನ ನೀಡುವ ಮೂಲಕ ಸ್ವಯಂ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.
- ➢ ಉದ್ಯೋಗ ಪಡೆಯಲು ಬೇಕಾದ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ನೀಡುವುದು.
- ➢ ಜನರು ಸ್ವಯಂ ಉದ್ಯೋಗಗಳನ್ನು ಕೈಗೊಳ್ಳಲು ವೃತ್ತಿ ಶಿಕ್ಷಣವನ್ನು ನೀಡುವುದು.

**5. ಭ್ರಷ್ಟಾಚಾರವು ಒಂದು ಸಾಮಾಜಿಕ ಪಿಡುಗುಗಾಗಿದೆ ಎಂದು ಹೇಗೆ ಹೇಳುವಿರಿ.**

**ಉತ್ತರ : ಭ್ರಷ್ಟಾಚಾರವು ಒಂದು ಸಾಮಾಜಿಕ ಪಿಡುಗಾಗಿದೆ ಹೇಗೆಂದರೆ –**

- ಭ್ರಷ್ಟಾಚಾರ ಎಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ ನೀಡುವುದು ಎಂದರ್ಥ.
- ಭ್ರಷ್ಟಾಚಾರವು ಸರಿಯಾದ ಮತ್ತು ನ್ಯಾಯಬದ್ಧವಾದ ಕಾರ್ಯಾಚಾರಣೆಯಿಂದ ಸ್ಪಷ್ಟವಾಗಿ ದೂರ ಸರಿಯುವಿಕೆಯನ್ನು ಸೂಚಿಸುತ್ತದೆ.
- ಸ್ವಾರ್ಥ & ತಪ್ಪು ವಿಧಾನದ ದುರ್ಬಳಕೆಯಿಂದ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡುತ್ತದೆ.
- ಸಾರ್ವಜನಿಕ ಜೀವನವನ್ನು ಹಾಳುಮಾಡುತ್ತದೆ.
- ಈ ಕಾರಣಗಳಿಂದ ಇದು ಒಂದು ಸಾಮಾಜಿಕ ಪಿಡುಗಾಗಿದೆ.

**6. ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ಹೇಗೆ ಎಡೆಮಾಡಿಕೊಡುತ್ತದೆ?**

ಉತ್ತರ : ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೂ ಎಡೆಮಾಡಿಕೊಡುತ್ತದೆ. ಹೇಗೆಂದರೆ –

- ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೂ, ವಂಚನೆಗಳಿಗೂ ಅನುವು ಮಾಡಿಕೊಡುತ್ತದೆ.
- ತರಿಗೆಕಳ್ಳತನ, ಅಕ್ರಮ ದಾಸ್ತಾನಿಗೆ ಸಹಕರಿಸುತ್ತದೆ.
- ಕಳ್ಳಸಾಗಾಣಿಕೆ, ಆರ್ಥಿಕ ವಂಚನೆ, ಮೋಸಗಾರಿಕೆ ನಡೆಯುತ್ತದೆ.
- ವಿದೇಶಿ ವಿನಿಮಯದ ಕಾನೂನು ಉಲ್ಲಂಘನೆ, ಔದ್ಯೋಗಿಕ ವಂಚನೆ ಈ ಎಲ್ಲವೂ ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿದೆ.

**7. ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಹುದು? ಅಥವಾ ಭ್ರಷ್ಟಾಚಾರ ನಿಯಂತ್ರಣಕ್ಕಿರುವ ಮಾರ್ಗೋಪಾಯಗಳನ್ನು ತಿಳಿಸಿ.**

**ಉತ್ತರ : ಭ್ರಷ್ಟಾಚಾರವನ್ನು ಈ ಕೆಳಗಿನ ಅಂಶಗಳ ಮೂಲಕ ತಡೆಗಟ್ಟಬಹುದು.**

- ಭ್ರಷ್ಟಾಚಾರ ನಿಗ್ರಹಕ್ಕೆ ಪ್ರಭಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ.
- ಒಳ್ಳೆಯ ರಾಜಕೀಯ ನಾಯಕತ್ವ, ಉತ್ತಮ ಅಧಿಕಾರಿ ವರ್ಗ ಅವಶ್ಯ.
- ರಾಜಕೀಯ ಪರಿಜ್ಞಾನ ಹೊಂದಿದ ಜನತೆ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬೇಕು.
- ಲೋಕಪಾಲ, ಲೋಕಾಯುಕ್ತರಂತಹ ಸಂಸ್ಥೆಗಳು ಭ್ರಷ್ಟಾಚಾರ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲವು.
- ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸುವುದು.
- ಕಛೇರಿಯ ಕಾರ್ಯನಿರ್ವಹಣೆಯ ವೇಗವನ್ನು ಹೆಚ್ಚಿಸುವುದು.
- ಭ್ರಷ್ಟಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವುದು.
- ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದರ ಮೂಲಕ ಸಾಧ್ಯವಾದಷ್ಟು ಬೇಗನೆ ನ್ಯಾಯ ನಿರ್ಣಯ ನೀಡುವುದು.

**8. ಲಿಂಗ ತಾರತಮ್ಯ ಹೋಗಲಾಡಿಸಲು ಸರ್ಕಾರಗಳು ಕೈಗೊಂಡ ಕ್ರಮಗಳಾವುವು?**

**ಉತ್ತರ : ಲಿಂಗ ತಾರತಮ್ಯ ಹೋಗಲಾಡಿಸಲು ಸರ್ಕಾರಗಳು ಕೈಗೊಂಡ ಕ್ರಮಗಳು**

- ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡಲಾಗಿದೆ.
- ರಾಜಕೀಯವಾಗಿಯೂ ಸ್ಥಳೀಯ ಸಂಸ್ಥೆಗಳಲ್ಲಿ 1/3 ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳ ಮೀಸಲಾತಿಯನ್ನು ನೀಡಲಾಗಿದೆ.
- ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿಶತ 50ಕ್ಕಿಂತ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡಲಾಗಿದೆ.
- ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನತೆಯ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನ ಕೈಗೊಳ್ಳಲಾಗಿದೆ.

**9. ಲಿಂಗ ಸಮಾನತೆಯನ್ನು ಸಾಧಿಸಲು ನೀವು ನೀಡಬಹುದಾದ ಸಲಹೆಗಳೇನು?**

ಉತ್ತರ :

- ಹೆಣ್ಣು ಬ್ರೂಣ ಹತ್ಯೆ ನಿಯಂತ್ರಣ
- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡುವುದು.
- ಲಿಂಗ ಭೇದವಿಲ್ಲದೆ ಅವಕಾಶಗಳಲ್ಲಿ ಸಮಾನತೆ ಒದಗಿಸುವುದು.
- ಕೌಟಂಬಿಕ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವುದು.

**10. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳಾವುವು?**

**ಉತ್ತರ : ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳು**

- ಭಾರತ ಸಂವಿಧಾನದ 371 ನೇ ವಿಧಿಗೆ A ಯಿಂದ J ವರೆಗೆ ತಿದ್ದುಪಡಿಗಳ ಮೂಲಕ ಸೇರ್ಪಡೆ ಮಾಡಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನಗಳನ್ನು ನೀಡಲಾಗಿದೆ.
- ಕರ್ನಾಟಕದಲ್ಲಿ 2001ರಲ್ಲಿ ಡಿ.ಎಂ.ನಂಜುಂಡಪ್ಪ ಸಮಿತಿಯು ಪ್ರಾದೇಶಿಕ ಅಸಮತೋಲನವನ್ನು ಕುರಿತು ವರದಿ ನೀಡಿದೆ.
- ಸಂವಿಧಾನದ ವಿಧಿ 371 (ಜೆ) ಮೂಲಕ ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

**11. ಕೋಮುವಾದ ಸಮಾಜದ ಐಕ್ಯತೆಗೆ ಮಾರಕ. ಹೇಗೆ? ಅಥವಾ ಕೋಮುವಾದದಿಂದಾಗುವ ದುಷ್ಪರಿಣಾಮಗಳೇನು?**

**ಉತ್ತರ : ಕೋಮುವಾದದಿಂದಾಗುವ ದುಷ್ಪರಿಣಾಮಗಳು –**

**ಕೋಮುವಾದ ಸಮಾಜದ ಐಕ್ಯತೆಗೆ ಮಾರಕ ಹೇಗೆಂದರೆ –**

- ಕೋಮುವಾದವು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
- ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯನ್ನು ಉಂಟುಮಾಡುತ್ತದೆ.
- ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ ಅಪಾಯ ತಂದೊಡ್ಡುವ ಶಕ್ತಿಯಾಗಿದೆ.
- ಕೋಮುವಾದವು ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
- ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
- ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಮುಂತಾದ ಅನಗತ್ಯ ತೊಂದರೆಗಳಿಗೂ ಕಾರಣವಾಗುತ್ತದೆ.

**12. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳಾವುವು?**

**ಉತ್ತರ : ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳು**

- ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು.
- ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣಬೇಕು.
- ಜಾತ್ಯಾತೀತ ಮನೋಭಾವಕ್ಕೆ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ ನೀಡಬೇಕು.
- ಮೇಲುಸ್ತರದ ರಾಷ್ಟ್ರೀಯ ಚಿಂತನೆಗೆ ಹೆಚ್ಚು ಒತ್ತು ಕೊಡಬೇಕು.
- ಎಲ್ಲಾ ಜನರಲ್ಲಿ ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು.
- ಜಾತ್ಯಾತೀತ ತತ್ವಕ್ಕೆ ಬದ್ಧರಾಗುವ ಮನೋಧರ್ಮ ಬೇಕು.

**13. ಮಹಿಳೆಯ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು? ಅಥವಾ ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?**

**ಉತ್ತರ :ಮಹಿಳೆಯ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು– ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳು –**

- ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
- ಮಹಿಳಾ ಶಿಕ್ಷಣ, ಬಾಲ್ಯ ವಿವಾಹ ನಿಷೇದ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.
- ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಮೂಲಕ ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಪ್ರಯತ್ನಿಸಿದೆ.
- ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ & ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳು.
- ಶಾಸಕಾಂಗ ಮತ್ತು ಸಂಸತ್ತಿನಲ್ಲಿ ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ.
- ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ.
- ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿ.

**14. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವುವು? ಅಥವಾ ಭಯೋತ್ಪಾದನೆಯು ಅನೇಕ ಹೀನ ಕೃತ್ಯಗಳಿಗೆ ಎಡೆ ಮಾಡಿಕೊಡುತ್ತದೆ ಹೇಗೆ?**

**ಉತ್ತರ : ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳು.**

- ಭಯೋತ್ಪಾದನೆಯು ಜನಸಾಮಾನ್ಯರಿಗೆ & ಆಸ್ತಿ-ಪಾಸ್ತಿಗಳಿಗೆ ಹಾನಿ ಉಂಟುಮಾಡುತ್ತದೆ.
- ಉಗ್ರಮಾಮಿತ್ವ ಮಾನಸಿಕ ವೇದನೆಯನ್ನು ಉಂಟುಮಾಡುತ್ತದೆ.
- ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ.
- ಭಯೋತ್ಪಾದನೆಯಿಂದ ನಿರ್ದಿಷ್ಟ ಭಾಷವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಾರೆ.
- ಭಯೋತ್ಪಾದಕರ ಆತ್ಮಾಹುತಿ ದಾಳಿಯಿಂದಾಗಿ ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಛೇರಿಗಳು, ಕಿಕ್ಕಿರಿದ ಜನಜಂಗುಳಿ ಪ್ರದೇಶ & ಮಾರುಕಟ್ಟೆ ಪ್ರದೇಶಗಳು ನಾಶವಾಗುತ್ತವೆ.

**15. ಭಯೋತ್ಪಾದಕರ ಕಾರ್ಯಚಟುವಟಿಕೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಭಯೋತ್ಪಾದಕರ ಕಾರ್ಯಚಟುವಟಿಕೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.**

- ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು ಪಡೆಯುವ ಉದ್ದೇಶದಿಂದ ನಡೆಯುತ್ತದೆ.
- ಭಯೋತ್ಪಾದಕರು ನಡೆಸುವ ವಿನಾಶಕಾರಿ ಕೃತ್ಯಗಳು ಸಾಕಷ್ಟು ಪೂರ್ವಯೋಜಿತವಾಗಿಯೇ ರೂಪುಗೊಳ್ಳುತ್ತವೆ.
- ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತಿ ಹೊಂದಿದವರ ಜಾಲವನ್ನು ಹೊಂದಿರುತ್ತಾರೆ.
- ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ.
- ರಸ್ತೆಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಚೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದವುಗಳು ಈ ಭಯೋತ್ಪಾದಕರ ಹೊಡೆತಕ್ಕೆ ಸಿಗುವ ಸಾಮಾನ್ಯ ತಾಣಗಳಾಗಿವೆ.

PSG

- ಆತ್ಮಾಹುತಿ ದಾಳಿ, ವಿಮಾನಗಳ್ಳತನ, ಗುಂಡಿನಕಾಳಗ, ಬಾಂಬುದಾಳಿ, ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

**16 ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವವು?**

ಉತ್ತರ : **ಭಯೋತ್ಪಾದನೆಯ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳು**

- ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದನೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ.
- ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ.
- ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ.
- ಭೀತಿವಾದವನ್ನು ನಿಗ್ರಹಿಸಲು ವಿಶೇಷ ಪರಿಣಿತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ.
- ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಗೆ ಬಳಸಲಾಗುತ್ತದೆ.

**17. ಕಾರ್ಪೋರೇಟ್ ತಂತ್ರಗಾರಿಕೆಯಿಂದಾಗುವ ಪರಿಣಾಮಗಳೇನು? ಅಥವಾ ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಸ್ತುತ ಬೆಳವಣಿಗೆಯನ್ನು ಕುರಿತು ವಿವರಿಸಿ.**

**ಉತ್ತರ : ಕಾರ್ಪೋರೇಟ್ ತಂತ್ರಗಾರಿಕೆಯಿಂದಾಗುವ ಪರಿಣಾಮಗಳು ಅಥವಾ ಕಾರ್ಪೋರೇಟ್ ತಂತ್ರಗಾರಿಕೆಯ ಪ್ರಸ್ತುತ ಬೆಳವಣಿಗೆ**

- ಕಾರ್ಪೋರೇಟ್ ತಂತ್ರಗಾರಿಕೆ ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ.
- ಪ್ರಭುತ್ವ ನಿರ್ಧಾರಗಳನ್ನು ತೆಗೆದುಕೊಳ್ಳುವುದರ ಮೇಲು ಕಾರ್ಪೋರೇಟ್ ತಂತ್ರಗಾರಿಕೆ ತನ್ನ ಪ್ರಭಾವ ಬೀರುತ್ತದೆ.
- ನಾಗರಿಕ ಸಮಾಜವನ್ನು ಅಭಿವೃದ್ಧಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಬಡತನ ನಿರ್ಮೂಲನೆ, ಉತ್ತಮ ಆರೋಗ್ಯ, ಶಿಕ್ಷಣ, ವಸತಿ, ಆಹಾರ ಇತ್ಯಾದಿ ಮೂಲ ಸೇವೆಗಳನ್ನು ಬದಲಿಸಲು ಪೂರಕವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿದೆ.
- ಕಾರ್ಪೋರೇಟ್ ಸಮಾಜಿಕ ಭದ್ರತಾ ಯೋಜನೆಯ ಲಾಭವನ್ನು ಪಡೆಯಲು ಭಾರತೀಯ ಸಮಾಜದಲ್ಲಿ ಸುಸ್ಥಿರ ಜಾಗ್ರುತಿಯನ್ನು ಮೂಡಿಸುತ್ತಿದೆ.

## ಅಧ್ಯಾಯ 2.
## ಭಾರತದ ವಿದೇಶಾಂಗ ನೀತಿ

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಜವಾಹರಲಾಲ ನೆಹರುರವರು ರೇಡಿಯೋ ಭಾಷಣದಲ್ಲಿ ವಿದೇಶಾಂಗ ನೀತಿಯ ರೂಪುರೇಷೆಗಳ ಬಗ್ಗೆ ಅರಿವು ಮೂಡಿಸಿದ್ದು – **1946 ಸೆಪ್ಟೆಂಬರ್ 7ರಂದು.**
2. ಭಾರತದ ವಿದೇಶಾಂಗ ನೀತಿಯನ್ನು ಇವರ ವಿದೇಶಾಂಗ ನೀತಿಯೆಂದು ವರ್ಣಿಸಲಾಗಿದೆ. – **ಜವಾಹರಲಾಲ ನೆಹರು.**
3. ಭಾರತದ ವಿದೇಶಾಂಗ ನೀತಿಯ ಶಿಲ್ಪಿ – ಪ್ರಧಾನಿ **ಜವಾಹರಲಾಲ ನೆಹರು.**
4. 1954ರ ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದವರು – **ಭಾರತದ ಪ್ರಧಾನಿ ಜವಾಹರಲಾಲ ನೆಹರು ಮತ್ತು ಚೀನಾದ ಅಧ್ಯಕ್ಷ ಚೌ ಎನ್ ಲಾಯ್.**
5. ಭಾರತವು ಅಲಿಪ್ತ ನೀತಿಯನ್ನು ಅನುಸರಿಸಿದ್ದು ಈ ಸಂದರ್ಭದಲ್ಲಿ – **ಜಗತ್ತು ಎರಡು ಬಣಗಳಾಗಿ ವಿಭಜನೆಯಾದಾಗ.**
6. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿ – **ಅಲಿಪ್ತನೀತಿ.**
7. ಪ್ರಪಂಚದಲ್ಲಿ ಶೀತಲ ಸಮರ ನಡೆದದ್ದು ಈ ಎರಡು ರಾಷ್ಟ್ರಗಳ ಬಣಗಳ ನಡುವೆ – **ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ರಷ್ಯಾ**
8. ನಮ್ಮ ದೇಶದ ವಿದೇಶಾಂಗ ನೀತಿಯನ್ನು ಸುಧಾರಿಸಿ ಪಾಕಿಸ್ತಾನದೊಂದಿಗೆ ಮೈತ್ರಿ ಬಾಂಧವ್ಯಕ್ಕೆ ಪ್ರಯತ್ನಿಸಿದ ಭಾರತದ ಪ್ರಧಾನಿ – **ಅಟಲ್ ಬಿಹಾರಿ ವಾಜಪೇಯಿ.**
9. ಭಾರತದ ವಿದೇಶಾಂಗ ನೀತಿ ವಸಾಯತುಶಾಹಿತ್ವವನ್ನು ವಿರೋಧಿಸುತ್ತದೆ ಏಕೆಂದರೆ ಭಾರತವು– **ಆಂಗ್ಲರ ಆಡಳಿತದಿಂದ ವಸಾಹತು ನೀತಿಯನ್ನು ಸ್ವತಃ ಅನುಭವಿಸಿದ್ದರಿಂದ.**
10. ಆಫ್ರಿಕಾದ ಗಾಂಧಿ ಎಂದು ಪ್ರಖ್ಯಾತಿ ಹೊಂದಿದವರು – **ನೆಲ್ಸನ್ ಮಂಡೇಲಾ.**
11. ದಕ್ಷಿಣಾ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ವಿರೋಧಿ ಚಳುವಳಿಯನ್ನು ಆರಂಭಿಸಿದವರು – **ನೆಲ್ಸನ್ ಮಂಡೇಲಾ.**
12. ಭಾರತವು ನೆಲ್ಸನ್ ಮಂಡೇಲಾರನ್ನು ಬೆಂಬಲಿಸಿತು ಏಕೆಂದರೆ – **ಭಾರತದ ವಿದೇಶಾಂಗ ನೀತಿಯು ವರ್ಣಭೇದ ನೀತಿಯನ್ನು ವಿರೋಧಿಸುತ್ತದೆ.**
13. ಭಾರತವು 1949 ಮತ್ತು 1955ರಲ್ಲಿ ದೆಹಲಿ ಮತ್ತು ಬಾಡೂಂಗ್‌ಗಳಲ್ಲಿ ಜರುಗಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾರತದ ಪ್ರತಿಪಾದನೆ – **ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ವಿದೇಶಾಂಗ ನೀತಿ ಎಂದರೇನು?**

ಉತ್ತರ : ಒಂದು ರಾಷ್ಟ್ರವು ಅನ್ಯರಾಷ್ಟ್ರದೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿಯನ್ನು ವಿದೇಶಾಂಗ ನೀತಿ ಎಂದು ಕರೆಯುವರು.

**2. ಸಾರ್ವಭೌಮ ರಾಷ್ಟ್ರ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎಂದರೇನು?**

ಉತ್ತರ : ಒಂದು ರಾಷ್ಟ್ರ ಯಾವುದೇ ಬಗೆಯಲ್ಲಿ ಆಂತರಿಕವಾಗಿರಲಿ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ಅಥವಾ ಪರಮಾಧಿಕಾರವುಳ್ಳ ರಾಷ್ಟ್ರ ಎಂದು ಕರೆಯುತ್ತಾರೆ.

**3. ಭಾರತದ ವಿದೇಶಾಂಗ ನೀತಿಯನ್ನು ನೆಹರು ವಿದೇಶಾಂಗ ನೀತಿ ಎಂದು ಕರೆಯುತ್ತಾರೆ. ಏಕೆ?**

ಉತ್ತರ : ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ನೀತಿಯನ್ನು ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರು ವಿದೇಶಾಂಗ ನೀತಿ ಎಂದು ವರ್ಣಿಸಲಾಗಿದೆ.

**4. ಅಲಿಪ್ತ ನೀತಿ ಎಂದರೇನು?**

ಉತ್ತರ : ದ್ವಿತೀಯ ಮಹಾಯುದ್ಧದ ನಂತರ ಜಗತ್ತು ಅಮೆರಿಕಾ ಮತ್ತು ರಷ್ಯಾ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳಾಗಿ ವಿಭಾಗವಾಯಿತು. ಆದರೆ ಭಾರತವು ಈ ಎರಡು ಬಣಗಳಲ್ಲಿ ಯಾವ ಬಣವನ್ನು ಸೇರದೆ ತಟಸ್ಥವಾಯಿತು. ಇದನ್ನೇ ಅಲಿಪ್ತ ನೀತಿ ಎನ್ನುತ್ತಾರೆ.

**5. ಅಲಿಪ್ತ ನೀತಿಯಯಿಂದ ಭಾರತಕ್ಕಾದ ಲಾಭವೇನು?**

ಉತ್ತರ : 2ನೇ ಜಾಗತಿಕ ಮಹಾಯುದ್ಧದ ನಂತರ ಭಾರತವು ಯಾವುದೇ ಶಕ್ತಿ ಬಣಕ್ಕೆ ಸೇರದೇ ಅಲಿಪ್ತ ನೀತಿಯನ್ನು ಅನುಸರಿಸಿತು. ಜೊತೆಗೆ ಎರಡು ಬಣಗಳ ವಿಶ್ವಾಸ ಗಳಿಸುವುದರ ಮೂಲಕ ಅಮೇರಿಕದಿಂದ ಆರ್ಥಿಕ ನೆರವನ್ನು ಮತ್ತು ಸೋವಿಯತ್ ರಷ್ಯಾದಿಂದ ಭದ್ರತಾ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಯಿತು.

**6. ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದ ಭಾರತದ ಪ್ರಧಾನಮಂತ್ರಿಗಳು ಯಾರು?**

ಉತ್ತರ : ಲಾಲಬಹದ್ದೂರ ಶಾಸ್ತ್ರಿ ಮತ್ತು ಇಂದಿರಾಗಾಂಧಿಯವರು ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದರು.

**6. ವಸಾಹತು ಶಾಹಿತ್ವ ಎಂದರೇನು?**

ಉತ್ತರ : ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತುಶಾಹಿತ್ವ ಎಂದು ಕರೆಯುತ್ತಾರೆ.

**7. ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ಭಾರತ ಯಾವ ಸಮ್ಮೇಳನದಲ್ಲಿ ತನ್ನ ನಿಲುವನ್ನು ಪ್ರತಿಪಾದಿಸಿತು?**

ಉತ್ತರ : ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ದೆಹಲಿ ಮತ್ತು ಬಾಡೂಂಗ್‌ನಲ್ಲಿ ಜರುಗಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ (1949 ಮತ್ತು 1955) ಭಾರತ ತನ್ನ ನಿಲುವನ್ನು ಪ್ರತಿಪಾದಿಸಿತು.

**8. ವರ್ಣಭೇದ ನೀತಿ ಎಂದರೇನು?**

ಉತ್ತರ : ಒಂದು ಜನಾಂಗದ ಅಥವಾ ವರ್ಣದ ಜನಸಮುದಾಯ ಇನ್ನೊಂದು ಜನಾಂಗ ಅಥವಾ ವರ್ಣದ ಜನಸಮುದಾಯವನ್ನು ತಮಗಿಂತ ಕೀಳು ಎಂದು ಭಾವಿಸಿ ಅವರನ್ನು ಕಡೆಗಣಿಸುವ ಅಥವಾ ವಿರೋಧಿಸುವ ನೀತಿಗೆ ವರ್ಣಭೇದ ನೀತಿ ಎಂದು ಕರೆಯಲಾಗುವುದು.

**9. ವರ್ಣಬೇದ ನೀತಿಯು ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಹೇಗೆ ಮಾರಕವಾಗಿದೆ?**

**ಅಥವಾ**

**ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದ ಎಂಬ ವಿದೇಶಾಂಗ ನೀತಿಯನ್ನು ಭಾರತ ಹೇಳಿದೆ. ಏಕೆ?**

ಉತ್ತರ: ವರ್ಣಬೇದ ನೀತಿಯು ಅಮಾನವೀಯವಾಗಿದ್ದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಇದು ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ. ಆದ್ದರಿಂದ ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದ ಎಂಬ ವಿದೇಶಾಂಗ ನೀತಿಯನ್ನು ಭಾರತ ಹೇಳಿದೆ.

**10. ನಿಶ್ಯಸ್ತ್ರೀಕರಣ ಎಂದರೇನು? ( ಎಪ್ರಿಲ್ 2019 )**

ಉತ್ತರ : ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಶ್ಯಸ್ತ್ರೀಕರಣವಾಗಿದೆ.

**11. ಭಾರತವು ಎಂತಹ ನಿಶ್ಯಸ್ತ್ರೀಕರಣವನ್ನು ಪ್ರತಿಪಾಧಿಸುತ್ತದೆ?**

ಉತ್ತರ : ಭಾರತವು ಗುಣಾತ್ಮಕ ಮತ್ತು ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ.

**12. ಭಾರತ ಗುಣಾತ್ಮಕ ಮತ್ತು ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ ಏಕೆ?**

ಉತ್ತರ : ಬಾಹ್ಯ ಆಕ್ರಮಣಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಮತ್ತು ಭಯೋತ್ಪಾದಕತೆಯನ್ನು ಮಟ್ಟಹಾಕುವ ಸಲುವಾಗಿ ಶಾಂತಿಪ್ರೀಯ ರಾಷ್ಟ್ರವಾದ ಭಾರತವು ಸಂಪೂರ್ಣ ನಿಶ್ಯಸ್ತ್ರೀಕರಣಕ್ಕೆ ಬದ್ಧವಾಗಿದ್ದರೂ ಸಹ ಗುಣಾತ್ಮಕ ಮತ್ತು ಗಾತ್ರದ ಪರಿಮಿತಿಯಲ್ಲಿನ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ.

**13. ಇಂದು ಜಗತ್ತಿನಲ್ಲಿ ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದೆ ಏಕೆ?**

ಉತ್ತರ : ಇಂದು ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾವ್ಯೂಹ ಅತ್ಯಗತ್ಯವಾಗಿರುವುದರಿಂದ ಜಗತ್ತಿನಲ್ಲಿ ಸಂಪೂರ್ಣ ನಿಶ್ಯಸ್ತ್ರೀಕರಣ ಸಾಧ್ಯವಾಗದ ವಿಚಾರವಾಗಿದೆ.

**14. ಭಾರತ ಸಂವಿಧಾನದ 51ನೇ ವಿಧಿಯು ಎಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ?**

ಉತ್ತರ : ಭಾರತ ಸಂವಿಧಾನದ 51ನೇ ವಿಧಿಯು ಅಂತರರಾಷ್ಟ್ರೀಯ ಶಾಂತಿ, ಸಹಬಾಳ್ವೆ ಮತ್ತು ಅಂತರರಾಷ್ಟ್ರೀಯ ಕಾನೂನಿಗೆ ಗೌರವ ಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ಏಕೆ? ವಿವರಿಸಿ.**

**ಉತ್ತರ : ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿದೇಶಾಂಗ ನೀತಿ ಅತ್ಯಗತ್ಯ ಏಕೆಂದರೆ –**

- ಆಧುನಿಕ ಜಗತ್ತಿನಲ್ಲಿ ಮಾನವನಂತೆ ರಾಷ್ಟ್ರಗಳೂ ಸಹ ಏಕಾಂಗಿಯಾಗಿರಲು ಸಾಧ್ಯವಿಲ್ಲ.
- ಪ್ರತಿ ರಾಷ್ಟ್ರವು ತನ್ನದೇ ವಿದೇಶಾಂಗನೀತಿಯನ್ನು ಹೊಂದಿರಲೇಬೇಕು.
- ಪ್ರತಿಯೊಂದು ರಾಷ್ಟ್ರಕ್ಕೂ ತನ್ನ ರಾಷ್ಟ್ರದ ಅಭಿವೃದ್ಧಿಗೆ ಮತ್ತೊಂದು ರಾಷ್ಟ್ರದ ಸಹಾಯ ಪಡೆಯುವುದು ಅನಿವಾರ್ಯ.
- ಪ್ರತಿಯೊಂದು ರಾಷ್ಟ್ರವೂ ತನ್ನ ದೇಶದ ರಕ್ಷಣೆಗಾಗಿ ಮತ್ತೊಂದು ರಾಷ್ಟ್ರದೊಂದಿಗೆ ಸಂಬಂಧವಿರಿಸಿಕೊಳ್ಳಬೇಕಾಗಿದೆ.
- ಆಧುನಿಕ ಜಗತ್ತು 'ವಸುದೈವ ಕುಟುಂಬ' ಎಂಬಂತಾಗಿದ್ದು ಪ್ರತಿಯೊಂದು ರಾಷ್ಟ್ರಕ್ಕೂ ಸಹಾಯ ಮತ್ತು ಸಹಕಾರ ಅತ್ಯಗತ್ಯವಾಗಿದೆ.

**2. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳೇನು? ಅಥವಾ ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?**

**ಉತ್ತರ : ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳು ಅಥವಾ ಭಾರತದ ವಿದೇಶಾಂಗ ನೀತಿಯ ಗುರಿಗಳು**

- ರಾಷ್ಟ್ರದ ಭದ್ರತೆ.
- ರಾಷ್ಟ್ರದ ಆರ್ಥಿಕ ಸಂವರ್ಧನೆ.
- ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
- ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂಧಿಸುವುದು. ಅಥವಾ ಹತ್ತಿಕ್ಕುವುದು.
- ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು.

**3. ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಅಂಶಗಳಾವುವು? ಅಥವಾ ಭಾರತದ ವಿದೇಶಾಂಗ ನೀತಿಯು ಯಾವ ಅಂಶಗಳ ಪ್ರಭಾವದಿಂದ ರೂಪಗೊಂಡಿದೆ?**

ಉತ್ತರ :ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾದ ಅಂಶಗಳೆಂದರೆ–

- ರಾಷ್ಟ್ರೀಯ ಹಿತಾಸಕ್ತಿಗಳು,
- ಭೌಗೋಳಿಕ ಅಂಶಗಳು,
- ರಾಜಕೀಯ ಪರಿಸ್ಥಿತಿ,
- ಆರ್ಥಿಕ ವ್ಯವಸ್ಥೆ,
- ರಕ್ಷಣಾ ಸಾಮರ್ಥ್ಯ,
- ಜನಾಭಿಪ್ರಾಯ,
- ಅಂತರಾಷ್ಟ್ರೀಯ ಪರಿಸರ

**4. ಭಾರತದ ವಿದೇಶಾಂಗ ನೀತಿಯನ್ನು ವಿವರಿಸಿ. ಅಥವಾ ವಿದೇಶಾಂಗ ನೀತಿಯು ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿ ಹೇಗೆ? ಅಥವಾ ಭಾರತದ ವಿದೇಶಾಂಗ ನೀತಿಯು ಒಳಗೊಂಡಿರುವ ಪ್ರಮುಖ ಅಂಶಗಳು ಯಾವುವು? ಅಥವಾ ಭಾರತದ ವಿದೇಶಾಂಗ ನೀತಿಯ ಲಕ್ಷಣಗಳಾವುವು?**

**ಉತ್ತರ : ಭಾರತದ ವಿದೇಶಾಂಗ ನೀತಿಯು ಒಳಗೊಂಡಿರುವ ಪ್ರಮುಖ ಅಂಶಗಳು.–**

- ದಿವಂಗತ ಜವಾಹರಲಾಲ ನೆಹರುವರು ಭಾರತದ ವಿದೇಶಾಂಗ ನೀತಿಯ ಶಿಲ್ಪಿಯಾಗಿದ್ದಾರೆ.
- ಭಾರತದ ವಿದೇಶಾಂಗ ನೀತಿಯಲ್ಲಿ ಅಹಿಂಸಾತತ್ವ, ಆದರ್ಶವಾದ, ಮಾನವೀಯಅನುಕಂಪ, ವ್ಯಾವಹಾರಿಕ ಕಾಠಿಣತೆಯನ್ನು ಕಾಣಬಹುದು.
- ಭಾರತದ ವಿದೇಶಾಂಗ ನೀತಿಯು ಶಾಂತಿ ಹಾಗೂ ಸಹಬಾಳ್ವೆ ತತ್ವದ ಮೇಲೆ ಆಧಾರಿತವಾಗಿದೆ.
- ಎಲ್ಲಾ ರಾಷ್ಟ್ರಗಳೊಂದಿಗೆ ಸ್ನೇಹ ಹಾಗೂ ಸಹಬಾಳ್ವೆಯೊಂದಿಗೆ ಸಂಬಂಧಗಳನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿತು.
- ಅಲಿಪ್ತನೀತಿ & ಪಂಚಶೀಲತತ್ವಗಳನ್ನು ಒಳಗೊಂಡಿದೆ.

**5. ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಏಕೆ? ವಿವರಿಸಿ. (ಎಪ್ರಿಲ್ 2019)**

**ಉತ್ತರ : ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ ಏಕೆಂದರೆ –**

- ಭಾರತವು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ.
- ಭಾರತವು ವಿಪುಲವಾದ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲವನ್ನು ಹೊಂದಿದೆ.
- ಭಾರತವು ಪರಿಣಿತ ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯವನ್ನು ಹೊಂದಿದೆ.
- ಭಾರತವು ಬಲಾಡ್ಯ ಮಿಲಿಟರಿ ಪಡೆಯನ್ನು ಹೊಂದಿದೆ.
- ಜಗತ್ತಿನ ಕೆಲವೇ ಕೆಲವು ರಾಷ್ಟ್ರಗಳು ತಮ್ಮದೇ ಆದ ಉತ್ತಮ ವಿದೇಶಾಂಗ ನೀತಿಯನ್ನು ಅನುಸರಿಸುತ್ತಿದ್ದು ಅವುಗಳಲ್ಲಿ ಭಾರತವು ಒಂದಾಗಿದೆ.

**6. ಭಾರತದ ವಿದೇಶಾಂಗ ನೀತಿಯ ಲಕ್ಷಣಗಳಾವುವು?**

ಉತ್ತರ : ಭಾರತದ ವಿದೇಶಾಂಗ ನೀತಿಯ ಲಕ್ಷಣಗಳು

- ಪಂಚಶೀಲ ತತ್ವಗಳು
- ಅಲಿಪ್ತ ನೀತಿ
- ವಸಾಹತು ಶಾಹಿತ್ವಕ್ಕೆ ವಿರೋಧ
- ವರ್ಣಬೇಧ ನೀತಿಗೆ ವಿರೋಧ
- ನಿಶ್ಯಸ್ತ್ರೀಕರಣ

**7. ಅಂತರಾಷ್ಟ್ರೀಯ ಸಂಬಂಧ ವೃದ್ಧಿಯಾಗಿ ಭಾರತ ಅಳವಡಿಸಿಕೊಂಡ ಪಂಚಶೀಲ ತತ್ವಗಳಾವುವು?**

**ಉತ್ತರ :** ಕ್ರಿ ಶ 1954 ಜೂನ್ ತಿಂಗಳಲ್ಲಿ ವಿಶ್ವಶಾಂತಿಯ ದೃಷ್ಟಿಯಿಂದ ಚೀನಾದ ಪ್ರದಾನಿ ಚೌ ಎನ್ ಲಾಯ್ ಮತು ಪಂಡಿತ ನೆಹರುರವರು ಪರಸ್ಪರ ಅಂತರಾಷ್ಟ್ರೀಯ ಸಂಭಂದ ವೃದ್ಧಿಗಾಗಿ ಮಾಡಿಕೊಂಡ ಒಪ್ಪಂದವು ಪಂಚಶೀಲ ತತ್ವಗಳನ್ನು ಒಳಗೊಂಡಿದೆ. ಅವುಗಳೆಂದರೆ –

- ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಹಾಗೂ ಸಾರ್ವಭೌಮತೆಗೆ ಗೌರವ.
- ಪರಸ್ಪರರ ಮೇಲೆ ಆಕ್ರಮಣ ಮಾಡದೇ ಇರುವದು.
- ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತಕ್ಷೇಪ ಮಾಡದಿರುವುದು.
- ಪರಸ್ಪರ ಸಹಕಾರ ಮತ್ತು ಸಮಾನತೆ.
- ಶಾಂತಿಯುತ ಸಹಬಾಳ್ವೆ.

**8. ಭಾರತವು ಅಲಿಪ್ತನೀತಿಯನ್ನು ಏಕೆ ಪ್ರತಿಪಾದಿಸುತ್ತಿದೆ. ಚರ್ಚಿಸಿ ಅಥವಾ ಭಾರತವು ವಿಶ್ವದ ಯಾವುದೇ ಶಕ್ತಿಶಾಲಿ ಬಣಗಳಿಗೆ ಸೇರದೇ ತಟಸ್ಥವಾಗಿರಲು ಬಯಸುತ್ತದೆ' ಈ ಹೇಳಿಕೆಯನ್ನು ಸಮರ್ಥಿಸಿ**

**ಉತ್ತರ : ಭಾರತವು ಅಲಿಪ್ತನೀತಿಯನ್ನು ಪ್ರತಿಪಾದಿಸುತ್ತಿದೆ ಯಾಕೆಂದರೆ –**

- ದ್ವಿತೀಯ ಜಾಗತಿಕ ಮಹಾಯುದ್ದದ ನಂತರ ಜಗತ್ತು ಅಮೇರಿಕ & ರಷ್ಯಾ ಒಕ್ಕೂಟದ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು.
- ಭಾರತವು ಯಾವ ಬಣಕ್ಕೆ ಸೇರದೇ ತಾಟಸ್ಥ್ಯ ನೀತಿಯನ್ನು ಅನುಸರಿಸಿತು ಇದೇ ಅಲಿಪ್ತ ನೀತಿ.
- ಅಲಿಪ್ತ ನೀತಿ ಎಂದರೆ ಎರಡು ಶಕ್ತಿಶಾಲಿ ಬಣಗಳ ಆಚೆ ನಿಂತು ಸ್ವತಂತ್ರವಾಗಿ ಅಭಿಪ್ರಾಯ ವ್ಯಕ್ತಪಡಿಸುವದಾಗಿದೆ.
- ಈ ಎರಡು ಬಣಗಳ ವಿಶ್ವಾಸಗಳಿಸಿಕೊಳ್ಳುವುದರ ಮೂಲಕ ಅಮೇರಿಕಾದಿಂದ ಆರ್ಥಿಕ ನೆರವನ್ನು ಮತ್ತು ಸೋವಿಯತ್ ರಷ್ಯಾದಿಂದ ಭದ್ರತಾ ನೆರವನ್ನು ಪಡೆಯುವಲ್ಲಿ ಯಶಸ್ವಿಯಾಯಿತು.

**9. ದಕ್ಷಿಣ ಆಫ್ರಿಕದಲ್ಲಿ ಅನುಸರಿಸಿದ ವರ್ಣಭೇದ ನೀತಿಯ ಬಗ್ಗೆ ಬರೆಯಿರಿ.**

**ಅಥವಾ**

**ವರ್ಣಭೇದ ನೀತಿಯು ಮಾನವತ್ವಕ್ಕೆ ವಿರೋಧವಾದುದು ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.**

**ಉತ್ತರ : ದಕ್ಷಿಣ ಆಫ್ರಿಕಾದಲ್ಲಿ ಅನುಸರಿಸಿದ ವರ್ಣಬೇಧ ನೀತಿ**

- ಬಿಳಿಯರು ಕರಿಯರನ್ನು ಅತ್ಯಂತ ಕ್ರೂರ ಮತು ದೌರ್ಜನ್ಯದಿಂದ ನಡೆಸಿಕೊಳ್ಳುತ್ತಿದ್ದನ್ನು ವರ್ಣಭೇದನೀತಿ ಎನ್ನುವರು.
- ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ಕ್ರೂರ ಹಾಗೂ ದಮನಕಾರಿ ವರ್ಣಭೇದ ನೀತಿಯನ್ನು ಅನುಸರಿಸಲಾಗುತ್ತಿತ್ತು.
- ಈ ವರ್ಣಭೇದ ನೀತಿಯು ಅಮಾನವೀಯ ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸಿ ವಿಶ್ವಶಾಂತಿ ಮತ್ತು ಸಹಬಾಳ್ವೆಗೆ ಮಾರಕವಾಗುತ್ತದೆ.
- ವರ್ಣಭೇದ ನೀತಿಯನ್ನು ಆಫ್ರಿಕಾ ಗಾಂಧಿ ಎಂದೇ ಪ್ರಸಿದ್ಧರಾದ ನೆಲ್ಸನ್ ಮಂಡೇಲ ಅವರ ನೇತೃತ್ವದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಲವಾಗಿ ಖಂಡಿಸಿತು. ಮತ್ತು ಗುರಿಸಾಧಿಸಿತು.

**10. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ.**

**ಉತ್ತರ : ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ – ಭಾರತದ ಪ್ರತಿಪಾದನೆ.**

- ನಿಶ್ಯಸ್ತ್ರೀಕರಣವೆಂದರೆ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ಆಗಿದೆ.
- ಶಸ್ತ್ರಾಸ್ತಗಳ ಪೈಪೋಟಿಯಿಂದ ಮೂರನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ.

- ಶಸ್ತ್ರಾಸ್ತ್ರ ಪೈಪೋಟಿಗೆ ಒಳಗಾದ ರಾಷ್ಟ್ರಗಳು ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು ಅದರಲ್ಲೂ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ.
- ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು, ಶಾಂತಿ ಸೌಹಾರ್ಧತೆಗೆ ಒತ್ತು ನೀಡಿ ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತಿ ಅಗತ್ಯ ಎಂದು ಪ್ರತಿಪಾದಿಸುತ್ತಿದೆ.
- ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾದ ಒತ್ತು ನೀಡಿದೆ.

# ಅಧ್ಯಾಯ 3.
# ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

## ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. 1962ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದ ದೇಶ – **ಚೀನಾ.**
2. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು – **ಭಾರತ ಮತ್ತು ಪಾಕಿಸ್ತಾನ. –1966ರಲ್ಲಿ**
3. ಭಾರತದ ಭಿಲೈ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ. **– ರಷ್ಯಾ.**
4. ಭಾರತ ಮತ್ತು ಪಾಕಿಸ್ತಾನದ ಸಂಬಂಧ ಸುಧಾರಣೆಗೆ ಅಡ್ಡಿಯಾಗಿರುವ ಅತ್ಯಂತ ಪ್ರಮುಖ ಅಂಶಗಳು – **ಜಮ್ಮು–ಕಾಶ್ಮೀರ ಸಮಸ್ಯೆ & ಭಯೋತ್ಪಾದನೆ.**
5. ಭಾರತ ಮತ್ತು ಚೀನಾ ದೇಶಗಳೆರಡು ಅರುಣಾಚಲ ಪ್ರದೇಶ ತಮ್ಮದೆಂದು ಪ್ರತಿಪಾದಿಸಲು ಕಾರಣ **– ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಿಖರ ಗಡಿರೇಖೆ ಇಲ್ಲದಿರುವುದರಿಂದ.**
6. ಭಾರತ ಮತ್ತು ಚೀನಾ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ. – **ಪಂಚಶೀಲ ತತ್ವ ಮತ್ತು ಭಾರತ – ಚೀನಿ ಭಾಯಿಭಾಯಿ.**
7. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು – **ಜಮ್ಮು–ಕಾಶ್ಮೀರ, ಭಯೋತ್ಪಾದನೆ ಮತ್ತು ನೀರಿನ ಹಂಚಿಕೆಯ ಸಮಸ್ಯೆಗಳು**
8. ಭಾರತದ ಭಿಲೈ ಹಾಗೂ ಬೊಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ – **ರಷ್ಯಾ.**
9. ಭಾರತ ಮತ್ತು ಪಾಕಿಸ್ತಾನ ಮಧ್ಯೆ ದೇಶದ ಹೊರಗಡೆ ನಡೆದ ಒಪ್ಪಂದ – **ರಷ್ಯಾದಲ್ಲಿ – 1966ರಲ್ಲಿ – ತಾಷ್ಕೆಂಟ್ ಒಪ್ಪಂದ.**

## ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು

**1. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ ಏಕೆ?**

**ಉತ್ತರ : ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಅನಿವಾರ್ಯವಾಗಿದೆ ಯಾಕೆಂದರೆ –**

- ಸ್ವತಂತ್ರ ರಾಷ್ಟ್ರವಾಗಿ ನಾವು ಎಲ್ಲಾ ವಿದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಬೇಕಾಗಿದೆ.
- ಏಷ್ಯಾ ಖಂಡದ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ಬಾಂಧವ್ಯ ಇರಿಸಿಕೊಳ್ಳಬೇಕಾಗಿದೆ.
- ರಾಷ್ಟ್ರೀಯ ಹಿತಾಶಕ್ತಿಗಳಾದ ಗಡಿ ಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಲಾಭ, ರಾಷ್ಟ್ರದ ಗೌರವ ಮುಂತಾದವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳಬೇಕಾಗಿದೆ.
- ಈ ಕಾರಣಗಳಿಗಾಗಿ ನಾವು ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅವಶ್ಯಕ.

**2. ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧವು ಪ್ರಾಚೀನ ಕಾಲದಿಂದಲೂ ಇತ್ತು ಎಂಬುದನ್ನು ಸಮರ್ಥಿಸಿ.**

ಉತ್ತರ :

- ಭಾರತ ಮತ್ತು ಚೀನಾಗಳ ಸಂಬಂಧವನ್ನು ಸಿಂಧೂ ನದಿ ಬಯಲಿನ ನಾಗರಿಕತೆ ಮತ್ತು ಮೆಸಪಟೋಮಿಯಾ ನಾಗರಿಕತೆಯೊಂದಿಗೆ ಗುರುತಿಸಲಾಗಿದೆ.
- ಭಾರತದಲ್ಲಿ ಉದಯಿಸಿದ ಬೌದ್ಧ ಧರ್ಮವು ಪ್ರಸ್ತುತ ಚೀನಾದಲ್ಲಿ ಪ್ರಸಾರಗೊಂಡಿರುವುದು.
- ಭಾರತದಲ್ಲಿನ ರಾಜರುಗಳು ಚೀನಾದ ಹಲವು ರಾಜವಂಶಗಳೊಂದಿಗೆ ಉತ್ತಮ ವ್ಯಾಪಾರ ಸಂಪರ್ಕಗಳನ್ನು ಹೊಂದಿರುವ ಹಲವು ಉಲ್ಲೇಖಗಳು ದೊರೆಯುತ್ತವೆ.
- ಭಾರತ ಮತ್ತು ಚೀನಾಗಳ ನಡುವಿನ ವ್ಯಾಪಾರ ಸಂಬಂಧವನ್ನು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚೀನಾದ ರೇಷ್ಮೆಯ ಬಗ್ಗೆ ಉಲ್ಲೇಖವಾಗಿತ್ತದೆ.

**3. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವವು?**

**ಉತ್ತರ : ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳು–**

- ಚೀನಾ ಟಿಬೇಟನ್ನು ವಶಪಡಿಸಿಕೊಂಡಿತು.
- 1962ರಲ್ಲಿ ಚೀನಾ ಭಾರತ ಮೇಲೆ ದಾಳಿ ಮಾಡಿತು.
- ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಪ್ರತಿಪಾದಿಸುತ್ತಿದೆ.
- ಇತ್ಯರ್ಥವಾಗದ ಗಡಿ ಸಮಸ್ಯೆ.
- ಅಣ್ವಸ್ತ್ರ ತಯಾರಿ,
- ವಿದೇಶಿ ವ್ಯಾಪಾರದ ಸವಾಲುಗಳು,
- ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ

**4. ವಿವಾದದ ಹೊರತಾಗಿಯೂ ಭಾರತವು ಚೀನಾದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದೆ ಎಂದು ಹೇಗೆ ಹೇಳುವಿರಿ? (ಎಪ್ರಿಲ್ 2019)**

**ಉತ್ತರ : ಭಾರತ ಮತ್ತು ಚೀನಾದ ಉತ್ತಮ ಸಂಬಂಧ –**

- ಭಾರತ ಮತ್ತು ಚೀನಾ ಪಂಚಶೀಲ ತತ್ವಗಳ ಮೂಲಕ ಎರಡು ರಾಷ್ಟ್ರಗಳ ಸಂಬಂಧಗಳನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು.
- ಭಾರತ ಮತ್ತು ಚೀನಾ ನಡುವೆ ದ್ವಿಪಕ್ಷಿಯ ಸಂಬಂಧಗಳು ನಿರಂತರವಾಗಿ ಮುಂದುವರೆದಿದೆ.
- 1980ರ ನಂತರದಲ್ಲಿ ಚೀನಾ ಭಾರತದೊಂದಿಗೆ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕವನ್ನು ಹೊಂದಿರುವುದು ಎರಡು ರಾಷ್ಟ್ರಗಳ ಸಂಬಂಧಗಳನ್ನು ಗಟ್ಟಿಗೊಳಿಸಿದೆ.
- 2015ರ ನಂತರದಲ್ಲಿ ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭಗೊಂಡಿರುವುದು.

**5. ಪಾಕಿಸ್ತಾನದೊಂದಿಗೆ ತನ್ನ ಸಂಬಂಧವನ್ನು ಉತ್ತಮಪಡಿಸಲು ಭಾರತ ಕೈಗೊಂಡ ಕ್ರಮಗಳೇನು?**

ಉತ್ತರ :

- ಸ್ವಾತಂತ್ರ್ಯಗೊಂಡ ನಂತರದಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ವಿದೇಶಾಂಗ ವ್ಯವಹಾರಗಳು ಪ್ರಾರಂಭಗೊಂಡವು.
- ಎರಡು ರಾಷ್ಟ್ರಗಳ ನಡುವೆ ಉತ್ತಮ ಬಾಂದವ್ಯ ಹೊಂದಲು ತಾಷ್ಕೆಂಟ್ ಒಪ್ಪಂದ, ಸಿಮ್ಲಾ ಒಪ್ಪಂದ, ಲಾಹೋರ ಬಸ್ ಯಾತ್ರೆ, ಆಗ್ರಾ ಶೃಂಗಸಭೆಯಂತಹ ದ್ವಿಪಕ್ಷಿಯ ಮಾತುಕತೆಗಳನ್ನು ನಡೆಸಲಾಗಿದೆ.
- ಆದರೆ ಈ ರೀತಿಯ ಒಪ್ಪಂದಗಳು ನಿರೀಕ್ಷಿತ ಯಶಸ್ಸನ್ನು ಸಾಧಿಸಲು ವಿಫಲವಾಗಿದೆ.

**6. ಭಾರತ ಮತ್ತು ಪಾಕಿಸ್ತಾನ ಸಂಬಂಧ ಉತ್ತಮಗೊಳ್ಳದಿರಲು ಕಾರಣಗಳೇನು?**

**ಅಥವಾ**

**ಭಾರತ ಮತ್ತು ಪಾಕಿಸ್ತಾನ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು? ಅಥವಾ**

**ಪಾಕ್ ಪ್ರಚೋದಿತ ಭಯೋತ್ಪಾದನೆಯೇ ಭಾರತ – ಪಾಕಿಸ್ತಾನಗಳ ನಡುವಿನ ಉದ್ವಿಗ್ನತೆಗೆ ಪ್ರಮುಖ ಕಾರಣ ಎಂಬುದನ್ನು ವಿಶ್ಲೇಷಿಸಿ.**

**ಉತ್ತರ : ಭಾರತ ಮತ್ತು ಪಾಕಿಸ್ತಾನ ಸಂಬಂಧ ಉತ್ತಮಗೊಳ್ಳದಿರಲು ಕಾರಣಗಳು –**

- ಎರಡು ರಾಷ್ಟ್ರಗಳ ನಡುವೆ ಜಮ್ಮು–ಕಾಶ್ಮೀರ, ಭಯೋತ್ಪಾದನೆ, ನೀರಿನ ಹಂಚಿಕೆ ಮುಂತಾದ ಸಮಸ್ಯೆಗಳಿವೆ.
- ಇಲ್ಲಿಯವರೆಗೂ ಎರಡು ರಾಷ್ಟ್ರಗಳ ನಡುವೆ ಮೂರು ಭಾರಿ ಯುದ್ಧಗಳು ನಡೆದಿವೆ.
- 2001ರಲ್ಲಿ ಭಾರತ ಸಂಸತ್ತಿನ ಮೇಲಿನ ದಾಳಿ, 2008ರ ಮುಂಬೈ ಮೇಲಿನ ದಾಳಿ, 2016ರ ಪಠಾಣ್ ಕೋಟ್ ದಾಳಿ, 2019ರ ಪುಲ್ವಾಮಾ ದಾಳಿಗಳು ಪರಸ್ಪರ ಸಂಬಂಧಗಳ ವೃದ್ಧಿಗೆ ಹಿನ್ನಡೆಯನ್ನು ಉಂಟುಮಾಡಿವೆ.

**7. ಭಾರತ ಮತ್ತು ಪಾಕಿಸ್ತಾನ ದೇಶಗಳ ಮಧ್ಯೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಎರಡು ದೇಶಗಳ ನಡುವೆ ಇರುವ ಸಾಮ್ಯತೆಗಳೇನು?**

ಉತ್ತರ :

- ಭಾರತ ಮತ್ತು ಪಾಕಿಸ್ತಾನಗಳು ಭೌಗೋಳಿಕ ಸಾಮ್ಯತೆಯನ್ನು ಹೊಂದಿವೆ.
- ಎರಡು ರಾಷ್ಟ್ರಗಳ ನಡುವೆ ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ ಕಾರ್ಯಗಳು ಮುಂದುವರೆದಿವೆ.
- ಎರಡು ರಾಷ್ಟ್ರಗಳ ಸ್ವಾತಂತ್ರಗೊಂಡ ದಿನದಿಂದ ಪ್ರಸ್ತುತದವರೆಗೆ ವ್ಯಾಪಾರ, ವಾಣಿಜ್ಯ ಸಂಬಂಧಗಳು ನಿರಂತರವಾಗಿ ಮುಂದುವರೆದಿವೆ.
- ಕ್ರೀಡೆ, ಸಾಂಸ್ಕೃತಿಕ, ವ್ಯವಹಾರಗಳಲ್ಲಿ, ನೈಸರ್ಗಿಕ ವಿಕೋಪಗಳು ಸಂಭವಿಸಿದ ಸಂದರ್ಭಗಳಲ್ಲಿ ಎರಡು ರಾಷ್ಟ್ರಗಳು ಸೌಹಾರ್ಧಯುತವಾದ ಮತ್ತು ಪರಸ್ಪರ ಸಹಕಾರ ಹೊಂದಿವೆ.

**8. ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧವನ್ನು ವಿವರಿಸಿ. ಅಥವಾ**

**ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧ ಅತ್ಯಂತ ಸುಮಧುರವಾಗಿದೆ ಎಂದು ಹೇಗೆ ಹೇಳುವಿರಿ.**

**ಉತ್ತರ : ಭಾರತ ಮತ್ತು ರಷ್ಯಾ ಸಂಬಂಧ**

- ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಸುಮಧುರವಾಗಿದೆ.
- 1966ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
- 1971ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.
- ಭಾರತದ ಮೇಲೆ ಚೀನಾ ಆಕ್ರಮಣವನ್ನು ಖಂಡಿಸಿತು.
- ಗೋವಾ ವಿಮೋಚನೆಯ ವೇಳೆ ಭಾರತವನ್ನು ರಷ್ಯಾ ಬೆಂಬಲಿಸಿತು.
- ಭಾರತದಲ್ಲಿ ಭಿಲಾಯ್ ಮತ್ತು ಭೋಕಾರೋ ಕಬ್ಬಿಣ & ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ರಷ್ಯಾ ನೆರವು ನೀಡಿತು.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

**9. ಭಾರತ ಮತ್ತು ಅಮೇರಿಕದ ನಡುವಿನ ಸಂಬಂಧವನ್ನು ವಿವರಿಸಿ. ಅಥವಾ**

**ಪ್ರಚಲಿತ ಜಾಗತಿಕ ವಿದ್ಯಮಾನದಲ್ಲಿ ಭಾರತ ಮತ್ತು ಅಮೇರಿಕ ರಾಷ್ಟ್ರಗಳ ಮೈತ್ರಿ ತುಂಬಾ ಪ್ರಾಮುಖ್ಯತೆ ಎನಿಸಿದೆ ಏಕೆ?**

ಉತ್ತರ :

- ಭಾರತ ಮತ್ತು ಅಮೇರಿಕಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಉತ್ತಮವಾಗಿದೆ.
- 1962ರ ಚೀನಾ ಆಕ್ರಮಣ ಸಂದರ್ಭದಲ್ಲೂ ಅಮೇರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು.
- ಭಯೋತ್ಪಾದನೆ ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.
- ಭಾರತವು ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೇರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ.
- ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡು ರಾಷ್ಟ್ರಗಳು ಸಮಾನ ದೋರಣೆ ಹೊಂದಿವೆ.

# ಸಮಾಜಶಾಸ್ತ್ರ

## ಅಧ್ಯಾಯ 1 ಸಮಾಜಿಕ ಸ್ತರವಿನ್ಯಾಸ

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಸರ್ಕಾರಗಳು ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶಗಳನ್ನು ಕುರಿತು ತಿಳಿಸುವ ಸಂವಿಧಾನದ ವಿಧಿ – **39ನೇ ವಿಧಿ.**
2. 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುವ ಸಂವಿಧಾನದ ವಿಧಿ – **45ನೇ ವಿಧಿ**
3. ಸಂವಿಧಾನದ 86ನೇ ತಿದ್ದುಪಡಿಯ ಪ್ರಮುಖ ಆಶಯ – **6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು.**
4. ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಈ ಭಾಗದಲ್ಲಿ ಕಾಣಬಹುದು. – **ಸಂವಿಧಾನದ ಪ್ರಸ್ತಾವನೆ ಮತ್ತು ರಾಜ್ಯನೀತಿ ನಿರ್ದೇಶಕ ತತ್ವಗಳು**
5. ಸಂವಿಧಾನದ 21ಎ ನೇ ವಿಧಿ ಅತ್ಯಂತ ಪ್ರಮುಖವಾದುದು ಏಕೆಂದರೆ – **ಶಿಕ್ಷಣ ಹಕ್ಕು ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸಿದೆ.**
6. ಸಂವಿಧಾನದ 19ನೇ ಪರಿಚ್ಛೇದ ಈ ಅಂಶವನ್ನು ಒತ್ತಿ ಹೇಳುತ್ತದೆ – ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ.
7. ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡಿದ ಸಂವಿಧಾನದ ವಿಧಿ – **29ನೇ ವಿಧಿ.**
8. ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶಗಳನ್ನು ನೀಡಿದ ಸಂವಿಧಾನದ ವಿಧಿ – **30ನೇ ವಿಧಿ.**
9. ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದ ಸಂವಿಧಾನದ ವಿಧಿ – **17ನೇ ವಿಧಿ.**
10. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು್ಲ ಜಾರಿಗೆ ಬಂದ ವರ್ಷ – **1955**
11. ಅಸ್ಪೃಶ್ಯತೆ ಹಿಂದು ಸಮಾಜಕ್ಕೆ ಹತ್ತಿದ ಕಳಂಕ ಎಂದವರು – **ಮಹಾತ್ಮ ಗಾಂಧೀಜಿ.**
12. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಮಾರ್ಪಾಡುಗೊಳಿಸಿದ್ದು – **ಕ್ರಿಶ 1976ರಲ್ಲಿ**
13. 1976ರಲ್ಲಿ ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ.– ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆ

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಸಾಮಾಜಿಕ ಅಸಮಾನತೆ ಏನನ್ನು ಸೂಚಿಸುತ್ತದೆ?**

**ಉತ್ತರ :** ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಅಂದರೆ ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗ ಇತ್ಯಾದಿಗಳಿಂದ ಶ್ರೇಣಿಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಸೂಚಿಸುತ್ತದೆ.

**2. ಯಾವ ಮೊಕದ್ದೊಮೆಯ ಆಧಾರದ ಮೇಲೆ ಸುಪ್ರಿಂ ಕೋರ್ಟ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ? ಅಥವಾ**

**1993ರಲ್ಲಿ ಸುಪ್ರಿಂ ಕೋರ್ಟ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಮೊಕದ್ದೊಮೆಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಶಿಕ್ಷಣದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಎಂದು ಹೇಗೆ ಹೇಳುವಿರಿ.**

ಉತ್ತರ : 1993ರಲ್ಲಿ ಉನ್ನಿಕೃಷ್ಣನ್ v/s ಆಂಧ್ರಪ್ರದೇಶ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದ ಸುಪ್ರಿಂ ಕೋರ್ಟನ ತೀರ್ಪು 21ಎ ವಿಧಿಯಲ್ಲಿ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ
ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.

**3. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?**

ಉತ್ತರ : ಸಮಾಜದಲ್ಲಿ ಇರುವ ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಅಥವಾ ಅವರನ್ನು ಏಣಿ ಶ್ರೇಣಿಗಳಿಂದ ವಿಭಿನ್ನ ಸ್ಥಾನಗಳಲ್ಲಿ ವಿಭಾಗಿಸುವ ಕ್ರಮವೇ "ಸಾಮಾಜಿಕ ಸ್ತರವಿನ್ಯಾಸ ಎಂದು ಹೇಳಬಹುದು.

**4. 'ಸಾಮಾಜಿಕ ಸ್ತರ ವಿನ್ಯಾಸ ಅತ್ಯಂತ ಪುರಾತನವಾದುದು' ಈ ಹೇಳಿಕೆಯನ್ನು ಸಮರ್ಥಿಸಿ.**

ಉತ್ತರ : ಮಾನವನ ಅಲೆಮಾರಿ ಜೀವನ ಪದ್ಧತಿಯಿಂದ ಹಿಡಿದು ಇಂದಿನ ಮಾನವನ ಸಾಮಾಜಿಕ ಜೀವನದವರೆಗೂ ಸಾಮಾಜಿಕ ಸ್ತರ ವಿನ್ಯಾಸ ವ್ಯವಸ್ಥೆ ವಿವಿಧ ರೂಪಗಳಲ್ಲಿ ರೂಡಿಯಲ್ಲಿರುವುದರಿಂದ ಸಾಮಾಜಿಕ ಸ್ತರ ವಿನ್ಯಾಸ ಅತ್ಯಂತ ಪುರಾತನವಾದುದಾಗಿದೆ.

**5. ಅಸ್ಪೃಶ್ಯತೆಯನ್ನು ಕುರಿತಂತೆ ಮಹಾತ್ಮ ಗಾಂಧಿಜಿಯವರ ಅಭಿಪ್ರಾಯವೇನು?**

ಉತ್ತರ : ಮಹಾತ್ಮ ಗಾಂಧಿಜಿಯವರ ಪ್ರಕಾರ "ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದು ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ" ಎಂದಿದ್ದಾರೆ.

**6. ಅಸ್ಪೃಶ್ಯತೆ ಎಂದರೇನು?**

ಉತ್ತರ : ಸಮಾಜದಲ್ಲಿ ಕೆಲವು ಜಾತಿಗಳನ್ನು ಅನೇಕ ಬಗೆಯ ಅನರ್ಹತೆಗಳಿಗೆ ಒಳಪಡಿಸುವುದನ್ನೇ ಅಸ್ಪೃಶ್ಯತೆ ಎನ್ನುತ್ತಾರೆ.

**7. ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದ ಮಹಾನ್ ವ್ಯಕ್ತಿಗಳು ಯಾರು?**

ಉತ್ತರ : ಮಹಾತ್ಮ ಗಾಂಧೀಜಿ, ಜ್ಯೋತಿಭಾ ಪುಲೆ, ಸ್ವಾಮಿ ವಿವೇಕಾನಂದ & ಡಾ. ಬಿ.ಆರ್. ಅಂಬೇಡ್ಕರ್‌ರವರು ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸಿದವರಾಗಿದ್ದಾರೆ.

### ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?**

**ಉತ್ತರ : ಸಾಮಾಜಿಕ ಅಸಮಾನತೆ ಕಾರಣಗಳು.**

- ವ್ಯಕ್ತಿಗಳು ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗಗಳಿಂದ ವಿಭಜನೆಗೊಂಡಿರುವುದು.
- ಆದಾಯದ ಮೂಲಗಳು, ಶಿಕ್ಷಣ & ವೃತ್ತಿ ಅವಕಾಶಗಳು, ಆರೋಗ್ಯ ಸೌಲಭ್ಯಗಳಲ್ಲಿ ಅಸಮಾನತೆ.
- ಬಡವರಿಗೆ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಗಳ ಕಡೆಗಣನೆ.
- ಜಾತಿಮೂಲಗಳು ಮತ್ತು ಲಿಂಗತ್ವಮೂಲ ನಿರ್ಲಕ್ಷಗಳನ್ನು ಗಮನಿಸಿದರೆ ಸಾಮಾಜಿಕ ಅಸಮಾನತೆಯ ಸ್ವರೂಪ ತಿಳಿಯುತ್ತದೆ.

**2. ಶಿಕ್ಷಣವು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತದೆ?**

ಉತ್ತರ :

- ಶಿಕ್ಷಣವು ಸಮಾನತೆ, ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದಲ್ಲಿ ಬದಲಾವಣೆ ತರುವ ಶಕ್ತಿಯನ್ನು ಹೊಂದಿರುತ್ತದೆ.
- ಶಿಕ್ಷಣವನ್ನು ಸರ್ಕಾರಗಳು ಎಲ್ಲಾ ಮಕ್ಕಳಿಗೂ ಸಮಾನವಾಗಿ ನೀಡಬೇಕಾಗಿರುತ್ತದೆ.
- ಶಿಕ್ಷಣಕ್ಕಿರುವ ಸಾಮಾಜಿಕ ನ್ಯಾಯದ ಉದ್ದೇಶಗಳನ್ನು ನಮ್ಮ ಸಂವಿಧಾನದ ಪ್ರಸ್ತಾವನೆ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಕಾಣಬಹುದು.

**3. ಸಮಾಜದ ಎಲ್ಲಾ ವರ್ಗಗಳಿಗೂ ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ಒದಗಿಸುವಲ್ಲಿ ನಮ್ಮ ಸಂವಿಧಾನವು ಅಳವಡಿಸಿಕೊಂಡಿರುವ ವಿಧಿಗಳನ್ನಯ ಅರ್ಥೈಸಿ. ಅಥವಾ**

**ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರಕಾರವು ಕೈಗೊಂಡ ಕ್ರಮಗಳನ್ನು ವಿವರಿಸಿ.**

**ಉತ್ತರ : ಸಮಾಜದ ಎಲ್ಲಾ ವರ್ಗಗಳಿಗೂ ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ಒದಗಿಸುವಲ್ಲಿ ನಮ್ಮ ಸಂವಿಧಾನವು ಅಳವಡಿಸಿಕೊಂಡಿರುವ ವಿಧಿಗಳು.–**

**ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರಕಾರವು ಕೈಗೊಂಡ ಕ್ರಮಗಳು –**

- 21ನೇ ವಿಧಿ – ಜೀವಿಸುವ ಹಕ್ಕನ್ನು ಶಿಕ್ಷಣದ ನೆಲೆಯಲ್ಲಿ ಅರ್ಥೈಸುವುದು.
- 29ನೇ ವಿಧಿ – ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ.
- 30ನೇ ವಿಧಿ – ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ.
- 45ನೇ ವಿಧಿ – 6 ವರ್ಷದೊಳಗಿನ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳು.
- 46ನೇ ವಿಧಿ – ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ.
- 86ನೇ ವಿಧಿ – ಶಿಕ್ಷಣ ಮೂಲಭೂತ ಹಕ್ಕಾಗಿ ಸೇರ್ಪಡೆ.

**4 ಲಿಂಗ ಅಸಮಾನತೆ ಹೇಗೆ ಉಂಟಾಗಿದೆ?**

**ಉತ್ತರ : ಲಿಂಗತ್ವ ಅಸಮಾನತೆ ಈ ಕೆಳಗಿನ ಅಂಶಗಳಿಂದ ಉಂಟಾಗಿದೆ.**

- ಶಿಕ್ಷಣದ ಮೌಲ್ಯ ಕುರಿತು ಒಬ್ಬ ವ್ಯಕ್ತಿಗೆ ಇರುವ ವಿಭಿನ್ನ ಚಿಂತನೆ ಅಥವಾ ಮನೋಭಾವನೆ.
- ಒಂದೇ ಕುಟುಂಬದಲ್ಲಿ ಸ್ತ್ರೀ–ಪುರುಷರ ಮೇಲೆ ಬೀರಬಹುದಾದ ಪ್ರಭಾವಗಳು.
- ಹೆಣ್ಣು ಮತ್ತು ಗಂಡು ಮಕ್ಕಳಿಗೆ ನೀಡುವ ಶಿಕ್ಷಣದ ತಾರತಮ್ಯ.
- ಶಾಲಾ ಭಾಗವಹಿಸುವಿಕೆಯಲ್ಲಿ ಅಸಮಾನತೆ.
- ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಲಿಂಗ ಅಸಮಾನತೆ.

**5. ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳನ್ನು ತಿಳಿಸಿ.**

**ಉತ್ತರ : ಸಾಮಾಜಿಕ ಸ್ತರವಿನ್ಯಾಸದ ಲಕ್ಷಣಗಳು**

- ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿವಾದದ್ದು.
- ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು.
- ಸ್ತರವ್ಯವಸ್ಥೆ ಪುರಾತನವಾದದ್ದು.
- ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ.



PSG

**6. ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳನ್ನು ತಿಳಿಸಿ.**

ಉತ್ತರ : ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಯಲ್ಲಿ ಇರುವ ಪ್ರಮುಖ ರೂಪಗಳೆಂದರೆ –

- ➢ ಆದಿವಾಸಿ ಸಮಾಜ,
- ➢ ಗುಲಾಮಗಿರಿ,
- ➢ ಎಸ್ಟೇಟ್ಸ್ ಪದ್ಧತಿ,
- ➢ ವರ್ಣವ್ಯವಸ್ಥೆ,
- ➢ ಜಾತಿ ವ್ಯವಸ್ಥೆ.

**7. ಅಸ್ಪೃಶ್ಯತೆಯಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿಮಾಡಿ.**

**ಉತ್ತರ : ಅಸ್ಪೃಶ್ಯತೆಯಿಂದ ಉಂಟಾಗುವ ಸಮಸ್ಯೆಗಳು.**

- ➢ ಅಸ್ಪೃಶ್ಯರಿಗೆ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ ನೀಡಲಾಗಿದೆ.
- ➢ ಸವರ್ಣೀಯರ ಕೆರೆ, ಕೊಳ, ಬಾವಿ, ಕಟ್ಟೆ ಮತ್ತು ಸ್ಮಶಾನವನ್ನು ಬಳಸುವಂತಿರಲಿಲ್ಲ.
- ➢ ಅಸ್ಪೃಶ್ಯರನ್ನು ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು.
- ➢ ಅಸ್ಪೃಶ್ಯರಿಗೆ ಆಸ್ತಿಯ ಹಕ್ಕಿನ ಒಡೆತನವನ್ನು ನಿರಾಕರಿಸಲಾಗಿತ್ತು.
- ➢ ಸಾಂಪ್ರಾದಾಯಿಕ ಆಡಳಿತ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿರಲಿಲ್ಲ.
- ➢ ಅಸ್ಪೃಶ್ಯರಿಗೆ ರಾಜಕೀಯ ಭಾಗವಹಿಸುವಿಕೆ ನಿರಾಕರಿಸಲಾಗಿತ್ತು.

**8. ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡ ಕಾನೂನು ಕ್ರಮಗಳನ್ನು ತಿಳಿಸಿ.(ಎಪ್ರಿಲ್ 2019)**

**ಉತ್ತರ : ಅಸ್ಪೃಶ್ಯತೆ ನಿವಾರಣೆಗೆ ಕೈಗೊಂಡ ಕಾನೂನು ಕ್ರಮಗಳು**

- ➢ ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- ➢ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲಿ ಜಾರಿ.
- ➢ ಈ ಕಾಯ್ದೆಯನ್ನು 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976ರಲ್ಲಿ ಮಾರ್ಪಡಿಸಲಾಯಿತು.
- ➢ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.
- ➢ ಶೈಕ್ಷಣಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

**9. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಹೇಗೆ? ವಿಶ್ಲೇಷಿಸಿ. ಅಥವಾ 'ಅಸ್ಪೃಶ್ಯತೆಯು ಅತ್ಯಂತ ಅಮಾನವೀಯ ವ್ಯವಸ್ಥೆಯಾಗಿದೆ' ವಿಮರ್ಶಿಸಿ.**

**ಉತ್ತರ : ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಹೇಗೆಂದರೆ –**

- ➢ ಜಾತಿ ಪದ್ಧತಿಯಲ್ಲಿ ಮೇಲು ಕೀಳು ಎಂಬ ಮನೋಬಾವನೆಯು ಅಸ್ಪೃಶ್ಯತೆಗೆ ಕಾರಣ.
- ➢ ಅಸ್ಪೃಶ್ಯತೆಯು ನಮ್ಮ ಸಮಾಜದ ಅಮಾನುಷ ಆಚರಣೆಯಾಗಿದೆ.
- ➢ ಕೆಳಜಾತಿಗಳು ಎಲ್ಲಾ ರೀತಿಯ ಅನುಕೂಲ ಮತ್ತು ಅವಕಾಶಗಳನ್ನು ಪಡೆಯುವುದ ರಿಂದ ವಂಚಿತವಾದವು.
- ➢ ಅಸ್ಪೃಶ್ಯರನ್ನು ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು.
- ➢ ಆಸ್ತಿಯ ಹಕ್ಕನ್ನು ನಿರಾಕರಿಸಲಾಗಿತ್ತು.
- ➢ ಮಾನವ ಹಕ್ಕುಗಳನ್ನು ನಿರಾಕರಿಸಲಾಗಿತ್ತು.
- ➢ ಅತಿಯಾದ ಶೋಷಣೆಗೆ ಒಳಗಾಗಿದ್ದರು.

**10. ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?**

ಉತ್ತರ : **ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ಸಲಹೆಗಳು**

- ➢ ಅಸ್ಪೃಶ್ಯರಿಗೆ ಸೌಲಭ್ಯಗಳನ್ನು ಕೊಟ್ಟು ಸಮಾಜದ ಮುಖ್ಯವಾಹಿನಿಗೆ ತರುವುದು.
- ➢ ಸಾಕ್ಷರತೆಯಿಂದ ಸಾಮಾಜಿಕ ಜಾಗೃತಿ ಮೂಡಿಸಬೇಕು.
- ➢ ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕು.
- ➢ ಶಿಕ್ಷಣದ ಮೂಲಕ ಮಕ್ಕಳಲ್ಲಿ, ಯುವಜನರಲ್ಲಿ ಅರಿವು ಮೂಡಿಸುವುದು.
- ➢ ಸಮೂಹ ಮಾಧ್ಯಮಗಳ ಜೊತೆಗೆ ಬೀದಿ ನಾಟಕ ಮೊದಲಾದ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
- ➢ ಈಗಿರುವ ಕಾನೂನುಗಳನ್ನು ಮತ್ತಷ್ಟು ಕಠಿಣ ಗೊಳಿಸುವುದು.

## ಅಧ್ಯಾಯ 2 – ದುಡಿಮೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಪ್ಲೇಟೋರವರು ರಚಿಸಿದ ಕೃತಿ –**'ದಿ ರಿಪಬ್ಲಿಕ್'** **(ಎಪ್ರಿಲ್ 2019)**
2. ವಿಶೇಷ ಪರಿಣತಿಗೆ ಕಾರಣವಾಗುವುದು. –**ಶ್ರಮ ವಿಭಜನೆ**
3. ಅಸಂಘಟಿತ ಕೆಲಸಗಾರರು ಎಂದರೆ – **ಭೂ ರಹಿತ ಕೃಷಿ & ಕೂಲಿ ಕಾರ್ಮಿಕರು**
4. ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ ಎಂದು ಹೇಳಿದವರು – **ಕಾರ್ಲ್‌ಮಾರ್ಕ್ಸ್.**
5. ಭೂರಹಿತ ಕೃಷಿ ಕೆಲಸಗಾರರನ್ನು ________ ಕೆಲಸಗಾರರು ಎಂದು ಕರೆಯುತ್ತಾರೆ. – **ಅಸಂಘಟಿತ ಕೆಲಸಗಾರರು**
6. ವೈದ್ಯಕೀಯ ಸಂಸ್ಥೆಗಳ ಕೆಲಸಗಾರರನ್ನು ________ ಕೆಲಸಗಾರರು ಎಂದು ಕರೆಯುತ್ತಾರೆ. – **ಸಂಘಟಿತ ಕೆಲಸಗಾರರು**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಶ್ರಮ ವಿಭಜನೆ ಕುರಿತು ಪ್ಲೇಟೋನ ಅಭಿಪ್ರಾಯವೇನು?**

ಉತ್ತರ : ಶ್ರಮ ವಿಭಜನೆ ಕುರಿತು ಪ್ಲೋಟೋ ಅವರು ತಮ್ಮ 'ದಿ ರಿಪಬ್ಲಿಕ್' ಎನ್ನುವ ಪುಸ್ತಕದಲ್ಲಿ "ಮಾನವ ಸಮಾಜವು ಸ್ವಾಭಾವಿಕ ಅಸಮಾನತೆಗಳಿಂದ ರೂಪಗೊಳ್ಳುತ್ತದೆ. ಈ ಸ್ವಾಭಾವಿಕ ಅಸಮಾನತೆಯು ಶ್ರಮ ವಿಭಜನೆಯಿಂದ ಕೂಡಿರುತ್ತದೆ" ಎಂದು ಹೇಳುತ್ತಾರೆ.

**2. ವಿಶೇಷ ಪರಿಣಿತಿ ಎಂದರೇನು?**

ಉತ್ತರ : ವಿಶೇಷ ಪರಿಣಿತಿ ಎಂದರೆ ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ.

**3. ದುಡಿಮೆ ಎಂದರೇನು?**

ಉತ್ತರ : ದುಡಿಮೆ ಎಂದರೆ ಒಬ್ಬ ವ್ಯಕ್ತಿ ದೈಹಿಕ ಪರಿಶ್ರಮದಿಂದ ಅಥವಾ ಬೌದ್ಧಿಕ ಪರಿಶ್ರಮದಿಂದ ಆದಾಯ ಅಥವಾ ವಸ್ತುರೂಪದ ಪ್ರತಿಫಲವನ್ನು ಪಡೆಯುವುದು ಎಂದರ್ಥ.

**4. ದುಡಿಮೆಯಲ್ಲಿ ಅಸಮಾನತೆ ಎಂದರೇನು?**

ಉತ್ತರ : ಇಬ್ಬರು ವ್ಯಕ್ತಿಗಳು ಒಂದೇ ಕೆಲಸವನ್ನು ಒಂದೇ ಸಮಯದಲ್ಲಿ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ
ಅಥವಾ ದುಡಿಮೆಯಲ್ಲಿನ ಅಸಮಾನತೆ ಎನ್ನಬಹುದು.

**5. ಸಂಭಾವನೆ ರಹಿತ ದುಡಿಮೆ ಎಂದರೇನು?**

ಉತ್ತರ : ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದಲ್ಲಿ, ಯಾವುದೇ ಪ್ರತಿಫಲ ಪಡೆಯದೇ ಇರುವುದನ್ನು ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

**6. ಸಂಭಾವನೆ ಸಹಿತ ದುಡಿಮೆ ಎಂದರೇನು?**

ಉತ್ತರ : ನಿಗದಿತ ವೇತನವನ್ನು ಘಂಟೆಗಳ ಆಧಾರದಲ್ಲಿ, ದಿನಗೂಲಿಯ ಆಧಾರದಲ್ಲಿ, ವಾರದ ಆಧಾರದಲ್ಲಿ ಅಥವಾ ತಿಂಗಳ ಆಧಾರದಲ್ಲಿ ದೈಹಿಕ ಮತ್ತು ಬೌದ್ಧಿಕ ಶ್ರಮಕ್ಕೆ ನೀಡುವ ವೇತನವನ್ನು ಸಂಭಾವನೆ ಸಹಿತ ದುಡಿಮೆ ಎನ್ನುವರು.

**7. ಸಾಟಿ ವಿನಿಮಯ ಪದ್ಧತಿ ಎಂದರೇನು?**

ಉತ್ತರ : ದೈಹಿಕ ಶ್ರಮ ಆಧಾರಿತ ದುಡಿಮೆಗೆ ಹಣದ ಬದಲಾಗಿ ವಸ್ತುಗಳನ್ನು ಮತ್ತು ಆಹಾರ ಪದಾರ್ಥಗಳನ್ನು ದುಡಿಮೆಗಾರರಿಗೆ ಸಂಭಾವನೆಯ ರೂಪದಲ್ಲಿ ನೀಡುವ ಪದ್ಧತಿಯನ್ನು 'ಸಾಟಿ ವಿನಿಮಯ ಪದ್ಧತಿ' ಎಂದು ಕರೆಯುತ್ತಾರೆ.

**8. ಸಂಘಟಿತ ದುಡಿಮೆಯ ವಲಯ ಎಂದರೇನು?**

ಉತ್ತರ : ಕಾರ್ಮಿಕರಿಗೆ ಕಾನೂನಿನ ಚೌಕಟ್ಟಿನೊಳಗೆ, ನಿಗದಿತ ಕೆಲಸ, ಉದ್ಯೋಗ ಭರವಸೆ, ನಿಗದಿತ ವೇತನವನ್ನು ನಿಗದಿಯಾಗಿರುತ್ತದೆಯೋ ಅದನ್ನು ಸಂಘಟಿತ ದುಡಿಮೆಯ ವಲಯವೆಂದು ಕರೆಯಲಾಗುತ್ತದೆ.

**9. ಅಸಂಘಟಿತ ದುಡಿಮೆಯ ವಲಯ ಎಂದರೇನು?**

ಉತ್ತರ : ಯಾವುದೇ ನಿರ್ಧಿಷ್ಟ ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮಪಾಡಿಗೆ ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಿಫಲ ಪಡೆಯವ ಶ್ರಮಿಕರನ್ನೊಳಗೊಂಡ ವಲಯವನ್ನು ಅಸಂಘಟಿತ ದುಡಿಮೆಯ ವಲಯ ಎಂದು ಕರೆಯಲಾಗುತ್ತದೆ.

**10. ಸಾಮಾಜಿಕ ಭದ್ರತೆ ಎಂದರೇನು?**

ಉತ್ತರ : ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳನ್ನು ಸಾರ್ವಜನಿಕವಾಗಿ ಅಥವಾ ಸಾಮುದಾಯಿಕವಾಗಿ ಒದಗಿಸಿಕೊಡುವುದು ಸಾಮಾಜಿಕ ಭದ್ರತೆ ಎನ್ನಿಸಿಕೊಳ್ಳುತ್ತದೆ.

**11. ದುಡಿಮೆಯ ವಲಯವನ್ನು ಸಂಘಟಿತ ಮತ್ತು ಅಸಂಘಟಿತ ವಲಯವೆಂದು ಹೇಗೆ ವರ್ಗೀಕರಿಸಲಾಗಿದೆ?**

ಉತ್ತರ : ದುಡಿಮಯ ಪರಿಸ್ಥಿತಿಗಳನ್ನಾಧರಿಸಿ, ದುಡಿಮೆಯ ವಲಯಗಳಲ್ಲಿ ದೊರೆಯುವ ಸೌಲಭ್ಯಗಳ ಆಧಾರದಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯವೆಂದು ವರ್ಗೀಕರಿಸಲಾಗಿದೆ

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಶ್ರಮ ವಿಭಜನೆಯನ್ನು ಬಗ್ಗೆ ಕಾರ್ಲ್‌ಮಾರ್ಕ್ಸ್‌ರ ವಿಚಾರಧಾರೆಗಳನ್ನು ವಿವರಿಸಿ.**

**ಉತ್ತರ : ಶ್ರಮ ವಿಭಜನೆಯ ಬಗ್ಗೆ ಕಾರ್ಲ್‌ಮಾರ್ಕ್ಸ ವಿಚಾರಧಾರೆಗಳು.**

- ➢ ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ.
- ➢ ಶ್ರಮವಿಭಜನೆಯನ್ನು ಆರ್ಥಿಕ ಶ್ರಮವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆಯಾಗಿ ವಿಂಗಡನೆ,
- ➢ ಆರ್ಥಿಕ ಶ್ರಮವಿಭಜನೆಯು ತಾಂತ್ರಿಕ ಅಂಶಗಳ ಜೊತೆಗೆ, ಕಾರ್ಮಿಕರ ಸಹಕಾರದಿಂದ ಹೆಚ್ಚಾಗಿ ನಡೆಯುತ್ತದೆ.
- ➢ ಸಾಮಾಜಿಕ ಶ್ರಮ ವಿಭಜನೆಯು ವರ್ಗ, ಸ್ಥಾನ ಮತ್ತು ಏಣಿ–ಶ್ರೇಣಿ ಮೂಲಕ ಸಾಮಾಜಿಕ ನಿಯಂತ್ರಣವನ್ನು ಸಾಧಿಸುತ್ತದೆ.

**2. ದುಡಿಮೆಯಲ್ಲಿನ ಅಸಮಾನತೆಯ ಸ್ವರೂಪಗಳನ್ನು ತಿಳಿಸಿ. ಅಥವಾ ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

**ಉತ್ತರ : ದುಡಿಮೆಯಲ್ಲಿನ ಅಸಮಾನತೆಯ ಸ್ವರೂಪ. ಅಥವಾ ದುಡಿಮೆಯ ತಾರತಮ್ಯತೆ.**

- ➢ ಇಬ್ಬರು ಸಮಾನ ಕೆಲಸ ಮಾಡಿದಾಗ ಒಬ್ಬರಿಗೆ ಹೆಚ್ಚು ವೇತನವನ್ನು ಮತ್ತೊಬ್ಬರಿಗೆ ಕಡಿಮೆ ವೇತನವನ್ನು ನೀಡುವುದನ್ನು ದುಡಿಮೆಯಲ್ಲಿನ ಭೇದಭಾವ ಅಥವಾ ದುಡಿಮೆಯಲ್ಲಿನ ಅಸಮಾನತೆ ಎನ್ನಬಹುದು.
- ➢ ಸ್ತ್ರೀ – ಪುರುಷರಿಬ್ಬರೂ ಒಂದೇ ರೀತಿಯ ಸಂಭಾವನೆ ದೊರೆಯುವುದಿಲ್ಲ.
- ➢ ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗ ಮತ್ತು ಹೆಚ್ಚಿನ ವೇತನವನ್ನು ನೀಡಲಾಗುತ್ತದೆ.
- ➢ ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತದೆ.
- ➢ ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥಗಳ ಆಧಾರದ ಮೇಲೆ ಹಂಚಿಕೆ ಮಾಡುತ್ತದೆ.
- ➢ ನಮ್ಮ ಬೀದಿಗಳ ಕಸಗುಡಿಸುವವರ, ಚರಂಡಿ ಬಳಿಯುವ ಸಫಾಯಿ ಕರ್ಮಚಾರಿಗಳಿಗೆ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಸಂಭಾವನೆ ನೀಡಲಾಗುತ್ತದೆ.

**3. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳಾವುವು?**

**ಅಥವಾ**

**ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಲಕ್ಷಣಗಳು ಯಾವುವು?**

**ಉತ್ತರ : ಸಂಘಟಿತ ದುಡಿಮೆ ವಲಯದ ಲಕ್ಷಣಗಳು** (ಎಪ್ರಿಲ್ 2019)

- ➢ ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ಕೆಲಸ ಮಾಡುವವರನ್ನು **ಸಂಘಟಿತ ಕೆಲಸಗಾರರು** ಎಂದು ಕರೆಯುತ್ತಾರೆ.
- ➢ ಪ್ರತಿಯೊಬ್ಬ ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುತ್ತವೆ.
- ➢ ಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣಿತಿ, ತರಬೇತಿ, ಅನುಭವ & ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶಗಳಿರುತ್ತವೆ.
- ➢ ಇವರಿಗೆ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲಾಗುತ್ತದೆ.
- ➢ ಇವರಿಗೆ ಕೆಲಸದ ಖಾತರಿ ಇರುತ್ತದೆ.
- ➢ ಇವರು ದಿನವೊಂದರಲ್ಲಿ ನಿಗದಿತ ಸಮಯದಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರಾಗಿತ್ತಾರೆ.

**ಅಸಂಘಟಿತ ಕೆಲಸಗಾರರು**

- ➢ ಯಾವುದೇ ನಿರ್ದಿಷ್ಟ ಕಾಯ್ದೆ ಕಾನೂನು ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ಕೆಲಸ ಮಾಡುವ ದಿನಗೂಲಿ ಕೆಲಸಗಾರರನ್ನು **ಅಸಂಘಟಿತ ಕೆಲಸಗಾರರು** ಎಂದು ಕರೆಯಲಾಗುತ್ತದೆ.
- ➢ ಅಸಂಘಟಿತ ವಲಯದಲ್ಲಿ ಕೆಲಸಗಾರರ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುವದಿಲ್ಲ.
- ➢ ಅಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣಿತಿ, ತರಬೇತಿ, ಅನುಭವ ಇರುವುದಿಲ್ಲ.
- ➢ ಇವರ ಕೆಲಸಕ್ಕೆ ಭದ್ರತೆ & ನಿಗದಿತ ವೇತನ, ನಿವೃತ್ತಿ ವೇತನ ಹಾಗೂ ವೈದ್ಯಕೀಯ ಸೌಲಭ್ಯ, ವಿಶೇಷ ಭತ್ಯೆಗಳ ಸೌಲಭ್ಯವಿರುವದಿಲ್ಲ.
- ➢ ಕೆಲಸದ ಖಾತರಿಯೂ ಸಹ ಇರುವದಿಲ್ಲ.
- ➢ ಇವರಿಗೆ ಯಾವುದೇ ರೀತಿಯ ಸಮಯ ನಿಗದಿ ಯಾಗಿರುವದಿಲ್ಲ.
- ➢ ಈ ವಲಯದಲ್ಲಿ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಕಾಯಿದೆಗಿಂತಲೂ ಕಡಿಮೆ ವೇತನ ಇರುತ್ತದೆ.

**4. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?**

**ಅಥವಾ**

**ಅಸಂಘಟಿತ ದುಡಿಮೆಗಾರರ ಲಕ್ಷಣಗಳೇನು?**

**ಉತ್ತರ : ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು**

- ➢ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ನಿಗದಿತ ಕೆಲಸವಾಗಿಲಿ, ನಿಗದಿತ ವೇತನವಾಗಲಿ ಇರುವುದಿಲ್ಲ.
- ➢ ದುಡಿಮೆಯನ್ನು ಹರಸಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವ ಜನರಿಗೆ ಸಾಮಾಜಿಕ ಭದ್ರತೆಗಳೇ ಇರುವುದಿಲ್ಲ.
- ➢ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ಅನೇಕ ಕಾನೂನಾತ್ಮಕ ಚೌಕಟ್ಟುಗಳು ಅನ್ವಯಿಸುವುದೇ ಇಲ್ಲ.
- ➢ ಅಸಂಘಟಿತ ವಲಯದಲ್ಲಿ ಅರೆಕುಶಲ ದೈಹಿಕ ಶ್ರಮ ಆಧಾರಿತ ಕೆಲಸವನ್ನು ಮಕ್ಕಳು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಮಾಡುತ್ತಿರುತ್ತಾರೆ.
- ➢ ಜೀವನೋಪಾಯಕ್ಕೆ ದುಡಿಯಲೇಬೇಕಾದ ಅಸಹಾಯಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಲೈಂಗಿಕ ಕಿರುಕುಳದ ದೌರ್ಜನ್ಯಗಳು ನಡೆಯುತ್ತವೆ.

# ಭೂಗೋಳ ಶಾಸ್ತ್ರ

## ಅಧ್ಯಾಯ – 1 ಭಾರತದ ಸ್ಥಾನ ಮತ್ತು ವಿಸ್ತೀರ್ಣ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ – ಭಾರತ.
2. ಭಾರತವು ಈ ಎರಡು ಅಕ್ಷಾಂಶಗಲ ನಡುವೆ ವಿಸ್ತರಿಸಿದೆ. –
   **$8^{\circ}4^{1}$ ಉತ್ತರ ಅಕ್ಷಾಂಶದಿಂದ $37^{\circ}6^{1}$ ಉತ್ತರ ಅಂಕ್ಷಾಂಶಗಳ ನಡುವೆ.**
3. ಭಾರತವು ಈ ಎರಡು ರೇಖಾಂಶಗಳ ನಡುವೆ ವಿಸ್ತರಿಸಿದೆ. –
   **$68^{\circ}7^{1}$ ಪೂರ್ವ ರೇಖಾಂಶದಿಂದ $97^{\circ}3^{1}$ ಪೂರ್ವ ರೇಖಾಂಶಗಳ ನಡುವೆ.**
4. ಭಾರತದ ಅತ್ಯಂತ ದಕ್ಷಿಣ ತುದಿ – **ಇಂದಿರಾ ಪಾಯಿಂಟ್.**
5. ಭಾರತದ ದಕ್ಷಿಣ ತುದಿಯಾದ **ಇಂದಿರಾ ಪಾಯಿಂಟ್** ಈ ಅಕ್ಷಾಂಶದ ಮೇಲಿದೆ. –
   **$6^{\circ}45^{1}$ ಉತ್ತ ಅಕ್ಷಾಂಶ.**
6. ಭಾರತದ ಅತ್ಯಂತ ಉತ್ತರ ತುದಿ – **ಜಮ್ಮು & ಕಾಶ್ಮೀರದ ಇಂದಿರಾಕೋಲ್.**
7. ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಅಕ್ಷಾಂಶ –
   **23 1/2° ಕರ್ಕಾಟಕ ಸಂಕ್ರಾಂತಿ ವೃತ್ತ.**
8. ಭಾರತದ ಮಧ್ಯಭಾಗದಲ್ಲಿ ಹಾದು ಹೋಗುವ ರೇಖಾಂಶ –
   **82 1/2° ಪೂರ್ವ ರೇಖಾಂಶ.**
9. ಭಾರತದ ಆದರ್ಶಕಾಲಮಾನವು ಈ ರೇಖಾಂಶವನ್ನಾಧರಿಸಿದೆ. –
   **82 1/2° ಪೂರ್ವ ರೇಖಾಂಶ.**
10. ಭಾರತವು ಪ್ರಪಂಚದ ______ ನೇ ದೊಡ್ಡ ರಾಷ್ಟ್ರ – **7ನೇಯ ದೊಡ್ಡ ರಾಷ್ಟ್ರ.**
11. ಭಾರತದ ಒಟ್ಟು ವಿಸ್ತೀರ್ಣ – **32,87,263 ಚ.ಕಿ.ಮೀ.**
12. ಪ್ರಪಂಚದ ಒಟ್ಟು ವಿಸ್ತೀರ್ಣದಲ್ಲಿ ಭಾರತದ ಶೇ. ಪಾಲು – **ಶೇ. 2.42%.**
13. ಭಾರತವು ಪೂರ್ವ–ಪಶ್ಚಿಮವಾಗಿ ಇರುವ ಅಗಲ – **2933 ಕಿ.ಮೀ.**
14. ಭಾರತವು ದಕ್ಷಿಣ – ಉತ್ತರವಾಗಿ ಇರುವ ಉದ್ದ – **3214 ಕಿ.ಮೀ.**
15. ಭಾರತದ ಒಟ್ಟು ಭೂಮೇರೆಯ ಉದ್ದ – **15,200 ಕಿ.ಮೀ.**
16. ಭಾರತ ಮತ್ತು ಚೀನಾಗಳ ನಡುವಿನ ನೈಸರ್ಗಿಕ ಗಡಿ – **ಹಿಮಾಲಯ ಪರ್ವತಗಳು.**
17. ಭಾರತವು ದ್ವೀಪರಹಿತವಾಗಿ ಕರಾವಳಿ ತೀರದ ಉದ್ದ – **6100 ಕಿ.ಮೀ.**
18. ಭಾರತವು ದ್ವೀಪಸಹಿತವಾಗಿ ಕರಾವಳಿ ತೀರದ ಉದ್ದ – **7515.5 ಕಿ.ಮೀ.**
19. ಭಾರತದ ಪಶ್ಚಿಮಕ್ಕೆ ಇರುವ ಸಮುದ್ರ – **ಅರಬ್ಬಿ ಸಮುದ್ರ.**
20. ಭಾರತದ ಪೂರ್ವಕ್ಕೆ ಇರುವ ಸಮುದ್ರ – **ಬಂಗಾಳಕೊಲ್ಲಿ**
21. ಭಾರತವು ಭೂಗಡಿಯನ್ನು ಹಂಚಿಕೊಂಡ ದೇಶಗಳ ಸಂಖ್ಯೆ – **7 ದೇಶಗಳು.**
22. ಶ್ರೀಲಂಕಾದಿಂದ ಇವುಗಳು ಭಾರತವನ್ನು ಪ್ರತ್ಯೇಕಿಸಿವೆ–
    **ಪಾಕ್ ಜಲಸಂಧಿ & ಮನ್ನಾರ್ ಖಾರಿ.**
23. ದೇಶದ ರಾಷ್ಟ್ರೀಯ ರಾಜಧಾನಿ ಕೇಂದ್ರ – **ದೆಹಲಿ.**
24. ಇತ್ತೀಚೆಗೆ ನಿರ್ಮಾಣಗೊಂಡ ಹೊಸ ರಾಜ್ಯ – **ತೆಲಂಗಾಣ.**
25. ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ರಾಜ್ಯ – **ರಾಜಸ್ತಾನ.**
26. ಭಾರತದಲ್ಲಿ ವಿಸ್ತೀರ್ಣದಲ್ಲಿ ಅತ್ಯಂತ ಚಿಕ್ಕ ರಾಜ್ಯ – **ಗೋವಾ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ವಿಸ್ತೀರ್ಣದಲ್ಲಿ ಭಾರತಕ್ಕಿಂತ ದೊಡ್ಡ ರಾಷ್ಟ್ರಗಳನ್ನು ಪಟ್ಟಿ ಮಾಡಿ.**

ಉತ್ತರ : ರಷ್ಯ, ಕೆನಡಾ, ಚೀನಾ, ಅಮೇರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್ ಮತ್ತು ಆಸ್ಟ್ರೇಲಿಯಾಗಳು ಭಾರತಕ್ಕಿಂತ ವಿಸ್ತೀರ್ಣದಲ್ಲಿ ಅತ್ಯಂತ ದೊಡ್ಡ ರಾಷ್ಟ್ರಗಳಾಗಿವೆ.

**2. ಭಾರತದ ನೈಸರ್ಗಿಕ ಗಡಿಗಳನ್ನು ತಿಳಿಸಿ.**

ಉತ್ತರ : ಭಾರತದ ಉತ್ತರಕ್ಕೆ ಹಿಮಾಲಯ ಪರ್ವತಗಳು, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಪೂರ್ವಕ್ಕೆ ಬಂಗಾಲ ಕೊಲ್ಲಿ ಮತ್ತು ದಕ್ಷಿಣಕ್ಕೆ ಹಿಂದು ಮಹಾಸಾಗರಗಳು ದೇಶದ ನೈಸರ್ಗಿಕ ಗಡಿಗಳಾಗಿವೆ.

**3. ಭಾರತವು ಯಾವ ಯಾವ ದೇಶಗಳೊಂದಿಗೆ ಭೂಗಡಿ ಮತ್ತು ಜಲಗಡಿಗಳನ್ನು ಹಂಚಿಕೊಂಡಿದೆ? ಅಥವಾ ಭಾರತದ ನೆರೆಯ ರಾಷ್ಟ್ರಗಳಾವುವು?**

ಉತ್ತರ : ಭಾರತವು ವಾಯುವ್ಯದಲ್ಲಿ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ, ಉತ್ತರದಲ್ಲಿ ನೇಪಾಳ, ಭೂತಾನ ಮತ್ತು ಚೀನಾ, ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಮ್ಯಾಯನ್ಮಾರ್ ದೇಶಗಳೊಂದಿಗೆ ಭೂಗಡಿಯನ್ನು, ಮತ್ತು ಶ್ರೀಲಂಕಾದೊಂದಿಗೆ ಜಲಗಡಿಯನ್ನು ಹಂಚಿಕೊಂಡಿದೆ.

## ಅಧ್ಯಾಯ – 2

## ಭಾರತದ ಮೇಲ್ಮೈ ಲಕ್ಷಣಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಹಿಮಾಲಯ ಪರ್ವತಗಳು ಭಾರತದಲ್ಲಿ ಪಶ್ಚಿಮದಲ್ಲಿ **ಸಿಂಧೂ** ನದಿ ಕಂದರದಿಂದ ಪೂರ್ವದಲ್ಲಿ **ಬ್ರಹ್ಮಪುತ್ರ** ನದಿ ಕಂದರದವರೆಗೆ _ ಕಿ.ಮೀ. ಉದ್ದವಾಗಿದೆ.– **2400 ಕಿ.ಮೀ.**
3. ಹಿಮಾಲಯ ಪರ್ವತಗಳ ಸರಾಸರಿ ಅಗಲ – **240 ರಿಂದ 320 ಕಿ.ಮೀ.**
2. ಹಿಮಾಲಯ ಪರ್ವತಗಳು ______ ಚ.ಕಿ.ಮೀ. ಹರಡಿವೆ. – **5 ಲಕ್ಷ ಚ.ಕಿ.ಮೀ.**
4. ಮಹಾ ಹಿಮಾಲಯ ಸರಣಿಯು ಸಮುದ್ರ ಮಟ್ಟದಿಂದ ಇರುವ ಸರಾಸರಿ ಎತ್ತರ –
   **6100 ಮೀಟರ್‌ಗಳು.**
5. ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ ಶಿಖರ – **ಮೌಂಟ್ ಎವರೆಸ್ಟ್ (8848ಮೀ.)**
6. ಮಹಾ ಹಿಮಾಲಯ ಇನ್ನೊಂದು ಹೆಸರು – **ಹಿಮಾದ್ರಿ.**
7. ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯಲು ಕಾರಣ –
   **ವರ್ಷವೆಲ್ಲಾ ಹಿಮಾವೃತ್ತವಾಗಿರುವದರಿಂದ.**
8. ಭಾರತದ ಅತ್ಯಂತ ಎತ್ತರವಾದ ಶಿಖರ –
   **ಕಾರಾಕೋರಂ ಸರಣಿಯಲ್ಲಿರುವ ಕೆ2 ಅಥವಾ ಮೌಂಟ್ ಗಾಡ್ವಿನ್ ಅಸ್ಟಿನ್ (8611 ಮೀ.)**

9. ಒಳ ಹಿಮಾಲಯಕ್ಕಿರುವ ಇನ್ನೊಂದು ಹೆಸರು – **ಹಿಮಾಚಲ್.**
10. ಹಿಮಾಲಯದ ಪಾದಬೆಟ್ಟಗಳೆಂದು ಕರೆಯುವ ಬೆಟ್ಟಗಳು – **ಶಿವಾಲಿಕ್ ಬೆಟ್ಟಗಳು**
11. ಸಿವಾಲಿಕ್ ಬೆಟ್ಟಗಳು ______ ದಿಂದ ______ ವರೆಗೆ ಹಬ್ಬಿವೆ. – **ಜಮ್ಮು–ಕಾಶ್ಮೀರದಿಂದ ಅರುಣಾಚಲ ಪ್ರದೇಶದವರೆಗೆ.**
13. ಉತ್ತರ ಮೈದಾನ ಈ ನದಿಗಳ ಸಂಚಯನ ಕಾರ್ಯದಿಂದ ನಿರ್ಮಾಣಗೊಂಡಿದೆ. – **ಸಟ್ಲೇಜ್, ಗಂಗಾ, ಬ್ರಹ್ಮಪುತ್ರಾ.**
14. ಉತ್ತರದ ಮೈದಾನ ಪೂರ್ವ–ಪಶ್ಚಿಮವಾಗಿ ____ ಕಿ.ಮೀ. ಉದ್ದಕ್ಕೆ ಹರಡಿದೆ. – **2500 ಕಿ.ಮೀ.**
15. ಉತ್ತರ ಮೈದಾನದ ವಿಸ್ತಾರ – **7 ಲಕ್ಷ ಚ.ಕಿ.ಮೀ.ಗಳು.**
16. ಉತ್ತರ ಮಹಾ ಮೈದಾನವು ಈ ಮಣ್ಣಿನಿಂದ ರಚನೆಯಾಗಿದೆ. – **ಮೆಕ್ಕಲು ಮಣ್ಣು.**
17. ಪುರಾತನ ಶಿಲೆಗಳಿಂದ ರಚಿತವಾದ ಗೊಂಡ್ವಾನ್ ಕಾಲಕ್ಕೆ ಸೇರಿದ ಭೂಭಾಗ – **ಪರ್ಯಾಯ ಪ್ರಸ್ಥಭೂಮಿ**
18. ಪರ್ಯಾಯ ಪ್ರಸ್ಥಭೂಮಿಯ ವಿಸ್ತೀರ್ಣ – **16 ಲಕ್ಷ ಚ.ಕಿ.ಮೀ.ಗಳು.**
19. ಪರ್ಯಾಯ ಪ್ರಸ್ಥಭೂಮಿಯ ದಕ್ಷಿಣ ತುದಿ – **ಕನ್ಯಾಕುಮಾರಿ.**
20. ಅರಾವಳಿ ಸರಣಿಯ ಅತಿ ಎತ್ತರವಾದ ಶಿಖರ – **ಅಬು ಪರ್ವತಗಳಲ್ಲಿನ ಗುರುಶಿಖರ (1772 ಮೀ.)**
21. ಪಶ್ಚಿಮ ಘಟ್ಟಗಳು ______ ನದಿ ಕಣಿವೆಯಿಂದ ______ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ ಸಮಾಂತರವಾಗಿ ಹಬ್ಬಿವೆ. – **ತಾಪಿ ನದಿಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ.**
22. ಪಶ್ಚಿಮ ಘಟ್ಟಗಳಿಗಿರುವ ಇನ್ನೊಂದು ಹೆಸರು – **ಸಹ್ಯಾದ್ರಿ ಸರಣಿ ಬೆಟ್ಟಗಳು**
23. ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ – **ಅಣ್ಣಾಮಲೈ ಬೆಟ್ಟಗಳಲ್ಲಿರುವ 'ಆನೈಮುಡಿ' (2695ಮೀ.)**
24. ಪೂರ್ವ ಘಟ್ಟಗಳು ಉತ್ತರದಲ್ಲಿ ________ ನದಿ ಕಣಿವೆಯಿಂದ ದಕ್ಷಿಣದಲ್ಲಿ ______ ಬೆಟ್ಟಗಳವರೆಗೆ ವಿಸ್ತರಿಸಿವೆ. – **ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ.**
25. ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು _____ ಬೆಟ್ಟಗಳಲ್ಲಿ ಸಂಧಿಸುತ್ತವೆ.– **ನೀಲಗಿರಿ ಬೆಟ್ಟ.**
26. ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ – **ಅರ್ಮಕೊಂಡ.**
27. ಪರ್ಯಾಯ ಪ್ರಸ್ಥಭೂಮಿಯ ಈಶಾನ್ಯ ಭಾಗದಲ್ಲಿರುವ ಸರಣಿ – **ಛೋಟಾನಾಗಪುರ ಸರಣಿ.**
27. ಪಶ್ಚಿಮ ಕರಾವಳಿಯು ____ ನಿಂದ ____ ವರೆಗೆ ವಿಸ್ತರಿಸಿದೆ. – **ಕಛ್‌ನಿಂದ ಕನ್ಯಾಕುಮಾರಿವರೆಗೆ.**
28. ಪೂರ್ವ ಕರಾವಳಿಯು _____ ನಿಂದ ______ ವರೆಗೆ ವಿಸ್ತರಿಸಿದೆ. – **ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿಯವರೆಗೆ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಹಿಮಾಲಯ ಪರ್ವತಗಳ ಮೂರು ಸಮಾನಾಂತರ ಸರಣಿಗಳನ್ನು ತಿಳಿಸಿ.**
ಉತ್ತರ : ಹಿಮಾಲಯ ಪರ್ವತಗಳ ಮೂರು ಸಮಾನಾಂತರ ಸರಣಿಗಳಿವೆ. ಅವುಗಳೆಂದರೆ –
1. ಮಹಾ ಹಿಮಾಲಯ (ಹಿಮಾದ್ರಿ) 2. ಒಳ ಹಿಮಾಲಯ(ಹಿಮಾಚಲ್) 3. ಸಿವಾಲಿಕ್ ಬೆಟ್ಟಗಳು.

**2. ಮಹಾ ಹಿಮಾಲಯದಲ್ಲಿ ಕಂಡುಬರುವ ಪ್ರಮುಖ ಶಿಖರಗಳು ಯಾವುವು?**
ಉತ್ತರ : ಮಹಾ ಹಿಮಾಲಯದಲ್ಲಿ ಕಂಡುಬರುವ ಪ್ರಮುಖ ಶಿಖರಗಳೆಂದರೆ – ಮೌಂಟ್ ಎವರೆಸ್ಟ್, ಕಾಂಚನಜುಂಗ, ಮಾಕಲು, ಧವಳಗಿರಿ, ಮಾನಸ್ಲು, ನಂದಾದೇವಿ ಇತ್ಯಾದಿ.

**3. ಒಳ ಹಿಮಾಲಯದಲ್ಲಿ ಕಂಡು ಬರುವ ಪ್ರಮುಖ ಗಿರಿಧಾಮಗಳನ್ನು ತಿಳಿಸಿ.**
ಉತ್ತರ : ಒಳ ಹಿಮಾಲಯದಲ್ಲಿ ಕಂಡು ಬರುವ ಆಕರ್ಷಕ ಗಿರಿಧಾಮಗಳೆಂದರೆ – ಶಿಮ್ಲಾ, ರಾಣಿಕೇಟ್, ಮಸ್ಸೂರಿ, ನೈನಿತಾಲ್ ಮತ್ತು ಡಾರ್ಜಲಿಂಗ್.


**4. ಡೂನ್‌ಗಳೆಂದರೇನು? ಉದಾಹರಣೆ ಕೊಡಿ.**
ಉತ್ತರ : ಶಿವಾಲಿಕ್ ಬೆಟ್ಟಗಳು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, ಇವುಗಳನ್ನು 'ಡೂನ್ಸ್' ಎನ್ನುವರು. ಉದಾ : ಡೆಹರಾಡೂನ್.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?**
ಉತ್ತರ : ಮೇಲ್ಮೈ ಲಕ್ಷಣಗಳನ್ನಾಧರಿಸಿ ಭಾರತವನ್ನು ನಾಲ್ಕು ಪ್ರಾಕೃತಿಕ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –
- ಉತ್ತರ ಪರ್ವತಗಳು,
- ಉತ್ತರದ ಮೈದಾನಗಳು
- ಪರ್ಯಾಯ ಪ್ರಸ್ಥಭೂಮಿ
- ಕರಾವಳಿ ಮೈದಾನ ಮತ್ತು ದ್ವೀಪಗಳು

**2. ಶಿವಾಲಿಕ್ ಬೆಟ್ಟಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**
**ಉತ್ತರ :**
- ಶಿವಾಲಿಕ್ ಶ್ರೇಣಿಯು ಅತಿ ಕಡಿಮೆ ಎತ್ತರವನ್ನು ಹೊಂದಿರುವುದರಿಂದ ಹಿಮಾಲಯದ ಪಾದಬೆಟ್ಟಗಳೆಂದು ಕರೆಯುವರು.
- ಇವುಗಳ ಸರಾಸರಿ ಎತ್ತರ 600 ರಿಂದ 1500 ಮೀ. ಮತ್ತು ಅಗಲ 15 ರಿಂದ 150 ಕಿ.ಮೀ.ಗಳು.
- ಇವು ಜಮ್ಮು–ಕಾಶ್ಮೀರದಿಂದ ಅರಣಾಚಲ ಪ್ರದೇಶದವರೆಗೆ ಹಬ್ಬಿವೆ.
- ಇವು ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಹೊಂದಿದ್ದು, ಇವುಗಳನ್ನು 'ಡೂನ್ಸ್' ಎನ್ನುವರು. ಉದಾ : ಡೆಹರಾಡೂನ್.


**3. ಹಿಮಾಲಯ ಪರ್ವತಗಳ (ಉತ್ತರ ಪರ್ವತಗಳ) ಪ್ರಾಮುಖ್ಯತೆಯನ್ನು ತಿಳಿಸಿ.**
**ಉತ್ತರ : ಹಿಮಾಲಯ ಪರ್ವತಗಳ (ಉತ್ತರ ಪರ್ವತಗಳ) ಪ್ರಾಮುಖ್ಯತೆ–**



- ಹಿಮಾಲಯ ಪರ್ವತಗಳು ನೈಸರ್ಗಿಕ ಗಡಿಯಾಗಿದ್ದು, ಪರಕೀಯರ ದಾಳಿಯನ್ನು ತಡೆಗಟ್ಟುತ್ತವೆ.
- ಮಧ್ಯ ಏಶಿಯಾದಿಂದ ಬೀಸುವ ಶೀತಗಾಳಿಯನ್ನು ನಿಯಂತ್ರಿಸುತ್ತವೆ.
- ಮಳೆ ಮಾರುತಗಳನ್ನು ತಡೆದು ಅಧಿಕ ಮಳೆಯಾಗಲು ನೆರವಾಗುತ್ತವೆ.
- ನೆಡುತೋಟದ ಬೆಳೆಗಳಿಗೆ ಸೂಕ್ತವಾಗಿವೆ. ಉದಾ : ಅಸ್ಸಾಂನ ಚಹ
- ತೋಟಗಳು.
- ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ.
- ಹಲವು ನದಿಗಳ ಉಗಮ ಸ್ಥಾನಗಳಾಗಿವೆ.
- ಇಲ್ಲಿನ ಜಲಪಾತಗಳು ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯುಕ್ತವಾಗಿವೆ.


**4. ಉತ್ತರ ಮೈದಾನಗಳು ಹೇಗೆ ರಚನೆಯಾಗಿವೆ?**
ಉತ್ತರ :
- ಉತ್ತರ ಮೈದಾನಗಳು ಸಟ್ಲೇಜ್, ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಸಂಚಯನದಿಂದ ನಿರ್ಮಾಣಗೊಂಡಿವೆ.
- ಮೆಕ್ಕಲು ಮಣ್ಣಿನಿಂದ ರಚನೆಯಾಗಿವೆ.
- ಇವು ಸಮತಟ್ಟಾದ ಮೈದಾನವಾಗಿದ್ದು, ಮೇಲ್ಭಾಗದಲ್ಲಿ ಎಲ್ಲಿಯೂ ಕಲ್ಲುಗಳು ಕಂಡಬರುವುದಿಲ್ಲ.

**5. ಉತ್ತರ ಮೈದಾನಗಳ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ ಉತ್ತರದ ಮಹಾಮೈದಾನಗಳು ಭಾರತದ ಆರ್ಥಿಕಾಭಿವೃದ್ಧಿಗೆ ಹೇಗೆ ಸಹಾಯಕವಾಗಿವೆ?**
**ಉತ್ತರ : ಉತ್ತರ ಮೈದಾನಗಳ ಪ್ರಾಮುಖ್ಯತೆ –**



- ಉತ್ತರ ಮೈದಾನವು ವಿಶಾಲವಾಗಿದ್ದು, ಫಲವತ್ತಾಗಿದೆ.
- ಇಲ್ಲಿ ಸರ್ವಕಾಲಿಕ ನದಿಗಳು ಹರಿಯುತ್ತವೆ. ಹೀಗಾಗಿ ಕೃಷಿಗೆ ಉಪಯುಕ್ತವಾಗಿವೆ.
- ರಸ್ತೆ, ರೈಲು ಮಾರ್ಗಗಳ ನಿರ್ಮಾಣ ಮತ್ತು ಸಂಪರ್ಕ ಮಾಧ್ಯಮಕ್ಕೂ ಯೋಗ್ಯವಾಗಿವೆ.
- ಕೈಗಾರಿಕೀಕರಣ, ನಗರೀಕರಣ ಮತ್ತು ವ್ಯಾಪಾರಕ್ಕೂ ನೆರವಾಗುತ್ತವೆ.
- ಇಲ್ಲಿ ಅನೇಕ ಯಾತ್ರಾ ಸ್ಥಳಗಳಿವೆ.

**6. ಪರ್ಯಾಯ ಪ್ರಸ್ಥಭೂಮಿಯ ರಚನೆಯನ್ನು ತಿಳಿಸಿ.**
**ಉತ್ತರ : ಪರ್ಯಾಯ ಪ್ರಸ್ಥಭೂಮಿಯ ರಚನೆ –**



- ಪರ್ಯಾಯ ಪ್ರಸ್ಥಭೂಮಿಯು ಪುರಾತನ ಶಿಲೆಗಳಿಂದ ರಚಿತವಾಗಿವೆ.
- ಇದು ಸುಮಾರು 16 ಲಕ್ಷ ಚ.ಕಿ.ಮೀ. ಪ್ರದೇಶವನ್ನಾವರಿಸಿದೆ.
- ಇದು ತ್ರಿಕೋನಾಕಾರದಲ್ಲಿದೆ,
- ಇದರ ದಕ್ಷಿಣ ತುದಿಯು ಕನ್ಯಾಕುಮಾರಿ ಭೂಶಿರವಾಗಿದೆ.
- ಪರ್ಯಾಯ ಪ್ರಸ್ಥಭೂಮಿಯು ಅನೇಕ ಬೆಟ್ಟ ಮತ್ತು ಪ್ರಸ್ಥಭೂಮಿಗಳಿಂದ ಆವರಿಸಿದೆ. ಉದಾ : ಅರಾವಳಿ, ವಿದ್ಯಾ, ಸಾತ್ಪುರ, ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟಗಳು.

**7. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ. ಅಥವಾ ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಹೇಗೆ ಭಿನ್ನವಾಗಿವೆ?**
**ಉತ್ತರ : ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸ –**


| ಪೂರ್ವ ಘಟ್ಟಗಳು | ಪಶ್ಚಿಮ ಘಟ್ಟಗಳು |
|---|---|
| ➢ ಪೂರ್ವ ಘಟ್ಟಗಳು ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ಪೂರ್ವ ಕರಾವಳಿಗೆ ಹೊಂದಿಕೊಂಡಂತೆ ವಿಸ್ತರಿಸಿವೆ. | ➢ ಪಶ್ಚಿಮ ಘಟ್ಟಗಳು ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ ಸಮಾಂತರವಾಗಿ ಹಬ್ಬಿವೆ. |
| ➢ ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ. ಮತ್ತು ನಿರಂತರವಾಗಿಲ್ಲ. | ➢ ಪಶ್ಚಿಮ ಘಟ್ಟಗಳು ಅತ್ಯಂತ ಎತ್ತರವಾಗಿವೆ. ಮತ್ತು ನಿರಂತರವಾಗಿವೆ. |
| ➢ ಪೂರ್ವ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ ಮತ್ತು ಸಮುದ್ರದಿಂದ ದೂರದಲ್ಲಿ ಹರಡಿವೆ. | ➢ ಪಶ್ಚಿಮ ಘಟ್ಟಗಳು ಕರಾವಳಿಗೆ ಹೊಂದಿ ಕೊಂಡಿದ್ದು, ತುಂಬಾ ಕಡಿದಾಗಿವೆ. |
| ➢ ಪೂರ್ವ ಘಟ್ಟಗಳು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿಲ್ಲ. | ➢ ಪಶ್ಚಿಮ ಘಟ್ಟಗಳು ಅನೇಕ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸೃಷ್ಟಿಸಿವೆ. |

**8. ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ**
**ಭಾರತದ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಸಮರ್ಥಿಸಿ.**

**ಉತ್ತರ : ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆ –**

- ಪರ್ಯಾಯ ಪ್ರಸ್ಥಭೂಮಿಯು ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯತೆಯಿಂದ ಕೂಡಿವೆ.
- ನೈರುತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ ಬೀರುತ್ತವೆ.
- ಕಪ್ಪು ಮಣ್ಣಿನಿಂದ ಕೂಡಿದ್ದು, ಕೃಷಿಗೆ ಪೂರಕವಾಗಿವೆ.
- ಅನೇಕ ದಕ್ಷಿಣ ಭಾರತದ ನದಿಗಳಿಗೆ ಉಗಮ ಸ್ಥಾನವಾಗಿದೆ.
- ಜಲಶಕ್ತಿ ತಯಾರಿಕೆಗೆ ಉಪಯುಕ್ತವಾಗಿವೆ.
- ಇಲ್ಲಿ ಅನೇಕ ಗಿರಿಧಾಮಗಳೂ ಇವೆ. ಉದಾ : ಉದಕಮಂಡಲ ( ಊಟಿ)

**9. ಭಾರತದ ಕರಾವಳಿಯ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ**
**ಆರ್ಥಿಕಾಭಿವೃದ್ಧಿಯಲ್ಲಿ ಕರಾವಳಿ ಮೈದಾನವು ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಗೆ ಹೇಳುವಿರಿ. ಅಥವಾ**
**ಕೊಟ್ಟಿರುವ ದಕ್ಷಿಣ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ವಾಭಾವಿಕ ವಿಭಾಗವನ್ನು ಹೆಸರಿಸಿ, ಅದರ ಪ್ರಾಮುಖ್ಯತೆಯನ್ನು ತಿಳಿಸಿ. (ಎಪ್ರಿಲ್ 2019)**



**ಉತ್ತರ : ಭಾರತದ ಕರಾವಳಿಯ ಪ್ರಾಮುಖ್ಯತೆ –**

- ಭಾರತದ ಕರಾವಳಿ ಮೈದಾನಗಳು ಕೆಲವು ನೈಸರ್ಗಿಕ ಬಂದರುಗಳನ್ನು ಹೊಂದಿವೆ.
- ಭಾರತದ ವ್ಯಾಪಾರ ಅಭಿವೃದ್ಧಿಗೆ ಬಂದರುಗಳು ಪೂರಕವಾಗಿವೆ. ಉದಾ : ಕಾಂಡ್ಲ, ಮುಂಬಯಿ, ಚನ್ನೈ, ಕೊಲ್ಕತ ಇತ್ಯಾದಿ.
- ಕರಾವಳಿಯು ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆ, ಕೃಷಿ ಮತ್ತು ಉಪ್ಪು ಉತ್ಪಾದನೆಗಳಿಗೂ ನೆರವಾಗುತ್ತವೆ.
- ಆಕರ್ಷಕ ಬೀಚಗಳಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತವೆ.

**10. ಭಾರತದ ಪಶ್ಚಿಮ ಕರಾವಳಿಯ ರಚನೆಯನ್ನು ತಿಳಿಸಿ.**

ಉತ್ತರ :

- ಪಶ್ಚಿಮ ಕರಾವಳಿ ಮೈದಾನವು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ವಿಸ್ತರಿಸಿದೆ.
- ಇದು ಕಛ್‌ನಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ.
- ಪಶ್ಚಿಮ ಕರಾವಳಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.
  1. ಕೊಂಕಣ ತೀರ – ದಾಮನ್‌ನಿಂದ ಗೋವಾದವರೆಗೆ ವಿಸ್ತರಿಸಿದೆ.
  2. ಕರ್ನಾಟಕ ತೀರ – ಗೋವಾದಿಂದ ಮಂಗಳೂರವರೆಗೆ ವಿಸ್ತರಿಸಿದೆ.
  3. ಮಲಬಾರ್ ತೀರ – ಮಂಗಳೂರಿನಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ.

**11. ಪಶ್ಚಿಮ ಕರಾವಳಿಗೂ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸ ತಿಳಿಸಿ. ಅಥವಾ ಪೂರ್ವ ಕರಾವಳಿಯು ಪಶ್ಚಿಮ ಕರಾವಳಿಗಿಂತ ಹೇಗೆ ಭಿನ್ನವಾಗಿದೆ.**

**ಉತ್ತರ : ಪಶ್ಚಿಮ ಕರಾವಳಿಗೂ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸ –**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| ➢ ಪಶ್ಚಿಮ ಕರಾವಳಿ ಮೈದಾನವು ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡುಬರುತ್ತದೆ. | ➢ ಪೂರ್ವ ಕರಾವಳಿ ಮೈದಾನವು ಸುವರ್ಣರೇಖಾ ನದಿಯ ಉತ್ತರ ಭಾಗದಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ. |
| ➢ ಇದು ಕಛ್‌ನಿಂದ ಕನ್ಯಾಕುಮಾರಿಯವರೆಗೆ ವಿಸ್ತರಿಸಿದೆ. | ➢ ಇದು ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ವಿಸ್ತರಿಸಿದೆ. |
| ➢ ಪಶ್ಚಿಮ ಕರಾವಳಿಯು ಕಿರಿದಾಗಿದ್ದು, ಕಡಿದಾದ ಇಳಿಜಾರು ಮತ್ತು ಶಿಲಾಮಯವಾಗಿದೆ. | ➢ ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ. |
| ➢ ಇದು ವಿಶಾಲವಾದ ನದಿಮುಖಜ ಭೂಮಿಯನ್ನು ಒಳಗೊಂಡಿಲ್ಲ. | ➢ ಇದು ನದಿಮುಖಜ ಭೂಮಿಗಳನ್ನು ನಿರ್ಮಿಸಿದೆ. ಉದಾ : ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಮುಖಜ ಭೂಮಿಗಳು. |
| ➢ ಪಶ್ಚಿಮ ಕರಾವಳಿಯನ್ನು ಕೊಂಕಣ ತೀರ, ಕರ್ನಾಟಕ ತೀರ, ಮಲಬಾರ ತೀರವೆಂದು ಕರೆಯುವರು. | ➢ ಪೂರ್ವ ಕರಾವಳಿಯನ್ನು ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರಗಳೆಂದು ಕರೆಯುವರು. |

**12. ಭಾರತಕ್ಕೆ ಸೇರಿರುವ ದ್ವೀಪಸ್ತೋಮಗಳಾವುವು? ಅವು ಎಷ್ಟಿವೆ? ಅಥವಾ ಅಂಡಮಾನ್ ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪಗಳ ನಡುವಿನ ವ್ಯತ್ಯಾಸ ತಿಳಿಸಿ.**

ಉತ್ತರ :

- ಭಾರತಕ್ಕೆ ಸೇರಿದ 247 ದ್ವೀಪಗಳಿವೆ.
- 204 ಬಂಗಾಳಕೊಲ್ಲಿಯಲ್ಲಿ ಮತ್ತು 43 ಅರಬ್ಬಿ ಸಮುದ್ರಗಳಲ್ಲಿವೆ.
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿವೆ. ಇವು ಜ್ವಾಲಾಮುಖಿಜನಿತ ದ್ವೀಪಗಳಾಗಿವೆ.
- ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು, ಅವು ಹವಳ ದ್ವೀಪಗಳಾಗಿವೆ.

# ಅಧ್ಯಾಯ – 3

## ಭಾರತದ ವಾಯುಗುಣ

**ಪ್ರಶ್ನೆ 1] ಬಹುಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು.**

1. ಭಾರತದಲ್ಲಿ ಕಂಡುಬರುವ ವಾಯುಗುಣದ ಮಾದರಿ – **ಉಷ್ಣವಲಯದ ಮಾನ್ಸೂನ್ ಮಾದರಿ.**
2. ಚಳಿಗಾಲದ ಅವಧಿಯಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡರಹಿತವಾಗಿರಲು ಕಾರಣ – **ಈ ಅವಧಿಯಲ್ಲಿ ಸೂರ್ಯನ ಕಿರಣಗಳು ಭಾರತದಲ್ಲಿ ಓರೆಯಾಗಿ ಬೀಳವುದರಿಂದ.**
4. ಭಾರತದಲ್ಲಿ ಈ ತಿಂಗಳು ಅತಿ ಶೀತವಾದ ತಿಂಗಳಾಗಿದೆ. – **ಜನವರಿ.**
3. ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ ದಾಖಲಾದ ಸ್ಥಳ – **ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ (–4°ಸೆಂ.)**
5. ಚಳಿಗಾಲದ ಅವಧಿಯಲ್ಲಿ ಭಾರತವು ಪಡೆಯುವ ವಾರ್ಷಿಕ ಶೇ. ಮಳೆಯ ಪ್ರಮಾಣ– **ಶೇ. 02%.**
6. ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ದಾಖಲಾದ ಸ್ಥಳ – **ರಾಜಸ್ತಾನದ ಗಂಗಾನಗರ (ಶೇ.49.4°ಸೆಂ.)**
7. ಬೇಸಿಗೆ ಕಾಲದಲ್ಲಿ ಭಾರತದ ಹವಾಗುಣದ ಪ್ರಮುಖ ಲಕ್ಷಣ – **ಅತಿಶಾಖ, ಶುಷ್ಕ ಮತ್ತು ಶೆಖೆ**
7. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಅಂಧಿಸ್ ಎಂದು ಕರೆಯಲ್ಪಡುವ ರಾಜ– **ಉತ್ತರ ಪ್ರದೇಶ.**
8. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ ಹೀಗೆ ಕರೆಯಲಾಗುತ್ತದೆ. – **ಕಾಲಬೈಸಾಕಿ.**
9. ಬೇಸಿಗೆಯಲ್ಲಾಗುವ ಪರಿಸರಣ ಮಳೆಯನ್ನು ಕೇರಳದಲ್ಲಿ ಹೀಗೆ ಕರೆಯಲಾಗುತ್ತದೆ. – **ಮಾವಿನ ಹೊಯ್ಲು.**
10. ಕರ್ನಾಟಕದಲ್ಲಿ ಪರಿಸರಣ ಮಳೆಗೆ ಕಾಫಿಯ ಹೂಮಳೆ ಎಂದು ಕರೆಯಲು ಕಾರಣ– **ಕಾಫಿ ಬೆಳೆಗೆ ನೆರವಾಗುವುದರಿಂದ.**
11. ಬೇಸಿಗೆಯ ಅವಧಿಯಲ್ಲಿ ಭಾರತವು ಪಡೆಯುವ ವಾರ್ಷಿಕ ಶೇ. ಮಳೆಯ ಪ್ರಮಾಣ– **ಶೇ 10%.**
12. ಮಳೆಗಾಲಕ್ಕಿರುವ ಇನ್ನೊಂದು ಹೆಸರು – **ನೈರುತ್ಯ ಮಾನ್ಸೂನ್ ಮಾರುತಗಳ ಕಾಲ.**
13. ಮಳೆಗಾಲದ ಅವಧಿಯಲ್ಲಿ ಭಾರತವು ಪಡೆಯುವ ವಾರ್ಷಿಕ ಶೇ. ಮಳೆಯ ಪ್ರಮಾಣ – **ಶೇ. 75%.**
14. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳು – **ಅರಬ್ಬಿಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆ.**
15. ಭಾರತದಲ್ಲೇ ಅತಿ ಹೆಚ್ಚು ಮಳೆ ದಾಖಲಾದ ಸ್ಥಳ – **ಮೇಘಾಲಯದ ಮಾಸಿನ್‌ರಾಮ್ (1141 ಸೆಂ.ಮೀ.)**
16. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ – **ರಾಜಸ್ತಾನದ ಜೈಸಲ್ಮೇರ್‌ನಲ್ಲಿರುವ ರೂಯ್ಲಿ ( 8.3 ಸೆಂ.ಮೀ)**
17. ಸೈಕ್ಲೋನ್ (ಚಂಡಮಾರುತಗಳು)ಗಳು ಸಂಭವಿಸುವುದು ಈ ಋತುಕಾಲದಲ್ಲಿ – **ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ. ಅಥವಾ ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ**
18. ಈಶಾನ್ಯ ಮಾನ್ಸೂನ್ ಮಾರುತಗಳ ಕಾಲದಲ್ಲಿ ದೇಶ ಪಡೆಯುವ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ – **ಶೇ. 13%.**
19. ಬೇಸಿಗೆಯಲ್ಲಿ ಉತ್ತರ ಭಾರತವು ಹೆಚ್ಚು ಉಷ್ಣಾಂಶ ಹೊಂದಿರಲು ಕಾರಣ – **ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದು.**
20. ಮಳೆಯ ನೆರಳಿನ ಪ್ರದೇಶವೆಂದು ಕರೆಯಲ್ಪಡುವ ಭಾರತದ ಭೂಭಾಗ – **ಪಶ್ಚಿಮ ಘಟ್ಟಗಳ ಪೂರ್ವ ಭಾಗ.**
21. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳ ಆರಂಭದಲ್ಲಿ ಭಾರತದಿಂದ ಹಿಮ್ಮೆಟ್ಟಲು ಪ್ರಾರಂಭಿಸುತ್ತವೆ. ಏಕೆಂದರೆ ಉತ್ತರ ಗೋಳಾರ್ಧದಲ್ಲಿ – **ಕಡಿಮೆ ಉಷ್ಣಾಂಶ ಮತ್ತು ಅಧಿಕ ಒತ್ತಡವಿರುತ್ತದೆ.**
22. ಅಕ್ಟೋಬರ್ ತಿಂಗಳಲ್ಲಿ ಮಾನ್ಸೂನ್ ಮಾರುತಗಳು ನಿರ್ಗಮಿಸಲು ಕಾರಣ – **ಭೂಭಾಗ ಅಧಿಕ ಒತ್ತಡ ಮತ್ತು ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡದ ಪರಿಣಾಮ.**
23. ಆವರ್ತ(ಸೈಕ್ಲೋನ್) ಮಾರುತಗಳು ಸಂಭವಿಸುವುದು – **ಬಂಗಾಳಕೊಲ್ಲಿಯಲ್ಲಿ.**
24. ಭಾರತದ ಪೂರ್ವ ಕರಾವಳಿ ತೀರಕ್ಕೆ ಹೆಚ್ಚು ಹಾನಿಯನ್ನುಂಟು ಮಾಡುವ ಮಾರುತಗಳು – ಆವರ್ತ(ಸೈಕ್ಲೋನ್) ಮಾರುತಗಳು

**ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**
**ಅಥವಾ**
**ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ ಏಕೆ? (ಎಪ್ರಿಲ್ 2019)**

PSG

ಉತ್ತರ : ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳೆಂದರೆ – ಸ್ಥಾನ, ಜಲರಾಶಿಗಳು, ಮೇಲ್ಮೈ ಲಕ್ಷಣ ಮತ್ತು ಮಾನ್ಸೂನ್ ಮಾರುತಗಳು. ಹೀಗಾಗಿ ದೇಶದ ವಾಯುಗುಣ ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.

**2. ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣ ಕಂಡುಬರಲು ಕಾರಣವೇನು?**

ಉತ್ತರ : ಭಾರತದಲ್ಲಿ ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣವಿದೆ. ಏಕೆಂದರೆ ದೇಶದ ಹೆಚ್ಚು ಭಾಗವು ಉಷ್ಣವಲಯದಲ್ಲಿದೆ. ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಪಟ್ಟಿದೆ.

**3. ಭಾರತದ ಪ್ರಮುಖ ವಾಯುಗುಣದ ಋತುಕಾಲಗಳಾವುವು?**

ಉತ್ತರ : ಭಾರತದಲ್ಲಿ ಒಂದು ವರ್ಷದಲ್ಲಿ ವಾಯುಗುಣವನ್ನು 4 ಋತುಕಾಲಗಳಾಗಿ ವಿಂಗಡಿಸಬಹುದು. ಅವುಗಳೆಂದರೆ –

- ಚಳಿಗಾಲ (ಡಿಸೆಂಬರ್ – ಫೆಬ್ರುವರಿ)
- ಬೇಸಿಗೆ ಕಾಲ (ಮಾರ್ಚ – ಮೇ)
- ಮಳೆಗಾಲ ( ಜೂನ್ – ಸೆಪ್ಟೆಂಬರ್)
- ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ (ಸೆಪ್ಟೆಂಬರ್ ಮಧ್ಯ – ನವೆಂಬರ್)

**4. ಚಳಿಗಾಲದ ಹವಾಗುಣದ ಪರಿಸ್ಥಿತಿಯನ್ನು ಕುರಿತು ವಿವರಿಸಿ.**

**ಉತ್ತರ :**

- ಭಾರತದಲ್ಲಿ ಸೂರ್ಯನ ಕಿರಣಗಳು ಓರೆಯಾಗಿ ಬೀಳುವುದರಿಂದ ಕಡಿಮೆ ಉಷ್ಣಾಂಶ, ಕಡಿಮೆ ಆರ್ದ್ರತೆ ಮತ್ತು ಆಕಾಶವು ಮೋಡ ರಹಿತವಾಗಿರುತ್ತದೆ.
- ಜನವರಿ ತಿಂಗಳು ಅತಿ ಶೀತವಾಗಿರುತ್ತದೆ.
- ಕಾಶ್ಮೀರ ಮತ್ತು ಹಿಮಾಚಲ ಪ್ರದೇಶಗಳ ಪರ್ವತಗಳಲ್ಲಿ ಅತಿ ಕಡಿಮೆ ಉಷ್ಣಾಂಶ ದಾಖಲಾಗುತ್ತದೆ.
- ಕಾರ್ಗಿಲ್ ಸಮೀಪದಲ್ಲಿರುವ ಡ್ರಾಸ್ ಎಂಬಲ್ಲಿ ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶ (–4°ಸೆಂ) ದಾಖಲಾಗುತ್ತದೆ.
- ಇಬ್ಬನಿ ಕಾವಳಗಳು ಸರ್ವಸಾಮಾನ್ಯ.
- ಪರ್ವತ ಭಾಗಗಳಲ್ಲಿ ಹೆಚ್ಚು ಹಿಮವೃಷ್ಟಿಯಾಗುತ್ತದೆ.
- ಈ ಅವಧಿಯಲ್ಲಿ ಭಾರತವು ತನ್ನ ವಾರ್ಷಿಕ ಮಳೆಯಲ್ಲಿ ಶೇ. 2% ಭಾಗ ಮಳೆ ಬೀಳುತ್ತದೆ.

**5. ಬೇಸಿಗೆ ಕಾಲದ ಹವಾಮಾನದ ಪರಿಸ್ಥಿತಿಯನ್ನು ತಿಳಿಸಿ.**

**ಉತ್ತರ :**

- ಬೇಸಿಗೆಯಲ್ಲಿ ಸೂರ್ಯನ ಕಿರಣಗಳು ಉತ್ತರ ಗೋಳಾರ್ಧದಲ್ಲಿ ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶವು ಹೆಚ್ಚು.
- ಹವಾಗುಣವು ಅತಿ ಶಾಖ, ಶುಷ್ಕ ಮತ್ತು ಸೆಖೆಯಿಂದ ಕೂಡಿರುತ್ತದೆ.
- ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ.
- ಭಾರತದಲ್ಲಿ ವಾರ್ಷಿಕ ಮಳೆ ಹಂಚಿಕೆಯಲ್ಲಿ ಶೇ. 10% ಭಾಗವು ಬೇಸಿಗೆಯಲ್ಲಿ ಬೀಳುವುದು.

**6. ಮಾವಿನ ಹೊಯ್ಲು ಎಂದರೇನು?**

ಉತ್ತರ : ಬೇಸಿಗೆ ಅವಧಿಯಲ್ಲಿ ದೇಶದ ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ. ಇದು ಕೇರಳದಲ್ಲಿ ಮಾವಿನ ಬೆಳೆಗೆ ನೆರವಾಗುವುದರಿಂದ ಮಾವಿನ ಹೊಯ್ಲು ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಕಾಫಿ ಬೆಳೆಗೆ ನೆರವಾಗುವುದರಿಂದ ಕಾಫಿಯ ಹೂಮಳೆ ಎಂದು ಕರೆಯಲಾಗುತ್ತದೆ. ಈ ಮಳೆಯನ್ನು ಬೇರೆ ಬೇರೆ ಸ್ಥಳೀಯ ಹೆಸರುಗಳಿಂದ ಕರೆಯಲಾಗುತ್ತದೆ. ಉದಾ : ಉತ್ತರಪ್ರದೇಶದಲ್ಲಿ ಅಂಧೀಸ್, ಪಶ್ಚಿಮಬಂಗಾಳದಲ್ಲಿ ಕಾಲಬೈಸಾಕಿ ಎಂದು ಕರೆಯಲಾಗುತ್ತದೆ.

**9. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸ ತಿಳಿಸಿ.**

**ಉತ್ತರ :**

- ನೈರುತ್ಯ ಮಾನ್ಸೂನ್ ಮಾರುತಗಳನ್ನು ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿ ಶಾಖೆಗಳೆಂದು ವಿಂಗಡಿಸಬಹುದು.
- ಅರಬ್ಬಿಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆಯನ್ನು ಸುರಿಸುತ್ತದೆ. ಪೂರ್ವ ಭಾಗಗಳಿಗೆ ಹೋದಂತೆ ಕಡಿಮೆಯಾಗುತ್ತದೆ.
- ಬಂಗಾಳಕೊಲ್ಲಿಯ ಶಾಖೆಯು ಮೇಘಾಲಯ ಮತ್ತು ಅಸ್ಸಾಂ ಬೆಟ್ಟಗಳಿಂದ ತಡೆಯಲ್ಪಟ್ಟು ಅಧಿಕ ಮಳೆ ಬೀಳುವುದು. ಪಶ್ಚಿಮದ ಕಡೆಗೆ ಹೋದಂತೆ ಮಳೆ ಕಡಿಮೆಯಾಗುವುದು.
- ಈ ಅವಧಿಯಲ್ಲಿ ದೇಶದಲ್ಲಿ ವಾರ್ಷಿಕ ಶೇ. 75% ಭಾಗದಷ್ಟು ಮಳೆಯಾಗುವುದು.

**7. ಈಶಾನ್ಯ ರಾಜ್ಯಗಳು ಅಧಿಕ ಮಳೆಯನ್ನು ಪಡೆಯುತ್ತವೆ ಏಕೆ?**

ಉತ್ತರ : ಬಂಗಾಳ ಕೊಲ್ಲಿ ಶಾಖೆಯು ಈಶಾನ್ಯ ರಾಜ್ಯಗಳಾದ ಮೇಘಾಲಯ ಮತ್ತು ಆಸ್ಸಾಂ ಬೆಟ್ಟಗಳಿಂದ ತಡೆಯಲ್ಪಡುವದರಿಂದ ಅಧಿಕ ಮಳೆಯನ್ನು ಪಡೆಯುತ್ತವೆ.

**8. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳು ಅಧಿಕ ಮಳೆ ಪಡೆಯಲು ಕಾರಣವೇನು?**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳ ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಡುವದರಿಂದ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳು ಅಧಿಕ ಮಳೆ ಪಡೆಯುತ್ತವೆ.

**7. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಪ್ರಾರಂಭಿಸುತ್ತವೆ. ಕಾರಣ ಕೊಡಿ.**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಭಾರತದ ಒಳನಾಡಿನ ಉಷ್ಣಾಂಶ ಕಡಿಮೆಯಾಗಿ ಒತ್ತಡ ಹೆಚ್ಚಾಗುತ್ತಾ ಹೋಗುವುದರಿಂದ ಮಾನ್ಸೂನ್ ಮಾರುತಗಳು ಹಿಂದಿರುಗಲು ಪ್ರಾರಂಭಿಸುತ್ತವೆ.

**8. ಪಶ್ಚಿಮ ಘಟ್ಟಗಳ ಪೂರ್ವಭಾಗವನ್ನು ಮಳೆ ನೆರಳಿನ ಪ್ರದೇಶವೆನ್ನಲು ಕಾರಣವೇನು?**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳ ಅರಬ್ಬಿ ಸಮುದ್ರ ಶಾಖೆ ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಆದರೆ ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಕಡಿಮೆ ಮಳೆ ಸುರಿಸುತ್ತವೆ. ಆದ್ದರಿಂದ ಪಶ್ಚಿಮ ಘಟ್ಟಗಳ ಪೂರ್ವಭಾಗವು ಮಳೆ ನೆರಳಿನ ಪ್ರದೇಶ ಎನಿಸಿಕೊಂಡಿದೆ.

**10. ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳನ್ನು ಹೆಸರಿಸಿ.**

**ಉತ್ತರ : ಭಾರತದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳು ನಾಲ್ಕು ಪ್ರತ್ಯೇಕ ವಲಯಗಳಲ್ಲಿ ಹಂಚಿಕೆಯಾಗಿದೆ. ಅವುಗಳೆಂದರೆ –**

- ಪಶ್ಚಿಮ ಘಟ್ಟಗಳ ಕಿರಿದಾದ ವಲಯ
- ಜಮ್ಮುವಿನಿಂದ ಆರಂಭಗೊಂಡು ಹಿಮಾಚಲ ಪ್ರದೇಶ, ಉತ್ತರ ಪ್ರದೇಶದ ಉತ್ತರ ಭಾಗ, ಬಿಹಾರ ಮತ್ತು ಪಶ್ಚಿಮ ಬಂಗಾಳ.
- ಈಶಾನ್ಯ ಭಾರತ.
- ಪಶ್ಚಿಮ ಮಾನ್ಸೂನ್ ತೀರ ಪ್ರದೇಶ.

## ಅಧ್ಯಾಯ – 4

## ಭಾರತದ ಮಣ್ಣುಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಭಾರತದ ಮಣ್ಣುಗಳನ್ನು ಪ್ರಮುಖವಾಗಿ ______ ವಿಧಗಳಾಗಿ ವಿಂಗಡಿಸಬಹುದು. – **06ವಿಧಗಳು.**
2. ನದಿಗಳು ಪರ್ವತ ಪ್ರದೇಶದಿಂದ ತಂದು ಸಂಚಯಿಸಿದ ಮಣ್ಣು – **ಮೆಕ್ಕಲು ಮಣ್ಣು.**
3. ಭಾರತದಲ್ಲಿ ಮೆಕ್ಕಲು ಮಣ್ಣಿನ ವಿಸ್ತಾರ – **15 ಲಕ್ಷ ಚ.ಕಿ.ಮೀ.**
4. ನದಿಬಯಲುಗಳಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು – **ಮೆಕ್ಕಲು ಮಣ್ಣು**
5. ಕಪ್ಪು ಮಣ್ಣಿಗಿರುವ ಇನ್ನೊಂದು ಹೆಸರು – **ರೀಗರ್ ಮಣ್ಣು ಅಥವಾ ಹತ್ತಿ ಕಪ್ಪುಮಣ್ಣು.**
6. ಕಪ್ಪು ಮಣ್ಣು ಈ ಬೆಳೆಗೆ ಅತ್ಯಂತ ಸೂಕ್ತವಾದುದು. – **ಹತ್ತಿ ಬೆಳೆ.**
7. ಕಪ್ಪು ಮಣ್ಣು ಉತ್ಪತ್ತಿಯಾದುದು ಈ ಶಿಲಾಕಣಗಳಿಂದ. – **ಬಸಾಲ್ಟ್ ಶಿಲಾಕಣಗಳು.**
8. ಜೇಡಿ ಮಿಶ್ರಣ ಹೆಚ್ಚು, ಒತ್ತೊತ್ತಾದ ಕಣಗಳಿಂದ ರಚನೆಯಾದ ಮಣ್ಣು – **ಕಪ್ಪು ಮಣ್ಣು**
9. ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದ ಮಣ್ಣು – **ಕಪ್ಪು ಮಣ್ಣು.**
10. ಕಪ್ಪು ಮಣ್ಣು ಒಣಬೇಸಾಯಕ್ಕೆ ಸೂಕ್ತವಾಗಿದೆ. ಏಕೆಂದರೆ – (ಎಪ್ರಿಲ್ 2019) **ಇದು ದೀರ್ಘಕಾಲ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ.**
11. ಭಾರತದಲ್ಲಿ ದಖನ್ ಪ್ರಸ್ಥಭೂಮಿಯ ಬಸಾಲ್ಟ್ ಶಿಲಾವಲಯದಲ್ಲಿ ವ್ಯಾಪಕವಾಗಿ ಕಂಡುಬರುವ ಮಣ್ಣು – **ಕಪ್ಪು ಮಣ್ಣು.**
12. ಭಾರತದಲ್ಲಿ ಕಪ್ಪು ಮಣ್ಣಿನ ವಿಸ್ತಾರ – **5.46 ಲಕ್ಷ ಚ.ಕಿ.ಮೀ.**
13. ಕೆಂಪು ಮಣ್ಣು ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ ಹೊಂದಿದೆ. ಇದಕ್ಕೆ ಕಾರಣ – **ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ ಇರುವುದರಿಂದ.**
14. ಭಾರತದಲ್ಲಿ ಕೆಂಪು ಮಣ್ಣಿನ ವಿಸ್ತಾರ – **5.2 ಲಕ್ಷ ಚ.ಕಿ.ಮೀ.**
15. ತೃಣಧಾನ್ಯಗಳಿಗೆ ಅತ್ಯಂತ ಸೂಕ್ತವಾದ ಮಣ್ಣು – **ಕೆಂಪು ಮಣ್ಣು.**
16. ಅತಿ ಹೆಚ್ಚು ಕೆಂಪು ಮಣ್ಣನ್ನು ಹೊಂದಿದ ರಾಜ್ಯ – **ತಮಿಳುನಾಡು.**
17. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಕಂಡು ಬರುವ ಮಣ್ಣು – **ಲ್ಯಾಟರೈಟ್ ಮಣ್ಣು.**
18. ಭಾರತದಲ್ಲಿ ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ ಮಣ್ಣು)ನ ವಿಸ್ತಾರ – **2.48 ಲಕ್ಷ ಚ.ಕಿ.ಮೀ.**
19. ಲ್ಯಾಟರೈಟ್ ಮಣ್ಣು (ಜಂಬಿಟ್ಟಿಗೆ ಮಣ್ಣು) ಕೃಷಿಗೆ ಹೆಚ್ಚು ಉಪಯುಕ್ತವಲ್ಲ ಏಕೆಂದರೆ– **ಜಲವಿಲೀನಿಕರಣಕ್ಕೊಳಪಡುವುದರಿಂದ.**
20. ಭಾರತದ ವಾಯುವ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು. – **ಮರುಭೂಮಿ ಮಣ್ಣು.**
21. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ನಿರ್ಮಾಣವಾಗುವ ಮಣ್ಣು – **ಮರುಭೂಮಿ ಮಣ್ಣು.**
22. ಭಾರತದಲ್ಲಿ ಮರುಭೂಮಿ ಮಣ್ಣಿನ ವಿಸ್ತಾರ – **1.42 ಲಕ್ಷ ಚ.ಕಿ.ಮೀ.**
23. ಜೈವಿಕ ವಸ್ತುಗಳು ಕೊಳೆಯುವದರಿಂದ ಈ ಮಣ್ಣು ನಿರ್ಮಾಣವಾಗುವುದು – **ಪರ್ವತ ಮಣ್ಣು.**
24. ಪರ್ವತ ಮಣ್ಣು ಈ ಬೆಳೆಗಳ ಸಾಗುವಳಿಗೆ ಅತಿ ಸೂಕ್ತವಾದುದು. – **ನೆಡುತೋಟದ ಬೆಳೆಗಳು.**
25. ಭಾರತದಲ್ಲಿ ಪರ್ವತ ಮಣ್ಣಿನ ವಿಸ್ತಾರ – **2.85 ಲಕ್ಷ ಚ.ಕಿ.ಮೀ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಮಣ್ಣು ಎಂದರೇನು?**

**ಉತ್ತರ :** ಖನಿಜ ಮತ್ತು ಜೈವಿಕಾಂಶಗಳ ಸಂಯೋಜನೆಯುಳ್ಳ ಭೂಮೇಲ್ಭಾಗದ ತೆಳು ಪದರನ್ನು ಮಣ್ಣು ಎಂದು ಕರೆಯಲಾಗುತ್ತದೆ.

**2. ಭಾರತದಲ್ಲಿ ವಿವಿಧ ಪ್ರಕಾರದ ಮಣ್ಣುಗಳು ಕಂಡು ಬರಲು ಕಾರಣವೇನು?**

**ಅಥವಾ**

**ಭಾರತದ ಮಣ್ಣಿನಲ್ಲಿ ವೈವಿಧ್ಯತೆ ಇದೆ ಏಕೆ?**

ಉತ್ತರ : ಮೂಲ ಶಿಲೆಗಳು, ಮೇಲ್ಮೈ ಲಕ್ಷಣ, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಗಳಿಂದ ಭಾರತದಲ್ಲಿ ವಿವಿಧ ಪ್ರಕಾರದ ಮಣ್ಣುಗಳು ಕಂಡು ಬರುತ್ತವೆ. ಹೀಗಾಗಿ ಭಾರತದ ಮಣ್ಣಿನಲ್ಲಿ ವೈವಿದ್ಯತೆ ಇದೆ.

**3. ಭಾರತದ ಪ್ರಮುಖ ಮಣ್ಣಿನ ಪ್ರಕಾರಗಳಾವುವು?**

ಉತ್ತರ : **ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ.ಅವುಗಳೆಂದರೆ –**

- ಮೆಕ್ಕಲುಮಣ್ಣು,
- ಕಪ್ಪುಮಣ್ಣು,
- ಕೆಂಪುಮಣ್ಣು
- ಜಂಬಿಟ್ಟಿಗೆ ಮಣ್ಣು,
- ಮರುಭೂಮಿ ಮಣ್ಣು,
- ಪರ್ವತ ಮಣ್ಣು.

**4. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ?**

ಉತ್ತರ : ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಮೆಕ್ಕಲು ಮಣ್ಣು ಉತ್ಪತ್ತಿಯಾಗುತ್ತದೆ.

**5. ಮೆಕ್ಕಲು ಮಣ್ಣು ಉತ್ತರ ಭಾರತದ ಮೈದಾನ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರಲು ಕಾರಣವೇನು?**

ಉತ್ತರ : ಹಿಮಾಲಯದಲ್ಲಿ ಹುಟ್ಟಿ ಹರಿಯುವ ನದಿಗಳು ವರ್ಷಾದ್ಯಂತ ತುಂಬಿ ಹರಿಯುವಾಗ ಮೆಕ್ಕಲು ಕಣಗಳನ್ನು ತಂದು ಸಂಚಯಿಸುವುದರಿಂದ ಉತ್ತರ ಭಾರತದ ಮೈದಾನ ಪ್ರದೇಶವು ಹೆಚ್ಚು ಮೆಕ್ಕಲು ಮಣ್ಣನ್ನು ಹೊಂದಿದೆ.

**6. ಮೆಕ್ಕಲು ಮಣ್ಣು ಅತ್ಯಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ ಏಕೆ?**

ಉತ್ತರ : ಮೆಕ್ಕಲು ಮಣ್ಣು ಅತ್ಯಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ ಅದು ದೇಶದ ಕೃಷಿ ಪ್ರಗತಿಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

**7. ಕಪ್ಪು ಮಣ್ಣು ದೀರ್ಘ ಕಾಲ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಏಕೆ?**

ಉತ್ತರ : ಕಪ್ಪು ಮಣ್ಣು ಜೇಡಿ ಮಿಶ್ರಿತವಾಗಿದ್ದು, ಒತ್ತೊತ್ತಾದ ಕಣಗಳಿಂದ ರಚನೆಯಾಗಿದ್ದರಿಂದ ದೀರ್ಘ ಕಾಲ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ.

**8. ಕೆಂಪು ಮಣ್ಣು ಹೇಗೆ ರಚನೆಯಾಗಿದೆ?**

ಉತ್ತರ : ಕೆಂಪು ಮಣ್ಣು ಗ್ರ್ಯಾನೈಟ್, ನೀಸ್ ಮತ್ತು ಇತರೆ ಸ್ಪಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ರಚನೆಯಾಗಿದೆ.

**9. ಲ್ಯಾಟರೈಟ್ ಮಣ್ಣು ಎಂತಹ ಭೌಗೋಳಿಕ ಪರಿಸರದಲ್ಲಿ ಕಂಡುಬರುತ್ತದೆ?**

ಉತ್ತರ : ಲ್ಯಾಟರೈಟ್ ಮಣ್ಣು ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯುಳ್ಳ ಉಷ್ಣವಲಯದ ಭಾಗಗಳಲ್ಲಿ ಕಂಡುಬರುತ್ತದೆ.

**10. ಪರ್ವತ ಮಣ್ಣು ನೆಡುತೋಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು. ಏಕೆ?**

ಉತ್ತರ : ಪರ್ವತ ಮಣ್ಣು ಕೊಳೆತ ಜೈವಿಕಾಂಶಗಳಿಂದ ಕೂಡಿದ್ದರಿಂದ ಈ ಮಣ್ಣಿನಲ್ಲಿ ಸಸ್ಯಾಂಶ ಅಧಿಕವಾಗಿದ್ದು ಫಲವತ್ತಾಗಿರುತ್ತದೆ. ಆದ್ದರಿಂದ ಪರ್ವತ ಮಣ್ಣು ನೆಡುತೋಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು.

**11. ಮರುಭೂಮಿ ಮಣ್ಣು ವಿವಿಧ ಬೆಳೆಗಳ ಬೆಳೆಗೆ ಸೂಕ್ತವಾದುದಲ್ಲ. ಏಕೆ?**

ಉತ್ತರ : ಮರುಭೂಮಿ ಮಣ್ಣು ಸುಲಭವಾಗಿ ಪುಡಿಯಾಗುವ ಗುಣವನ್ನೊಂದಿದ್ದು, ಇದರಲ್ಲಿ ಉಪ್ಪಿನಾಂಶ ಹೆಚ್ಚಿದೆ. ಇದರಲ್ಲಿ ಮರಳಿನ ಪ್ರಮಾಣ ಹೆಚ್ಚು. ತೇವಾಂಶ ಮತ್ತು ಸಸ್ಯಾಂಶಗಳು ಕಡಿಮೆ ಆದ್ದರಿಂದ ಈ ಮಣ್ಣು ವಿವಿಧ ಬೆಳೆಗಳ ಬೆಳೆಗೆ ಸೂಕ್ತವಾದುದಲ್ಲ.

**12. ಮಣ್ಣಿನ ಸವೆತ ಎಂದರೇನು?**

ಉತ್ತರ : ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿಹೋಗುವುದನ್ನು ಮಣ್ಣಿನ ಸವೆತ ಎನ್ನುವರು.

**13. ನೈಸರ್ಗಿಕ ಕತೃಗಳು ಮಣ್ಣಿನ ಫಲವತ್ತತೆಯನ್ನು ಹೇಗೆ ಕುಗ್ಗಿಸುತ್ತವೆ?**

ಉತ್ತರ : ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕತೃಗಳಿಂದ ಕೊಚ್ಚಿಹೋಗುವುದರಿಂದ ಸವೆತ ಉಂಟಾಗಿ ಮಣ್ಣಿನ ಫಲವತ್ತತೆಯನ್ನು ಕುಗ್ಗಿಸುತ್ತದೆ.

**14. ಮಣ್ಣಿನ ಸವೆತವು ಕೃಷಿ ಉತ್ಪಾದನಾ ಸಾಮರ್ಥ್ಯವನ್ನು ಕಡಿಮೆಗೊಳಿಸುತ್ತದೆ. ಹೇಗೆ?**

ಉತ್ತರ : ಮಣ್ಣಿನ ಸವೆತದಿಂದ ಮಣ್ಣಿನ ಸಾರವು ಕಡಿಮೆಯಾಗುವುದರಿಂದ ಕೃಷಿ ಉತ್ಪಾದನಾ ಸಾಮರ್ಥ್ಯವನ್ನು ಕಡಿಮೆಗೊಳಿಸುತ್ತದೆ.

**15. ಜಲಾಶಯಗಳಲ್ಲಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ ಏಕೆ?**

ಉತ್ತರ : ಮಣ್ಣಿನ ಸವೆತದಿಂದ ಜಲಾಶಯಗಳಲ್ಲಿ ಅಧಿಕ ಪ್ರಮಾಣದ ಹೂಳು ತುಂಬುವುದರಿಂದ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.

**16. ಮಣ್ಣಿನ ಸಂರಕ್ಷಣೆ ಎಂದರೇನು?**

ಉತ್ತರ : ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದನ್ನು ಮಣ್ಣಿನ ಸಂರಕ್ಷಣೆ ಎನ್ನುವರು.

**17. ಮಣ್ಣಿನ ಸವೆತಕ್ಕೆ ಕಾರಣಗಳಾವುವು?**

**ಉತ್ತರ : ಮಣ್ಣಿನ ಸವೆತಕ್ಕೆ ಕಾರಣಗಳು**

- ಅರಣ್ಯ ನಾಶ
- ಅತಿಯಾಗಿ ಮೇಯಿಸುವುದು
- ವರ್ಗಾವಣೆ ಬೇಸಾಯ ಪದ್ಧತಿ
- ಅವೈಜ್ಞಾನಿಕ ಬೇಸಾಯ ಪದ್ಧತಿ
- ಮೇಲ್ಪದರದ ಮಣ್ಣನ್ನು ಇಟ್ಟಿಗೆ,
- ಹೆಂಚು ಇತ್ಯಾದಿ ಉದ್ದೇಶಗಳಿಗೆ ಬಳಕೆ ಮಾಡುವುದು.

**18. ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು?**

**ಉತ್ತರ : ಮಣ್ಣಿನ ಸವೆತದ ಪರಿಣಾಮಗಳು**

- ಮಣ್ಣಿನ ಸಾರವು ಕಡಿಮೆಯಾಗಿ. ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು. ಇದರಿಂದ. ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ.
- ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುತ್ತದೆ.
- ಸಸ್ಯವರ್ಗವು ಒಣಗುತ್ತದೆ. ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ.
- ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ.

**19. ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸಿ.**

**ಉತ್ತರ : ಮಣ್ಣಿನ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು**

- ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ.
- ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
- ಸಮೋನ್ನತಿ ಬೇಸಾಯ
- ಚೆಕ್ ಡ್ಯಾಮಗಳ ನಿರ್ಮಾಣ.
- ಬದುಗಳ ನಿರ್ಮಾಣ
- ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ
- ನೀರಿನ ಸೂಕ್ತ ಬಳಕೆ ಮಾಡುವುದು.

# ಅಧ್ಯಾಯ – 5

## ಭಾರತದ ಅರಣ್ಯ ಸಂಪತ್ತು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

2. ವಾರ್ಷಿಕ 250 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆಯಾಗುವ ಭಾಗಗಳಲ್ಲಿ ಕಂಡು ಬರುವ ಅರಣ್ಯ – **ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು.**

3. ಉಷ್ಣವಲಯದ ಎಲೆ ಉದುರಿಸುವ ಕಾಡುಗಳಿಗಿರುವ ಇನ್ನೊಂದು ಹೆಸರು – **ಪರ್ಣಪಾತಿ ಅರಣ್ಯ.**

4. ಮಾನ್ಸೂನ್ ಕಾಡುಗಳು ಎಂದು ಈ ಅರಣ್ಯಗಳನ್ನು ಕರೆಯುವರು – **ಉಷ್ಣವಲಯದ ಎಲೆ ಉದುರಿಸುವ ಕಾಡುಗಳು**

5. ಖರ್ಜೂರದ ಮರಗಳು ಕಂಡುಬರುವುದು ಈ ಕಾಡುಗಳಲ್ಲಿ – **ಮರುಭೂಮಿ ಸಸ್ಯವರ್ಗ**

6. ಭಾರತದ ಅರಣ್ಯದ ಒಟ್ಟು ವಿಸ್ತೀರ್ಣ – **7.74 ಲಕ್ಷ ಚ.ಕಿ.ಮೀ.**

7. ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಈಗ ಇರುವ ಅರಣ್ಯಗಳ ಶೇ. ಪಾಲು – **ಶೇ. 23.6%**

8. 1952ರ ರಾಷ್ಟ್ರೀಯ ಅರಣ್ಯ ನೀತಿ ನಿರ್ಣಯದ ಪ್ರಕಾರ ಇರಬೇಕಾದ ಅರಣ್ಯ – **ಶೇ. 33.3%**

9. ಪ್ರಪಂಚದ ಸರಾಸರಿ ಅರಣ್ಯ – **ಶೇ. 29.5%**

10. ಭಾರತದಲ್ಲಿ ಅತಿ ಹೆಚ್ಚು ಅರಣ್ಯವನ್ನು ಹೊಂದಿದ ರಾಜ್ಯ – **(ಎಪ್ರಿಲ್ 2019) ಮಧ್ಯಪ್ರದೇಶ.**

11. ಭಾರತದಲ್ಲಿ ಅತಿ ಕಡಿಮೆ ಅರಣ್ಯವನ್ನು ಹೊಂದಿದ ರಾಜ್ಯ – **ಗೋವಾ**

12. ಭಾರತದಲ್ಲಿ ಸುಮಾರು ______ ವನ್ಯ ಜೀವಿಧಾಮಗಳಿವೆ. – 523 **ವನ್ಯ ಜೀವಿಧಾಮಗಳು**

13. ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು _____ ಗಳೆಂದು ಕರೆಯುವರು. **ವನ್ಯಜೀವಿಧಾಮಗಳು**

14. ಭಾರತದಲ್ಲಿ _ ರಾಷ್ಟ್ರೀಯ ಉದ್ಯಾನಗಳಿವೆ. – **99 ರಾಷ್ಟ್ರೀಯ ಉದ್ಯಾನಗಳು**

15. ಭಾರತದಲ್ಲಿ _____ ಜೀವಿ ಸಂರಕ್ಷಣಾ ವಲಗಳನ್ನು ಗುರುತಿಸಲಾಗಿದೆ. – **18 ಜೀವಿ ಸಂರಕ್ಷಣಾ ವಲಯಗಳು**

16. ವರ್ಷದ ಯಾವುದೇ ಕಾಲದಲ್ಲೂ ಈ ಅರಣ್ಯಗಳು ಎಲೆ ಉದುರಿಸುವುದಿಲ್ಲ. – **ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು.**

17. ಭಾರತದ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಕಂಡುಬರುವ ಅರಣ್ಯ

– ಮ್ಯಾಂಗ್ರೋವ್ ಅರಣ್ಯಗಳು (ಎಪ್ರಿಲ್ 2019)

18. ನಾಗಾರ್ಜುನ ಸಾಗರ ವನ್ಯಜೀವಿಧಾಮವು ಈ ರಾಜ್ಯದಲ್ಲಿದೆ. – **ತೆಲಂಗಾಣ ರಾಜ್ಯ**

19. ಶ್ರೀಗಂಧದ ಮರಗಳು ಹೆಚ್ಚಾಗಿ ಈ ಕಾಡುಗಳಲ್ಲಿ ಕಂಡುಬರುತ್ತವೆ. – **ಉಷ್ಣವಲಯದ ಎಲೆ ಉದುರಿಸುವ ಕಾಡುಗಳು**

20. ಬಾಗಿರುವ ಕೊಂಬೆಯಿಂದ ಬೆಳೆದಿರುವ ಬಿಳಿಲುಗಳು ಕಂಡುಬರುವುದು – **ಮ್ಯಾಂಗ್ರೋವ್ ಅರಣಗಳಲ್ಲಿ**

## ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಅರಣ್ಯಗಳೆಂದರೇನು?**

ಉತ್ತರ : ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ'(ಕಾಡು) ಎಂದು ಕರೆಯಲಾಗಿದೆ.

**2. ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳು ಯಾವುವು?**

**ಅಥವಾ**

**ಭಾರತದಲ್ಲಿ ವೈವಿಧ್ಯಮಯ ಸಸ್ಯವರ್ಗಗಳು ಕಂಡುಬರಲು ಕಾರಣಗಳೇನು?**

**ಅಥವಾ**

**ಭಾರತದಲ್ಲಿ ಅರಣ್ಯಗಳು ಸಮನಾಗಿ ಹಂಚಿಕೆಯಾಗದಿರಲು ಕಾರಣಗಳೇನು?**

ಉತ್ತರ : ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳೆಂದರೆ ವೈವಿಧ್ಯಮಯ ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳಿಂದಾಗಿ ವೈವಿಧ್ಯಮಯ ಸಸ್ಯವರ್ಗ ಕಂಡುಬರುತ್ತದೆ.

**3. ಉಷ್ಣವಲಯದ ಎಲೆ ಉದುರುವ ಕಾಡುಗಳನ್ನು ಮಾನ್ಸೂನ್ ಕಾಡುಗಳೆಂತಲೂ ಕರೆಯುತ್ತಾರೆ. ಏಕೆ?**

ಉತ್ತರ : ಉಷ್ಣವಲಯದ ಎಲೆ ಉದುರಿಸುವ ಕಾಡುಗಳಲ್ಲಿ ಮರಗಳು ವಸಂತಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು "ಮಾನ್ಸೂನ್ ಕಾಡುಗಳು" ಎಂತಲೂ ಕರೆಯಲಾಗಿದೆ.

**3. ಅರಣ್ಯ ಸಂರಕ್ಷಣೆ ಎಂದರೇನು?**

ಉತ್ತರ : ಅರಣ್ಯಗಳನ್ನು ಮಾನವ, ಪ್ರಾಣಿಗಳಿಂದ, ನೈಸರ್ಗಿಕ ವಿಪತ್ತುಗಳಿಂದ ಕಾಪಾಡಿ ಅರಣ್ಯ ಸಂಪತ್ತಿನ ಸಮಗ್ರ ನಿಯಂತ್ರಣ ಹಾಗೂ ಅರಣ್ಯ ನಿರ್ವಹಣೆ ಪ್ರಕ್ರಿಯೆಗಳಿಗೆ ಅರಣ್ಯ ಸಂರಕ್ಷಣೆ ಎನ್ನುವರು.

**4. ವನ್ಯ ಜೀವಿಧಾಮಗಳೆಂದರೇನು?**

ಉತ್ತರ : ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳನ್ನು ವನ್ಯಜೀವಿಧಾಮಗಳೆನ್ನುವರು.

**5. ಕರ್ನಾಟಕದ ಪ್ರಮುಖ ವನ್ಯಜೀವಿಧಾಮಗಳನ್ನು ಹೆಸರಿಸಿ.**

ಉತ್ತರ : ಕರ್ನಾಟಕದ ಪ್ರಮುಖ ವನ್ಯಜೀವಿಧಾಮಗಳೆಂದರೆ – ದಾಂಡೇಲಿ, ಭದ್ರ, ತಲಕಾವೇರಿ ಮತ್ತು ಬಿಳಿಗಿರಿರಂಗನಬೆಟ್ಟ.

**5. ರಾಷ್ಟ್ರೀಯ ಉದ್ಯಾನಗಳೆಂದರೇನು?**

ಉತ್ತರ : ಸಾರ್ವಜನಿಕ ವಿಹಾರ ಮತ್ತು ವೈಜ್ಞಾನಿಕ ಹಿತದೃಷ್ಟಿಯಿಂದ ನೈಸರ್ಗಿಕ ಸೌಂದರ್ಯ, ಸಸ್ಯ ಮತ್ತು ಪ್ರಾಣಿಸಂಕುಲಗಳ ಸಂರಕ್ಷಣೆಗಾಗಿ ವಿಶೇಷವಾದ ರಕ್ಷಣೆ ನೀಡುವ ವಿಶಾಲವಾದ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವೆನ್ನುವರು.

**6. ಜೀವಿ ಸಂರಕ್ಷಣಾ ವಲಯ ಎಂದರೇನು?**

ಉತ್ತರ : ಸಂರಕ್ಷಿಸಲ್ಪಟ್ಟ ಭೂಪ್ರದೇಶಗಳ ವಿಶೇಷವಾದ ಒಂದು ಭಾಗ ಅಥವಾ ಕರಾವಳಿಯ ಪರಿಸರವನ್ನು 'ಜೀವಿ ಸಂರಕ್ಷಣಾವಲಯ' ಎನ್ನುವರು.

**7. ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.**

ಉತ್ತರ : ಜೀವಿಗಳ ಸಂರಕ್ಷಣೆ, ಸಂಶೋಧನೆ, ಶಿಕ್ಷಣ ಮತ್ತು ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳಾಗಿವೆ.

## ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಅರಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.**

**ಉತ್ತರ : ಅರಣ್ಯಗಳ ಪ್ರಾಮುಖ್ಯತೆ :**

- ಅರಣ್ಯಗಳು ಪ್ರತ್ಯಕ್ಷವಾಗಿ ಮರದ ವಸ್ತುಗಳು, ಸೌದೆ, ಜಾನುವಾರುಗಳಿಗೆ ಮೇವು ಮತ್ತು ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳುನ್ನು ಒದಗಿಸುತ್ತವೆ.
- ನದಿಗಳ ಪ್ರವಾಹ & ಮಣ್ಣಿನ ಸವೆತವನ್ನು ತಡೆಗಟ್ಟಿ ಮಣ್ಣಿನ ಫಲವತ್ತತೆಯನ್ನು ಕಾಪಾಡುತ್ತವೆ.
- ಮರುಭೂಮಿಕರಣವನ್ನು ತಡೆಯುತ್ತವೆ.
- ವಾಯುಗುಣವನ್ನು ಸಮತೋಲನಗೊಳಿಸಲು ನೆರವಾಗುತ್ತವೆ.
- ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

**2. ಭಾರತದಲ್ಲಿ ಅರಣ್ಯಗಳನ್ನು ಎಷ್ಟು ವಿಧಗಳಾಗಿ ವಿಂಗಡಿಸಲಾಗಿದೆ? ಅವು ಯಾವುವು?**

**ಉತ್ತರ : ಭಾರತದಲ್ಲಿ ಅರಣ್ಯಗಳನ್ನು ಆರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ –**

1. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು
2. ಉಷ್ಣವಲಯದ ಎಲೆ ಉದುರಿಸುವ ಕಾಡುಗಳು
3. ಕುರುಚಲು ಸಸ್ಯ ಮತ್ತು ಹುಲ್ಲುಗಾವಲು
4. ಮರುಭೂಮಿ ಸಸ್ಯವರ್ಗ
5. ಪರ್ವತ ಕಾಡುಗಳು
6. ಮ್ಯಾಂಗ್ರೋವ್ ಕಾಡುಗಳು

**3. ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**

**ಉತ್ತರ : ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- 250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ.
- ಈ ಕಾಡುಗಳು ದಟ್ಟವಾಗಿದ್ದು, ವರ್ಷದಾದ್ಯಂತ ಸದಾ ಹಸಿರಾಗಿರುತ್ತವೆ.
- ತೇಗ, ಬೀಟೆ, ಎಬೋನಿ, ಮಹೋಗನಿ, ಗುರ್ಜಾನ್ ಮತ್ತು ಚಂಪ ಇಲ್ಲಿ ಬೆಳೆಯುವ ಪ್ರಮುಖ ಮರಗಳು
- ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ ಹಾಗೂ ಈಶಾನ್ಯ ರಾಜ್ಯಗಳಾದ ಅಸ್ಸಾಂ, ನಾಗಾಲ್ಯಾಂಡ, ಮೇಘಾಲಯ, ತ್ರಿಪುರ, ಮಣಿಪುರಗಳ ಬೆಟ್ಟಗಳು ಮತ್ತು ಅಂಡಮಾನ್ – ನಿಕೋಬಾರ್ ದ್ವೀಪಗಳಲ್ಲಿ ಕಂಡುಬರುತ್ತವೆ.

**4. ಉಷ್ಣವಲಯದ ಎಲೆ ಉದುರಿಸುವ ಕಾಡುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**

**ಉತ್ತರ : ಉಷ್ಣವಲಯದ ಎಲೆ ಉದುರಿಸುವ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- ಈ ಕಾಡುಗಳಿಗೆ "ಪರ್ಣಪಾತಿ ಅರಣ್ಯ" ಎಂತಲೂ ಕರೆಯುವರು.
- 100–200 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ.
- ಮರಗಳು ವಸಂತಋತು ಮತ್ತು ಬೇಸಿಗೆಯ ಆರಂಭದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು "ಮಾನ್ಸೂನ್ ಕಾಡುಗಳು" ಎಂತಲೂ ಕರೆಯಲಾಗಿದೆ.
- ಇಲ್ಲಿ ಬೆಳೆಯುವ ಮರಗಳೆಂದರೆ ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮೊದಲಾದವು.
- ಈ ಅರಣ್ಯಗಳು ಪಶ್ಚಿಮ ಘಟ್ಟಗಳು ಪೂರ್ವ ಇಳಿಜಾರು, ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಹಾಗೂ ಛೋಟಾನಾಗಪುರ ಪ್ರಸ್ಥಭೂಮಿ, ಹಿಮಾಲಯದ ಪಾದ ಭಾಗಗಳಲ್ಲಿ ಕಂಡುಬರುತ್ತವೆ.

**5. ಕುರುಚಲು ಸಸ್ಯ ಮತ್ತು ಹುಲ್ಲುಗಾವಲುಗಳ ಲಕ್ಷಣ ಮತ್ತು ಹಂಚಿಕೆ ತಿಳಿಸಿ.**

**ಉತ್ತರ : ಕುರುಚಲು ಸಸ್ಯ ಮತ್ತು ಹುಲ್ಲುಗಾವಲುಗಳ ಲಕ್ಷಣ ಮತ್ತು ಹಂಚಿಕೆ**

- 60–100 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತವೆ.
- ಕುರುಚಲು ಗಿಡಮರ ಮತ್ತು ಕುಬ್ಜ ಒರಟಾದ ಹುಲ್ಲು ಮುಳ್ಳಿನ ಮರ–ಗಿಡಗಳು ಅಲ್ಲಲ್ಲಿ ಚದುರಿದಂತೆ ಕಂಡುಬರುತ್ತವೆ.
- ಈ ಸಸ್ಯವರ್ಗವು ಕಛ್ ಮತ್ತು ಥಾರ್ ಮರುಭೂಮಿಯ ಅಂಚಿನ ಭಾಗಗಳಲ್ಲಿ ಕಂಡುಬರುತ್ತವೆ.
- ಹುಲ್ಲುಗಾವಲು ರಾಜಸ್ತಾನದ ಪೂರ್ವಭಾಗ, ಪಂಜಾಬ್, ಪಶ್ಚಿಮ ಘಟ್ಟಗಳ ಕೆಲಭಾಗ ಮತ್ತು ಕಾರ್ಡಮಮ್ ಬೆಟ್ಟಗಳಲ್ಲಿ ಕಂಡುಬರುತ್ತವೆ.

**6. ಮರುಭೂಮಿ ಸಸ್ಯವರ್ಗಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಮರುಭೂಮಿ ಸಸ್ಯವರ್ಗಗಳ ಲಕ್ಷಣ ಮತ್ತು ಹಂಚಿಕೆ**

- 10–50 ಸೆಂ.ಮೀ. ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡು ಬರುತ್ತದೆ.
- ಈ ಭಾಗಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮರಗಳು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ ಉದಾ : ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಇತ್ಯಾದಿ.
- ಮರುಭೂಮಿ ಸಸ್ಯವರ್ಗವು ಥಾರ್ ಮರುಭೂಮಿ ಮತ್ತು ದಖನ್ ಪ್ರಸ್ಥಭೂಮಿಯ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ.

**7. ಪರ್ವತ ಕಾಡುಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಪರ್ವತ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- ಈ ಕಾಡುಗಳು ಪರ್ವತಗಳ ಇಳಿಜಾರುಗಳಲ್ಲಿ ಕಂಡುಬರುತ್ತವೆ.
- ಇವು ಹಿಮಾಲಯ ಪರ್ವತಗಳು ಹಾಗೂ ಸ್ವಲ್ಪಮಟ್ಟಿಗೆ ನೀಲಗಿರಿ ಬೆಟ್ಟಗಳಲ್ಲಿ ಕಂಡುಬರುತ್ತವೆ.
- ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್ ಇತ್ಯಾದಿ.

**8. ಮ್ಯಾಂಗ್ರೋವ್ ಕಾಡುಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಮ್ಯಾಂಗ್ರೋವ್ ಕಾಡುಗಳ ಲಕ್ಷಣ ಮತ್ತು ಹಂಚಿಕೆ**

- ಮ್ಯಾಂಗ್ರೋವ್ ಕಾಡುಗಳು ಅಧಿಕ ಮಳೆ ಬೀಳುವ ಜವುಗು ಪ್ರದೇಶ, ನದಿಮುಖಜ ಭೂಮಿ ಮತ್ತು ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ.
- ಭಾರತದಲ್ಲಿ ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿ ಹೆಚ್ಚು ಕಂಡುಬರುತ್ತವೆ.
- ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಸುಂದರಿ, ಬೆತ್ತ, ಜರಿಗಿಡ, ತಾಳೆ, ಕಂದಾಳೆ, ಕೇದಿಗೆ ಮುಂತಾದವು.
- ನದಿಮುಖಜ ಭೂಮಿಗಳಲ್ಲಿ ಬಿಳಿಲು ಮರಗಳು ಬೇಳೆಯುತ್ತವೆ.

**9. ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಈ ಹೇಳಿಕೆಯನ್ನು ವಿಮರ್ಶಿಸಿ.**

ಉತ್ತರ : ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಏಕೆಂದರೆ –

- ಕೃಷಿ ಕ್ಷೇತ್ರದ ವಿಸ್ತರಣೆ,
- ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ.
- ನೀರಾವರಿ ಯೋಜನೆಗಳ ನಿರ್ಮಾಣ,
- ಕೈಗಾರಿಕೀಕರಣ & ನಗರೀಕರಣ

PSG

➢ ಅತಿಯಾಗಿ ಮೇಯಿಸುವಿಕೆ, ಕಾಡ್ಗಿಚ್ಚು ಮೊದಲಾದವು.

**10. ಅರಣ್ಯ ಸಂರಕ್ಷಣಾ ಕ್ರಮಗಳನ್ನು ತಿಳಿಸಿ.**

**ಉತ್ತರ : ಅರಣ್ಯ ಸಂರಕ್ಷಣಾ ಕ್ರಮಗಳು**

- ➢ ಅರಣ್ಯ ನಾಶ ನಿಯಂತ್ರಣ.
- ➢ ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟುವುದು.
- ➢ ಕಾಡ್ಗಿಚ್ಚು ನಿಯಂತ್ರಣ.
- ➢ ಅರಣ್ಯ ಅತಿಕ್ರಮಣದ ತಡೆ.
- ➢ ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.
- ➢ ಮರಗಳ ಕಳ್ಳಸಾಗಣೆ ತಡೆ.
- ➢ ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.
- ➢ ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವುದು.
- ➢ ಅರಣ್ಯ ಬೆಳೆಸಲು ಪ್ರೋತ್ಸಾಹ ನೀಡುವುದು.
- ➢ ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವನ್ನುಂಟುಮಾಡುವುದು.

**11. ಭಾರತದಲ್ಲಿರುವ ಪ್ರಮುಖ ವನ್ಯಜೀವಿಧಾಮಗಳು ಯಾವುವು?**

ಉತ್ತರ : ಭಾರತದಲ್ಲಿ ಸುಮಾರು 523 ವನ್ಯ ಜೀವಿಧಾಮಗಳಿವೆ. ಪ್ರಮುಖ ವನ್ಯಜೀವಿಧಾಮಗಳೆಂದರೆ –

- ➢ ಅಣ್ಣಾಮಲೈ ಮತ್ತು ಮದುಮಲೈ (ತಮಿಳುನಾಡು),
- ➢ ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ (ಕರ್ನಾಟಕ),
- ➢ ಪರಿಯಾರ್ (ಕೇರಳ),
- ➢ ನಾಗಾರ್ಜುನ ಸಾಗರ (ತೆಲಂಗಾಣ),
- ➢ ಭರತ್‌ಪುರ ಮತ್ತು ರಣಥಂಬೋರ (ರಾಜಸ್ತಾನ),
- ➢ ಮಾನಸ (ಅಸ್ಸಾಂ),
- ➢ ಜಲ್ದಪಾರ (ಪಶ್ಚಿಮ ಬಂಗಾಳ) ಮೊದಲಾದವು.

**12. ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳಾವುವು?**

ಉತ್ತರ : ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನಗಳೆಂದರೆ –

- ➢ ಕಾಜಿರಂಗ (ಅಸ್ಸಾಂ),
- ➢ ಸುಂದರಬನ (ಪಶ್ಚಿಮ ಬಂಗಾಳ),
- ➢ ಕಾರ್ಬೆಟ್ (ಉತ್ತರಾಂಚಲ),
- ➢ ಗಿರ್ (ಗುಜರಾತ್),
- ➢ ಕನ್ಹಾ (ಮಧ್ಯಪ್ರದೇಶ),
- ➢ ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ (ಕರ್ನಾಟಕ),
- ➢ ಸರಿಸ್ಕ (ರಾಜಸ್ತಾನ),
- ➢ ಧುದವ (ಉತ್ತರ ಪ್ರದೇಶ),
- ➢ ತೊಡೋಬ (ಮಹಾರಾಷ್ಟ್ರ) ಇತ್ಯಾದಿ.

**13. ಭಾರತದ ಪ್ರಮುಖ ಜೀವಿ ಸಂರಕ್ಷಣಾ ವಲಯಗಳು ಯಾವುವು?**

ಉತ್ತರ : ಭಾರತದಲ್ಲಿ 18 ಜೀವಿ ಸಂರಕ್ಷಣಾ ವಲಯಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ – ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬಾರ್, ಮನ್ನಾರ್‌ಖಾರಿ, ಸುಂದರಬನ, ಸಮಿಲಿಪಾಲ್, ಕಾಂಚನಜಂಗ, ಪಚಮ್ಹಾರಿ, ಅಗಸ್ತ್ಯಮಲೈ, ದಿಬ್ರು, ಸೈಖೋವ, ದಿಬಾಂಗ್ ಇತ್ಯಾದಿ.

## ಅಧ್ಯಾಯ – 6

## ಭಾರತದ ಜಲಸಂಪನ್ಮೂಲಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಸಿಂಧೂನದಿಯ ಉಗಮಸ್ಥಾನ – **ಕೈಲಾಸ ಪರ್ವತ**
2. ಸಿಂಧೂನದಿಯು ಅರಬ್ಬಿ ಸಮುದ್ರವನ್ನು ಸೇರುವ ಸ್ಥಳ – **ಕರಾಚಿ.**
3. ಸಿಂಧೂನದಿಯ ಉದ್ದ – **2897 ಕಿ.ಮೀ.**
4. ಸಿಂಧೂನದಿಯು ಭಾರತದಲ್ಲಿ ಹರಿಯುವ ಉದ್ದ – **709 ಕಿ.ಮೀ.**
5. ಭಾರತದ ಉದ್ದವಾದ ನದಿ – **ಗಂಗಾ ನದಿ.**
6. ಗಂಗಾ ನದಿಯ ಒಟ್ಟು ಉದ್ದ – **2525 ಕಿ.ಮೀ.**
7. ಗಂಗಾ ನದಿಯ ಉಗಮ ಸ್ಥಾನ – **ಗಂಗೋತ್ರಿ ಹಿಮನದಿ.**
8. ಗಂಗಾ ನದಿಯು ಬಾಂಗ್ಲಾ ದೇಶದಲ್ಲಿ ___ ನದಿಯನ್ನು ಸೇರುತ್ತದೆ. – **ಬ್ರಹ್ಮಪುತ್ರ ನದಿ**
9. ಬಾಂಗ್ಲಾದಲ್ಲಿ ಗಂಗಾ ನದಿಯನ್ನು ಈ ಹೆಸರಿನಿಂದ ಕರೆಯುತ್ತಾರೆ. – **ಪದ್ಮನದಿ**
10. ಗಂಗಾ ನದಿಗೆ ಉದ್ದವಾದ ಉಪನದಿ – **ಯಮುನಾ ನದಿ.**
11. ಬ್ರಹ್ಮಪುತ್ರ ನದಿಯ ಉಗಮ ಸ್ಥಾನ – **ಮಾನಸ ಸರೋವರ ಸಮೀಪದ ಚೆಮಯಂಗ್‌ಡಂಗ್**
12. ಬ್ರಹ್ಮಪುತ್ರ ನದಿಯು ಭಾರತವನ್ನು ಪ್ರವೇಶಿಸುವ ರಾಜ್ಯ – **ಅರುಣಾಚಲ ಪ್ರದೇಶ**
13. ಬ್ರಹ್ಮಪುತ್ರ ನದಿಯ ಉದ್ದ – **2589 ಕಿ.ಮೀ.**
14. ಮಹಾನದಿಯ ಉಗಮ ಸ್ಥಾನ – **ಸಿವಾಹ ಸರಣಿ.**
15. ಮಹಾನದಿಯ ಉದ್ದ – **851 ಕಿ.ಮೀ.**
16. ದಕ್ಷಿಣ ಭಾರತದಲ್ಲೇ ಉದ್ದವಾದ ನದಿ – **ಗೋದಾವರಿ.**
17. ಗೋದಾವರಿ ನದಿಯ ಉಗಮಸ್ಥಾನ – **ತ್ರಯಂಬಕ್**
18. ಗೋದಾವರಿ ನದಿಯ ಉದ್ದ – **1465 ಕಿ.ಮೀ.**
19. ಕೃಷ್ಣ ನದಿಯ ಉಗಮಸ್ಥಾನ – **ಮಹಬಳೇಶ್ವರ**
20. ಕೃಷ್ಣ ನದಿಯ ಉದ್ದ – **1400 ಕಿ.ಮೀ.**
21. ಕಾವೇರಿ ನದಿಯ ಉಗಮಸ್ಥಾನ – **ತಲಕಾವೇರಿ.**
22. ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿಗಳು – **ನರ್ಮದಾ & ತಾಪಿ**
23. ನರ್ಮದಾ ನದಿಯ ಉಗಮಸ್ಥಾನ – **ಅಮರಕಂಟಕ**
24. ತಾಪಿ ನದಿಯ ಉಗಮಸ್ಥಾನ – **ಮೂಲ್ತಾಯಿ**
25. ತಾಪಿನದಿಯ ಉದ್ದ – **724 ಕಿ.ಮೀ.**
26. ದೇಶದಲ್ಲಿ ಅತಿ ಹೆಚ್ಚು ನೀರಾವರಿ ಈ ನೀರಾವರಿ ಪದ್ಧತಿಯಿಂದ ಲಭ್ಯವಾಗುತ್ತದೆ. – **ಬಾವಿ ನೀರಾವರಿ.**
27. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಬಾವಿ ನೀರಾವರಿ ಕ್ಷೇತ್ರ – **ಶೇ. 60.7%**
28. ಅತಿ ಕಡಿಮೆ ವೆಚ್ಚದ ನೀರಾವರಿ ಪದ್ಧತಿ – **ಬಾವಿ ನೀರಾವರಿ.**
29. ದೇಶದಲ್ಲಿ ಅತಿ ಹೆಚ್ಚು ಬಾವಿ ನೀರಾವರಿ ಪದ್ಧತಿ ಜನಪ್ರೀಯವಾಗಲು ಕಾರಣ – **ಬಾವಿಯ ನಿರ್ಮಾಣ & ನಿರ್ವಹಣೆಯು ಸುಲಭವಾದ್ದರಿಂದ.**
30. ದೇಶದ ಒಟ್ಟು ನೀರಾವರಿ ಕ್ಷೇತ್ರದಲ್ಲಿ ಕಾಲುವೆ ನೀರಾವರಿ ಕ್ಷೇತ್ರ– **ಶೇ. 27%**
31. ದೇಶದ ನೀರಾವರಿ ಪ್ರದೇಶದಲ್ಲಿ ___ ಭಾಗ ಕೆರೆ ನೀರಾವರಿಗೊಳಪಟ್ಟಿದೆ. – **ಶೇ. 3%**
32. ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆ – **ದಾಮೋದರ ನದಿ ಕಣಿವೆ ಯೋಜನೆ.**
33. ದಾಮೋದರ ನದಿ ಕಣಿವೆ ಯೋಜನೆಯನ್ನು ಈ ಮಾದರಿಯನ್ನಾಧರಿಸಿ ರೂಪಿಸಲಾಗಿದೆ. – **ಅಮೇರಿಕ ಸಂಯುಕ್ತ ಸಂಸ್ಥಾನದ ಟೆನಿಸ್ಸಿ ಕಣಿವೆ ಯೋಜನೆ**
34. ಈ ನದಿಯನ್ನು ಬಂಗಾಳದ ದುಃಖಕಾರಿ ನದಿ ಎಂದು ಕರೆಯಲಾಗುತ್ತದೆ. – **ದಾಮೋದರ ನದಿ.**
35. ದಾಮೋದರ ನದಿ ಕಣಿವೆ ಯೋಜನೆ ಈ ಎರಡು ರಾಜ್ಯಗಳ ಸಂಯುಕ್ತ ಯೋಜನೆ– **ಬಿಹಾರ & ಪಶ್ಚಿಮಬಂಗಾಳ**
36. ದಾಮೋದರ ನದಿಕಣಿವೆ ಯೋಜನೆಯ ನಿರ್ಮಾಣದಿಂದಾಗಿರುವ ಪರಿಣಾಮ – **ದಾಮೋದರ ನದಿಯು ದುಃಖದ ನದಿಯಾಗಿ ಉಳಿದಿಲ್ಲ.** (ಎಪ್ರಿಲ್ 2019)
36. ಬಾಕ್ರಾ–ನಂಗಲ್ ಯೋಜನೆ ಈ ರಾಜ್ಯಗಳ ಸಂಯುಕ್ತ ಯೋಜನೆ – **ಪಂಜಾಬ್, ಹರಿಯಾಣ & ರಾಜಸ್ತಾನ**
37. ಬಾಕ್ರಾ–ನಂಗಲ್ ಯೋಜನೆಯನ್ನು ಈ ನದಿಗೆ ನಿರ್ಮಿಸಲಾಗಿದೆ – **ಸತ್ಲಜ ನದಿ (ಹಿಮಾಚಲ ಪ್ರದೇಶ)**
38. ಭಾರತದ ಅತ್ಯಂತ ಎತ್ತರವಾದ ವಿವಿದೊದ್ದೇಶ ಯೋಜನೆ – **ಬಾಕ್ರಾ ಯೋಜನೆ (226 ಮೀ ಎತ್ತರ)**
39. ಬಾಕ್ರಾ ಆಣೆಕಟ್ಟೆಯ ಜಲಾಶಯಕ್ಕಿರುವ ಹೆಸರು – **ಗೋವಿಂದ ಸಾಗರ.**
40. ಒಡಿಶಾದ ಅತ್ಯಂತ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಹಿರಾಕುಡ್ ಯೋಜನೆ.**
41. ಭಾರತದಲ್ಲೇ ಅತಿ ಉದ್ದವಾದ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಹಿರಾಕುಡ್ ಯೋಜನೆ. (4801 ಮೀ ಉದ್ದ)**
42. ತುಂಗಭದ್ರ ಯೋಜನೆಯು ಈ ಎರಡು ರಾಜ್ಯಗಳ ಸಂಯುಕ್ತ ಯೋಜನೆ – **ಕರ್ನಾಟಕ & ಆಂದ್ರಪ್ರದೇಶ**
43. ತುಂಗಭದ್ರ ನದಿಗೆ ಆಣೆಕಟ್ಟೆಯನ್ನು ನಿರ್ಮಿಸಿದ ಸ್ಥಳ – **ಹೊಸಪೇಟೆ ಬಳಿಯ ಮಲ್ಲಾಪುರಂ ಎಂಬಲ್ಲಿ**
44. ತುಂಗಭದ್ರ ಜಲಾಶಯಕ್ಕಿರುವ ಹೆಸರು – **ಪಂಪಸಾಗರ.**
45. ಉತ್ತರ ಕರ್ನಾಟಕದ ಅತಿ ದೊಡ್ಡ ವಿವಿಧೋದ್ದೇಶ ನದಿಕಣಿವೆ ಯೋಜನೆ – **ಕೃಷ್ಣ ಮೇಲ್ದಂಡೆ ಯೋಜನೆ.**
46. ಕೃಷ್ಣ ನದಿಗೆ ಕರ್ನಾಟಕದಲ್ಲಿ ______ & ______ ಎಂಬಲ್ಲಿ ಆಣೆಕಟ್ಟುಗಳನ್ನು ನಿರ್ಮಿಸಲಾಗಿದೆ. – **ಆಲಮಟ್ಟಿ & ನಾರಾಯಣಪುರ.**
47. ಭಾರತ ಮತ್ತು ನೇಪಾಳ ದೇಶಗಳ ಸಂಯುಕ್ತ ವಿವಿಧೋದ್ದೇಶ ಯೋಜನೆ – **ಕೋಸಿ ಯೋಜನೆ.**
48. ಕೋಸಿ ನದಿಗೆ ನೇಪಾಳದ _____ ನಗರದ ಬಳಿ ಆಣೆಕಟ್ಟನ್ನು ನಿರ್ಮಿಸಲಾಗಿದೆ. – **ಹನುಮಾನ್ ನಗರ**
49. ಉತ್ತರ ಪ್ರದೇಶದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆ – **ರಿಹಾಂದ್ ಯೋಜನೆ.**
50. ರಿಹಾಂದ್ ಯೋಜನೆಯ ಜಲಾಶಯಕ್ಕಿರುವ ಹೆಸರು – **ಗೋವಿಂದವಲ್ಲಭಪಂತ್ ಸಾಗರ.**
51. ನಾಗಾರ್ಜುನ ಸಾಗರ ಯೋಜನೆಯನ್ನು ತೆಲಂಗಾಣ ರಾಜ್ಯದ ನಾಗಾರ್ಜುನಕೊಂಡದ ಬಳಿ ___ ನದಿಗೆ ನಿರ್ಮಿಸಲಾಗಿದೆ. – **ಕೃಷ್ಣ ನದಿ.**

PSG

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ನದಿಗಳ ನೀರನ್ನು ಯಾವ ಯಾವ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತದೆ?**

ಉತ್ತರ : ನದಿಗಳ ನೀರನ್ನು ನೀರಾವರಿ, ಜಲವಿದ್ಯುತ್ ತಯಾರಿಕೆ, ಒಳನಾಡಿನ ಜಲಸಾರಿಗೆ, ಮೀನುಗಾರಿಕೆ, ಮನರಂಜನೆ ಮೊದಲಾದ ಉದ್ದೇಶಗಳಿಗೆ ಉಪಯೋಗಿಸಲಾಗುತ್ತದೆ.

**2. ಉತ್ತರ ಭಾರತದ ಪ್ರಮುಖ ನದಿಗಳಾವುವು?**

ಉತ್ತರ : ಸಿಂಧೂ, ಗಂಗ, ಬ್ರಹ್ಮಪುತ್ರ ನದಿಗಳು ಉತ್ತರ ಭಾರತದ ಪ್ರಮುಖ ನದಿಗಳಾಗಿವೆ. ಈ ನದಿಗಳನ್ನು ಹಿಮಾಲಯದ ನದಿಗಳು ಎಂತಲೂ ಕರೆಯುತ್ತಾರೆ.

**3. ದಕ್ಷಿಣ ಭಾರತದ ಪ್ರಮುಖ ನದಿಗಳನ್ನು ಹೆಸರಿಸಿ.**

ಉತ್ತರ : ದಕ್ಷಿಣ ಭಾರತದ ಪ್ರಮುಖ ನದಿಗಳೆಂದರೆ –

ಪೂರ್ವಕ್ಕೆ ಹರಿಯುವ ನದಿಗಳು – ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ,

ಪಶ್ಚಿಮಕ್ಕೆ ಹರಿಯುವ ನದಿಗಳು – ನರ್ಮದಾ, ತಾಪಿ, ಸಬರ್ಮತಿ, ಮಾಂಡೋವಿ, ಜುವಾರಿ, ಬೆಡ್ತಿ, ಶರಾವತಿ, ಕಾಳಿ, ನೇತ್ರಾವತಿ ಮತ್ತು ಪೆರಿಯಾರ್ ನದಿಗಳು.

**4. ಕೃಷ್ಣ ನದಿಯ ಉಪನದಿಗಳನ್ನು ಹೆಸರಿಸಿ.**

ಉತ್ತರ : ಕೃಷ್ಣ ನದಿಯ ಉಪನದಿಗಳು – ಭೀಮ, ತುಂಗಭದ್ರ, ಕೋಯ್ನಾ, ಘಟಪ್ರಭ, ಮಲಪ್ರಭ.

**5. ಕಾವೇರಿ ನದಿಯ ಉಪನದಿಗಳನ್ನು ಪಟ್ಟಿ ಮಾಡಿ.**

ಉತ್ತರ : ಕಾವೇರಿ ನದಿಯ ಉಪನದಿಗಳು – ಹೇಮಾವತಿ, ಶಿಂಶಾ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಮತ್ತು ಭವಾನಿ.

**6. ನೀರಾವರಿ ಎಂದರೇನು?**

ಉತ್ತರ : ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವುದನ್ನು 'ನೀರಾವರಿ' ಎನ್ನುವರು.

**7. ನೀರಾವರಿಯ ವಿಧಗಳನ್ನು ತಿಳಿಸಿ.**

ಉತ್ತರ : ಭಾರತದಲ್ಲಿ ಬಾವಿ, ಕಾಲುವೆ ಮತ್ತು ಕೆರೆ ನೀರಾವರಿ ವಿಧಾನಗಳು ರೂಢಿಯಲ್ಲಿವೆ.

**8.. ದಾಮೋದರ ನದಿಯನ್ನು 'ಬಂಗಾಳದ ದುಃಖಃಕಾರಿ ನದಿ' ಎಂದು ಕರೆಯುತ್ತಾರೆ. ಏಕೆ?**

ಉತ್ತರ : ದಾಮೋದರ ನದಿಯು ಪಶ್ಚಿಮ ಬಂಗಾಳದಲ್ಲಿ ಪ್ರವಾಹದಿಂದಾಗಿ ಅಪಾರ ಹಾನಿಯನ್ನುಂಟು ಮಾಡುತ್ತಿದ್ದು, ಇದನ್ನು ಬಂಗಾಳದ ದುಃಖಃಕಾರಿ ನದಿಯೆಂದೇ ಕರೆಯುತ್ತಿದ್ದರು.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ನೀರು ಅತ್ಯಮೂಲ್ಯ ಸಂಪನ್ಮೂಲ ಹೇಗೆ? ಅಥವಾ ನೀರಿನ ಪ್ರಾಮುಖ್ಯತೆಯನ್ನು ತಿಳಿಸಿ.**

ಉತ್ತರ : ನೀರು ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದು. ನೀರಿಲ್ಲದೆ ಸುಸ್ಥಿರ ಜೀವನ ಸಾಧ್ಯವಿಲ್ಲ. ಮಾನವನಿಗೆ ಕುಡಿಯಲು, ಅಡಿಗೆ, ಸ್ವಚ್ಛತೆ, ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ಕೈಗಾರಿಕೆ, ನೌಕಾಯಾನ, ಮೀನುಗಾರಿಕೆ ಮೊದಲಾದ ಉದ್ದೇಶಗಳಿಗೆ ನೀರು ಅವಶ್ಯಕ.

**2. ಸಿಂಧೂನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ :

- ಸಿಂಧೂ ನದಿಯು ಕೈಲಾಸ ಪರ್ವತದಲ್ಲಿ ಉಗಮವಾಗುತ್ತದೆ.
- ಪಶ್ಚಿಮಾಭಿಮುಖವಾಗಿ ಹರಿದು ಪಾಕಿಸ್ತಾನದ ಕರಾಚಿ ಬಳಿ ಅರಬ್ಬಿ ಸಮುದ್ರವನ್ನು ಸೇರುತ್ತದೆ.
- ಸಿಂಧೂನದಿ ಉದ್ದ 2897 ಕಿ.ಮೀ ಅದರಲ್ಲಿ 709 ಕಿ.ಮೀ. ಭಾರತದಲ್ಲಿದೆ.
- ಇದು ಅನೇಕ ಉಪನದಿಗಳನ್ನು ಒಳಗೊಂಡಿದೆ. ಅವುಗಳೆಂದರೆ – ಝೀಲಂ, ಚೀನಾಬ್, ಬಿಯಾಸ್, ರಾವಿ, ಮತ್ತು ಸಟ್ಲೇಜ್ ಮುಂತಾದವು.

**3. ಗಂಗಾನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ :

- ಗಂಗಾನದಿಯು ಭಾರತದ ಉದ್ದವಾದ ನದಿ.
- ಇದರ ಒಟ್ಟು ಉದ್ದ 2525 ಕಿ.ಮೀ. ಇದು ಗಂಗೋತ್ರಿ ಎಂಬಲ್ಲಿ ಹುಟ್ಟುತ್ತದೆ.
- ಇದು ಬಾಂಗ್ಲಾದಲ್ಲಿ ಬ್ರಹ್ಮಪುತ್ರ ನದಿಯನ್ನು ಸೇರಿ ಪದ್ಮ ಎಂಬ ಹೆಸರಿನಿಂದ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ.
- ಗಂಗಾನದಿ ಸೇರುವ ಪ್ರಮುಖ ಉಪನದಿಗಳೆಂದರೆ – ಯಮುನ, ಘಾಗ್ರ, ಗಂಡಕ್, ರಾಮಗಂಗ, ಶಾರದ, ಸೋನೆ ಮತ್ತು ಕೋಸಿ.

**4. ಬ್ರಹ್ಮಪುತ್ರನದಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

ಉತ್ತರ :

- ಬ್ರಹ್ಮಪುತ್ರ ನದಿಯು ಚೆಮಯಂಗ್‌ಡಂಗ್ ಎಂಬಲ್ಲಿ (ಟಿಬೆಟ್) ಉಗಮವಾಗುತ್ತದೆ.
- ಪೂರ್ವಾಭಿಮುಖವಾಗಿ ಹರಿದು ಅರುಣಾಚಲ ಪ್ರದೇಶದಲ್ಲಿ ಭಾರತವನ್ನು ಪ್ರವೇಶಿಸುತ್ತದೆ.
- ಇದು ಬಾಂಗ್ಲಾದಲ್ಲಿ ಗಂಗಾ ನದಿಯನೊಂದಿಗೆ ಸೇರುತ್ತದೆ.
- ಇದರ ಉದ್ದ 2589 ಕಿ.ಮೀ.ಗಳು

**5. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ? ಅಥವಾ ಭಾರತದ ವ್ಯವಸಾಯವು ಹೆಚ್ಚಾಗಿ ನೀರಾವರಿಯನ್ನು ಅವಲಂಬಿಸಿದೆ. ಏಕೆ?**

ಉತ್ತರ :

- ಭಾರತ ಕೃಷಿ ಪ್ರಧಾನ ದೇಶ.
- ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ.
- ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ.
- ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ : ಬತ್ತ, ಕಬ್ಬು ಇತ್ಯಾದಿ.
- ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ..
- ಆದ್ದರಿಂದ ಭರತದ ವ್ಯವಸಾಯವು ಹಚ್ಚಾಗಿ ನೀರಾವರಿಯನ್ನು ಅವಲಂಬಿಸಿದೆ.

**6. ಸಣ್ಣ ಹಿಡುವಳಿದಾರರಿಗೆ ಬಾವಿ ನೀರಾವರಿಯು ಅತ್ಯಂತ ಸೂಕ್ತವಾದುದು ಏಕೆ? ಭಾರತದಲ್ಲಿ ಬಾವಿ ನೀರಾವರಿಯು ಪ್ರಮುಖ ಸ್ಥಾನ ಪಡೆದಿದೆ ಎಂದು ಹೇಗೆ ಹೇಳುವಿರಿ.**

ಉತ್ತರ : ಭಾರತದಲ್ಲಿ ಸಣ್ಣ ಹಿಡುವಳಿದಾರರರಿಗೆ ಬಾವಿ ನೀರಾವರಿಯು ಸೂಕ್ತವಾದದು ಏಕೆಂದರೆ

- ಬಾವಿಗಳ ನಿರ್ಮಾಣಕ್ಕೆ ಅಧಿಕ ಬಂಡವಾಳ ಅಥವಾ ತಾಂತ್ರಿಕತೆಯ ಅವಶ್ಯಕತೆ ಇಲ್ಲ.
- ವರ್ಷದ ಎಲ್ಲಾ ಕಾಲದಲ್ಲಿಯೂ ಬಾವಿಗಳಿಂದ ನೀರಾವರಿ ಸೌಲಭ್ಯ ಸಾಧ್ಯ.
- ಆದ್ದರಿಂದ ಭಾರತದಲ್ಲಿ ಬಾವಿ ನೀರಾವರಿಯು ಪ್ರಮುಖ ಸ್ಥಾನ ಪಡೆದಿದೆ.

**7. ಕಾಲುವೆಯ ಎರಡು ವಿಧಗಳನ್ನು ವಿವರಿಸಿ. ಅಥವಾ ಪ್ರವಾಹ ಕಾಲುವೆಗೂ ಮತ್ತು ಸರ್ವಕಾಲಿಕ ಕಾಲುವೆಗೂ ಇರುವ ವ್ಯತ್ಯಾಸವೇನು?**

ಉತ್ತರ : ಕಾಲುವೆಗಳಲ್ಲಿ ಎರಡು ವಿಧಗಳಿವೆ.

1. **ಪ್ರವಾಹ ಕಾಲುವೆ** – ಯಾವುದೇ ಆಣೆಕಟ್ಟುಗಳನ್ನು ನಿರ್ಮಿಸದೇ ನೇರವಾಗಿ ನದಿಯಿಂದ ಕಾಲುವೆ ತೋಡಿ ಕೃಷಿಗೆ ನೀರು ಪೂರೈಸುವುದೇ ಪ್ರವಾಹ ಕಾಲುವೆಯಾಗಿದೆ.
2. **ಸಾರ್ವಕಾಲಿಕ ಕಾಲುವೆ** – ನದಿಗಳಿಗೆ ಆಣೆಕಟ್ಟುಗಳನ್ನು ನಿರ್ಮಿಸಿ, ಜಲಾಶಯಗಳಲ್ಲಿ ನೀರು ಸಂಗ್ರಹಿಸಿ ಅದನ್ನು ಕಾಲುವೆ ಮೂಲಕ ನೀರು ಪೂರೈಸುವುದೇ ಸಾರ್ವಕಾಲಿಕ ಕಾಲುವೆಯಾಗಿದೆ.

**8. ವಿವಿದೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳಾವವು?**

**ಉತ್ತರ : ವಿವಿದೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳು**

- ನೀರಾವರಿ ಸೌಲಭ್ಯವನ್ನು ಒದಗಿಸುವದು.
- ಜಲವಿದ್ಯುಚ್ಛಕ್ತಿ ಉತ್ಪಾದಿಸುವದು.
- ನದಿಗಳ ಪ್ರವಾಹಗಳನ್ನು ನಿಯಂತ್ರಿಸುವದು.
- ನೌಕಾಯಾನದ ಸೌಲಭ್ಯವನ್ನು ಒದಗಿಸುವದು.
- ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವದು.
- ಮಣ್ಣಿನ ಸವಕಳಿಯನ್ನು ನಿಯಂತ್ರಿಸುವದು.
- ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.
- ಅರಣ್ಯ ಸಂಪತ್ತನ್ನು ವೃದ್ಧಿಸುವದು.
- ಮನರಂಜನೆಯ ಸೌಲಭ್ಯ ಒದಗಿಸುವುದು.

**9. ಭಾರತದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳಾವುವು?**

**ಉತ್ತರ : ಭಾರತದ ಪ್ರಮುಖ ವಿವಿಧೋದ್ದೇಶ ನದಿಕಣಿವೆ ಯೋಜನೆಗಳು**

- ದಾಮೋದರ ನದಿಕಣಿವೆ ಯೋಜನೆ
- ಭಾಕ್ರಾ–ನಂಗಲ್ ನದಿಕಣಿವೆ ಯೋಜನೆ
- ಹಿರಾಕುಡ್ ಯೋಜನೆ
- ತುಂಗಭದ್ರ ಯೋಜನೆ
- ಕೃಷ್ಣ ಮೇಲ್ದಂಡೆ ಯೋಜನೆ
- ಕೋಸಿ ಯೋಜನೆ
- ರಿಹಾಂದ್ ಯೋಜನೆ
- ನಾಗಾರ್ಜುನ ಸಾಗರ ಯೋಜನೆ.

**10. ದಾಮೋದರ ನದಿ ಕಣಿವೆ ಯೋಜನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ದಾಮೋದರ ನದಿ ಕಣಿವೆ ಯೋಜನೆ**

- ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆಯಾಗಿದೆ.
- ಇದು ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಸಂಯುಕ್ತ ಯೋಜನೆಯಾಗಿದೆ.
- ಈ ಯೋಜನೆಯು ತಿಲ್ಯೆಯಾ, ಕೊನಾರ್, ಮೈಥಾನ್ ಮತ್ತು ಪಂಚತ್‌ಹಿಲ್ ಎಂಬಲ್ಲಿ 4 ಆಣೆಕಟ್ಟುಗಳನ್ನು ಒಳಗೊಂಡಿದೆ.
- ಬೊಕಾರೋ, ದುರ್ಗಾಪುರ ಮತ್ತು ಚಂದ್ರಾಪುರಗಳಲ್ಲಿ 3 ಥರ್ಮಲ್ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸಲಾಗಿದೆ.

**11. ಕೃಷ್ಣ ಮೇಲ್ದಂಡೆ ಯೋಜನೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

**ಉತ್ತರ : ಕೃಷ್ಣ ಮೇಲ್ದಂಡೆ ಯೋಜನೆ**

- ಕೃಷ್ಣ ನದಿಗೆ ನಿರ್ಮಿಸಲಾಗಿರುವ ಉತ್ತರ ಕರ್ನಾಟಕದ ಅತಿದೊಡ್ಡ ವಿವಿಧೋದ್ದೇಶ ಯೋಜನೆಯಾಗಿದೆ.
- ಈ ಯೋಜನೆಯು ಆಲಮಟ್ಟಿ ಮತ್ತು ನಾರಾಯಣಪುರ ಎಂಬಲ್ಲಿ ನಿರ್ಮಾಣ ಮಾಡಿರುವ ಎರಡು ಆಣೆಕಟ್ಟೆಗಳು ಮತ್ತು ಒಂದು ಜಲವಿದ್ಯುತ್ ತಯಾರಿಕಾ ಕೇಂದ್ರಗಳನ್ನು ಒಳಗೊಂಡಿದೆ.

➢ ನೀರಾವರಿ ಪೂರೈಕೆ, ಕುಡಿಯುವ ನೀರು ಸರಬರಾಜು ಮತ್ತು ಜಲವಿದ್ಯುಚ್ಛಕ್ತಿ ತಯಾರಿಕೆಗಳು ಈ ಯೋಜನೆಯ ಮುಖ್ಯ ಉದ್ದೇಶಗಳಾಗಿವೆ.

# ಅದ್ಯಾಯ – 7.
# ಭಾರತದ ಭೂ ಸಂಪನ್ಮೂಲಗಳು

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

2. ಭಾರತದ ಒಟ್ಟು ಭೂಪ್ರದೇಶದಲ್ಲಿ ನಿವ್ವಳ ಸಾಗುವಳಿ ಕ್ಷೇತ್ರದ ಪ್ರಮಾಣ – **ಶೇ. 42.2%**
3. ಭಾರತದ ಒಟ್ಟು ಭೂಪ್ರದೇಶದಲ್ಲಿ ಅರಣ್ಯ ಕ್ಷೇತ್ರದ ಪ್ರಮಾಣ – **ಶೇ. 22.8%**
4. ಭಾರತದ ಒಟ್ಟು ಭೂಪ್ರದೇಶದಲ್ಲಿ ಕೃಷಿಗಾಗಿ ದೊರೆಯದ ಭೂಮಿಯ ಪ್ರಮಾಣ – **ಶೇ. 14.1%**
5. ಭಾರತದ ಒಟ್ಟು ಭೂಪ್ರದೇಶದಲ್ಲಿ ಪಾಳು ಭೂಮಿಯ ಪ್ರಮಾಣ – **ಶೇ. 8.2%**
6. ಭಾರತದ ಒಟ್ಟು ಭೂಪ್ರದೇಶದಲ್ಲಿ ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳದ ಪ್ರಮಾಣ – **ಶೇ. 3.4%**
7. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.__ ಜನರು ಕೃಷಿಯನ್ನೇ ಆಧರಿಸಿದ್ದಾರೆ– **ಶೇ.65% ರಷ್ಟು ಜನರು.**
8. ಭಾರತದಲ್ಲಿ ಮಿಶ್ರಣ ಬೇಸಾಯ ರೂಢಿಗೆ ಬಂದದ್ದು– **ಕ್ರಿ ಶ 1951ರಲ್ಲಿ.**
9. ಭಾರತವು ___ ದೇಶದ ತರುವಾಯ ಪ್ರಪಂಚದ ಎರಡನೇ ಹೆಚ್ಚು ಭತ್ತ ಉತ್ಪಾದಿಸುವ ದೇಶವಾಗಿದೆ. – **ಚೀನಾ.**
10. ____ ರಾಜ್ಯವು ದೇಶದಲ್ಲೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯವಾಗಿದೆ. – **ಪಶ್ಚಿಮ ಬಂಗಾಳ.**
11. ದೇಶದ ಉತ್ತರ ಮತ್ತು ವಾಯುವ್ಯ ಪ್ರದೇಶಗಳ ಜನರ ಅತಿ ಮುಖ್ಯ ಆಹಾರಧಾನ್ಯ ಬೆಳೆ – **ಗೋದಿ.**
12. ಚಹ ಒಂದು ______ ಬೆಳೆಯಾಗಿದೆ – ನೆಡುತೋಪು.
13. ಭಾರತವು __ ದೇಶದ ತರುವಾಯ ಪ್ರಪಂಚದ ಎರಡನೇ ಹೆಚ್ಚು ಚಹ ಉತ್ಪಾದಿಸುವ ದೇಶವಾಗಿದೆ. – **ಚೀನಾ.**
14. ನೀರಾವರಿ ಬೇಸಾಯವು ಭಾರತದ ಪಶ್ಚಿಮ ಕರಾವಳಿ ಉದ್ದಕ್ಕೂ ಅತಿ ಕಡಿಮೆ ಕಂಡುಬರುತ್ತದೆ. ಕಾರಣ – **ಇದು ಸಾಕಷ್ಟು ಮಳೆ ಬೀಳುವ ಪ್ರದೇಶವಾಗಿದೆ.**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಭೂಬಳಕೆ ಎಂದರೇನು?**
ಉತ್ತರ : ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.

**2. ಭೂಬಳಕೆಯನ್ನು ನಿರ್ಧರಿಸುವ ಅಂಶಗಳಾವುವು? ಅಥವಾ**
**ಭೂಬಳಕೆಯು ಪ್ರದೇಶದಿಂದ ಪ್ರದೇಶಕ್ಕೆ ಏಕೆ ಭಿನ್ನವಾಗಿದೆ?**
ಉತ್ತರ : ಭೂಬಳಕೆಯನ್ನು ನಿರ್ಧರಿಸುವ ಅಂಶಗಳೆಂದರೆ – ಭೂ ಮೈಲ್ಮೈ ಲಕ್ಷಣ, ವಾಯುಗುಣ,
ಮಣ್ಣು, ಜನಸಾಂದ್ರತೆ, ಸಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಅಂಶಗಳು. ಈ ಅಂಶಗಳಿಂದಾಗಿ ಭೂಬಳಕೆಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ.

**3. ಭಾರತದ ಉತ್ತರ ಮೈದಾನವು ಹೆಚ್ಚು ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ ಏಕೆ?**
ಉತ್ತರ : ಭಾರತದ ಉತ್ತರ ಮೈದಾನವು ಸಮತಟ್ಟಾಗಿದ್ದು, ಫಲವತ್ತಾಗಿರುವುದರಿಂದ ಹೆಚ್ಚು ಕೃಷಿ ಯೋಗ್ಯ ಭೂಮಿಯನ್ನು ಹೊಂದಿದೆ.

**4. ಭಾರತದ ಈಶಾನ್ಯ ರಾಜ್ಯಗಳಲ್ಲಿ ನಿವ್ವಳ ಸಾಗುವಳಿ ಭೂಮಿಯು ಅತಿ ಕಡಿಮೆ ಕಂಡುಬರುತ್ತದೆ ಏಕೆ?**
ಉತ್ತರ : ಭಾರತದ ಈಶಾನ್ಯ ರಾಜ್ಯಗಳು ಹೆಚ್ಚಾಗಿ ಬೆಟ್ಟ ಶ್ರೇಣಿಗಳನ್ನೊಳಗೊಂಡಿರುವುದರಿಂದ ನಿವ್ವಳ ಸಾಗುವಳಿ ಭೂಮಿಯು ಕಡಿಮೆ ಕಂಡುಬರುತ್ತದೆ.

**5. ಬಳಕೆಯಾಗದ ಕೃಷಿ ಯೋಗ್ಯ ಭೂಮಿ ಹೇಗೆ ನಿರ್ಮಾಣವಾಗುತ್ತದೆ? ಅಥವಾ**
**ಬಳಕೆಯಾಗದ ಕೃಷಿ ಯೋಗ್ಯಭೂಮಿಯು ಕೃಷಿ ಚಟುವಟಿಕೆಗಳಿಗೆ ಸೂಕ್ತವಲ್ಲ ಏಕೆ?**
ಉತ್ತರ : ನಿಗದಿತ ಮಣ್ಣಿನ ಸಾರದ ಕೊರತೆಯಿಂದಾಗಿ ಬಳಕೆಯಾಗದ ಕೃಷಿ ಯೋಗ್ಯ ಭೂಮಿ ನಿರ್ಮಾಣವಾಗುತ್ತದೆ. ಆದ್ದರಿಂದ ಇದು ಕೃಷಿ ಚಟುವಟಿಕೆಗಳಿಗೆ ಸೂಕ್ತವಲ್ಲ.

**6. ಕೃಷಿ ಅಥವಾ ವ್ಯವಸಾಯ ಎಂದರೇನು?**
ಉತ್ತರ : ಮನುಷ್ಯ ತನಗೆ ಅಗತ್ಯವಾದ ಆಹಾರ ಮತ್ತು ಕಚ್ಚಾ ಪದಾರ್ಥಗಳನ್ನು ಬೆಳೆಗಳನ್ನು ಬೆಳೆಯಲು ಭೂಮಿಯನ್ನು ಉಳುಮೆ ಮಾಡುವುದನ್ನು "ವ್ಯವಸಾಯ ಅಥವಾ ಕೃಷಿ" ಎನ್ನುವರು.

**7. ಜೀವನಾಧಾರ ಬೇಸಾಯ ಎಂದರೇನು? ಇದರ ಎರಡು ವಿಧಗಳು ಯಾವುವು?**
ಉತ್ತರ : ರೈತ ಮತ್ತು ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ ಜೀವನಾಧಾರ ಬೇಸಾಯ ಎನ್ನುವರು. ಜೀವನಾಧಾರ ಬೇಸಾಯದಲ್ಲಿ 2 ವಿಧಗಳಿವೆ. ಅವುಗಳೆಂದರೆ
1. ವರ್ಗಾವಣೆ ಬೇಸಾಯ 2. ಸ್ಥಿರ ಬೇಸಾಯ

**8. ವರ್ಗಾವಣೆ ಬೇಸಾಯ ಎಂದರೇನು? ಅಥವಾ**
**'ವರ್ಗಾವಣೆ ಬೇಸಾಯ ಪರಿಸರ ನಾಶಕ್ಕೆ ಕಾರಣ' ಸಮರ್ಥಿಸಿರಿ.**
ಉತ್ತರ : ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ, ಸುಟ್ಟು ವಿಸ್ತರಿಸಿ ಕೆಲವು ವರ್ಷಗಳ ಕಾಲ ಬೇಸಾಯ ಮಾಡಲಾಗುತ್ತದೆ. ಅಲ್ಲಿನ ಮಣ್ಣಿನ ಸಾರವು ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಕ್ರಮ ಮುಂದುವರೆಸುವುದನ್ನು 'ವರ್ಗಾವಣೆ ಬೇಸಾಯ' ಎನ್ನುವರು.

**9. ಸ್ಥಿರ ಬೇಸಾಯ ಎಂದರೇನು?**
ಉತ್ತರ : ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳ ಬದಲಾವಣೆ ಮಾಡದೆ ಶಾಶ್ವತವಾಗಿ ಒಂದೇ ಕಡೆ ನೆಲೆಸಿ ಸಾಗುವಳಿ ಮಾಡುವುದನ್ನು 'ಸ್ಥಿರ ಅಥವಾ ಸ್ಥಾಯಿ ಬೇಸಾಯ ಎನ್ನುವರು.

**10. ಸಾಂದ್ರ ಬೇಸಾಯ ಎಂದರೇನು?**
ಉತ್ತರ : ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸಿ ವರ್ಷದಲ್ಲಿ ಎರಡು ಅಥವಾ ಮೂರು ಬೆಳೆಗಳನ್ನು ಸಾಗುವಳಿ ಮಾಡುವ ಬೇಸಾಯ ಪದ್ಧತಿಗೆ 'ಸಾಂದ್ರ ಬೇಸಾಯ' ಎನ್ನುವರು.

**11. ವಾಣಿಜ್ಯ ಬೇಸಾಯ ಎಂದರೇನು?**
ಉತ್ತರ : ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿ ವಿಧಾನಕ್ಕೆ 'ವಾಣಿಜ್ಯ ಬೇಸಾಯ' ಎನ್ನುವರು.

**12. ಮಿಶ್ರಣ ಬೇಸಾಯ ಎಂದರೇನು? ಅಥವಾ**
**ಮಿಶ್ರಣ ಬೇಸಾಯವು ರೈತನಿಗೆ ಹೇಗೆ ಆದಾಯ ತಂದು ಕೊಡುತ್ತದೆ?**
ಉತ್ತರ : ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿ ಪದ್ಧತಿಗೆ ಮಿಶ್ರಣ ಬೇಸಾಯ ಎನ್ನುವರು. ಬೆಳೆ ಮತ್ತು ಪಶುಗಳೆರಡರಿಂದಲೂ ರೈತನಿಗೆ ಆದಾಯ ಬರುತ್ತದೆ.

**13. ನೆಡುತೋಪು ಬೇಸಾಯ ಎಂದರೇನು?**
ಉತ್ತರ : ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ ನೆಡುತೋಪು ಬೇಸಾಯ ಎನ್ನುವರು. ಉದಾ : ಚಹ, ಕಾಫಿ.

**14. ಒಣ ಬೇಸಾಯ ಎಂದರೇನು?**
ಉತ್ತರ : ಅತಿ ಕಡಿಮೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿಯನ್ನು ಒಣ ಬೇಸಾಯ ಎನ್ನುವರು.

**15. ಆರ್ದ್ರ ಬೇಸಾಯ ಎಂದರೇನು? ಅಥವಾ**
**ಆರ್ದ್ರ ಬೇಸಾಯವು ಭಾರತದ ಪಶ್ಚಿಮ ಕರಾವಳಿ ಉದ್ದಕ್ಕೂ ಕಂಡುಬರುತ್ತದೆ. ಕಾರಣವೇನು?**
**ಅಥವಾ ಆರ್ದ್ರ ಬೇಸಾಯಕ್ಕೆ ನೀರಾವರಿಯ ಅಗತ್ಯವಿಲ್ಲ ಏಕೆ?**
ಉತ್ತರ : ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಗಳನ್ನು ಬೆಳೆಯುವುದನ್ನು 'ಆರ್ದ್ರ ಬೇಸಾಯ' ಎನ್ನುವರು. ಆದ್ದರಿಂದ ಆರ್ದ್ರ ಬೇಸಾಯವು ಭಾರತದ ಪಶ್ಚಿಮ ಕರಾವಳಿ ಉದ್ದಕ್ಕೂ ಕಂಡುಬರುತ್ತದೆ

**16. ನೀರಾವರಿ ಬೇಸಾಯ ಎಂದರೇನು?**
ಉತ್ತರ : ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನವನ್ನು 'ನೀರಾವರಿ ಬೇಸಾಯ' ಎನ್ನುವರು.

**17. ಬೆಳೆ ಋತು ಎಂದರೇನು? ಬೆಳೆ ಋತುಗಳ ವಿಧಗಳನ್ನು ತಿಳಿಸಿ.**
ಉತ್ತರ : ಕೃಷಿ ಪ್ರದೇಶವೊಂದರಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ನಿರ್ದಿಷ್ಟ ಅವಧಿಗೆ 'ಬೆಳೆ ಋತು' ಎನ್ನುವರು. ಭಾರತದಲ್ಲಿ ಮುಖ್ಯವಾಗಿ ಮೂರು ಬೆಳೆ ಋತುಗಳಿವೆ. ಅವುಗಳೆಂದರೆ –
1. ಮುಂಗಾರು ಋತು, 2. ಹಿಂಗಾರು ಋತು, 3. ಜ್ಯಾಡ್ ಬೆಳೆ ಋತು.

**18. ಮುಂಗಾರು ಬೆಳೆ ಋತು ಎಂದರೇನು?**
ಉತ್ತರ : ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು. ಈ ಋತುವಿನಲ್ಲಿ ನೈಋತ್ಯ ಮಾನ್ಸೂನ್ ಮಳೆಗಾಲದ ಆರಂಭದೊಡನೆ ಅಂದರೆ ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡಲಾಗುವುದು. ಸೆಪ್ಟೆಂಬರ್–ಅಕ್ಟೋಬರ್‌ಗಳಲ್ಲಿ ಬೆಳೆ ಕಟಾವು ಮಾಡಲಾಗುವುದು.

**19. ಹಿಂಗಾರು ಬೆಳೆ ಋತು ಎಂದರೇನು?**
ಉತ್ತರ : ಹಿಂಗಾರು ಮಳೆಗಾಲವೆಂದು ಕರೆಯುವ ಈಶಾನ್ಯ ಮಾನ್ಸೂನ್ ಆರಂಭದಲ್ಲಿ ಅಂದರೆ ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಲಾಗುವುದು. ಫೆಬ್ರುವರಿ–ಮಾರ್ಚ ತಿಂಗಳಲ್ಲಿ ಬೆಳೆ ಕಟಾವು ಮಾಡುವುದನ್ನು 'ಹಿಂಗಾರು ಬೆಳೆ ಋತು' ಎನ್ನುವರು.

**20. ಜ್ಯಾಡ್ ಬೆಳೆ ಋತು ಎಂದರೇನು?**
ಉತ್ತರ : ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆ ಬೆಳೆಯುವದನ್ನು ಜ್ಯಾಡ್ ಬೆಳೆ ಋತು ಎನ್ನುವರು.

**21. ಬೆಳೆಯಿಡುವ ಮಾದರಿ ಎಂದರೇನು?**
ಉತ್ತರ : ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಳೆಯಿಡುವ ಮಾದರಿ' ಎನ್ನುವರು.

**22. ಭಾರತದಲ್ಲಿ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಇದಕ್ಕೆ ಕಾರಣಗಳೇನು?**
ಉತ್ತರ : ಭಾರತದಲ್ಲಿ ಯಾವುದೇ ಪ್ರದೇಶದ ಬೆಳೆಯಿಡುವ ಮಾದರಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಅದಕ್ಕೆ ಪ್ರಮುಖ ಕಾರಣಗಳೆಂದರೆ – ಮೇಲ್ಮೈ ಲಕ್ಷಣ, ಮಣ್ಣು, ವಾಯುಗುಣ, ಭೂಹಿಡುವಳಿಯ ಗಾತ್ರ, ನೀರಿನ ಪೂರೈಕೆ, ರೈತರ ಆರ್ಥಿಕ ಪರಿಸ್ಥಿತಿ, ತಂತ್ರಜ್ಞಾನ ಇತ್ಯಾದಿ.

**23. ಭತ್ತದ ಸಾಗುವಳಿಗೆ ಭೂಮಿ ಸಮತಟ್ಟಾಗಿರಬೇಕು ಏಕೆ?**

PSG

ಉತ್ತರ : ಭತ್ತದ ಬೆಳೆಗೆ ಕೋಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ.

**24. ಭಾರತದಲ್ಲಿ ಗೋದಿಯನ್ನು ಹೆಚ್ಚಾಗಿ ಉತ್ತರ ಮೈದಾನಗಳಲ್ಲಿಯೇ ಬೆಳೆಯಲಾಗುತ್ತದೆ ಏಕೆ?**

ಉತ್ತರ : ಉತ್ತರ ಭಾರತವು ಸಮಶಿತೋಷ್ಣ ವಲಯದಲ್ಲಿರುವುದರಿಂದ ಗೋದಿಯನ್ನು ಉತ್ತರ ಮೈದಾನಗಳಲ್ಲಿಯೇ ಬೆಳೆಯಲಾಗುತ್ತದೆ.

**25. ನಾರು ಬೆಳೆಗಳು ಎಂದರೇನು?**

ಉತ್ತರ : ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥಗಳನ್ನು ಪೂರೈಸುವ ಬೆಳೆಗಳಿಗೆ ನಾರು ಬೆಳೆಗಳು ಎನ್ನುವರು. ಉದಾ : ಹತ್ತಿ, ಸೆಣಬು.

**26. ಪಾನೀಯ ಬೆಳೆಗಳೆಂದರೇನು? ಉದಾಹರಣೆ ಕೊಡಿ.**

ಉತ್ತರ : ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು. ಉದಾ : ಚಹ & ಕಾಫಿ.

**27. ತೋಟಗಾರಿಕೆ ಬೇಸಾಯ ಎಂದರೇನು?**

ಉತ್ತರ : ಹಣ್ಣು, ತರಕಾರಿ, ಹೂವು, ಔಷದೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು "ತೋಟಗಾರಿಕೆ ಬೇಸಾಯ" ಎನ್ನುವರು.

**28. ತೋಟಗಾರಿಕೆ ಬೇಸಾಯವು ಭಾರತದ ಕೃಷಿಯನ್ನು ಹೆಚ್ಚು ಲಾಭಯುಕ್ತಗೊಳಿಸಲು ಹೇಗೆ ಉತ್ತೇಜನ ನೀಡುತ್ತದೆ?**

ಉತ್ತರ : ಸಮರ್ಪಕ ಭೂಬಳಕೆ, ನೈಸರ್ಗಿಕ ಸಂಪನ್ಮೂಲಗಳ ಆದರ್ಶವಾದ ಬಳಕೆ ಮತ್ತು ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ ಮಾಡುವುದರೊಂದಿಗೆ ತೋಟಗಾರಿಕೆ ಬೇಸಾಯವು ಭಾರತದ ಕೃಷಿಯನ್ನು ಹೆಚ್ಚು ಲಾಭಯುಕ್ತಗೊಳಿಸಲು ಉತ್ತೇಜನ ನೀಡುತ್ತದೆ.

**29. ಪುಷ್ಪ ಕೃಷಿ ಎಂದರೇನು?**

ಉತ್ತರ : ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ 'ಪುಷ್ಪ ಕೃಷಿ ಎನ್ನುವರು.

**30. ಭಾರತವು ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯ ಹೊಂದಿದೆ ಹೇಗೆ?**

ಉತ್ತರ : ಭಾರತವು ತನ್ನ ವೈವಿಧ್ಯ ವಾಯುಗುಣ ಮತ್ತು ಮಣ್ಣಿನ ಪ್ರಕಾರಗಳಿಂದಾಗಿ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತಮ ಸಾಮರ್ಥ್ಯ ಹೊಂದಿದೆ

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಭಾರತದ ಭೂಬಳಕೆಯನ್ನು ಎಷ್ಟು ವರ್ಗಗಳಾಗಿ ವಿಂಗಡಿಸಲಾಗಿದೆ? ಅವು ಯಾವುವು?**

**ಉತ್ತರ : ಭಾರತದ ಭೂಬಳಕೆಯನ್ನು 7 ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ–**

- ನಿವ್ವಳ ಸಾಗುವಳಿ ಪ್ರದೇಶ
- ಅರಣ್ಯ ಪ್ರದೇಶ,
- ಕೃಷಿಗಾಗಿ ದೊರೆಯದ ಭೂಮಿ
- ಪಾಳುಭೂಮಿ
- ಬಳಕೆಯಾಗದ ಕೃಷಿ ಯೋಗ್ಯಭೂಮಿ
- ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ
- ಇತರೆ

**2. ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ**
**ಕೃಷಿಯು ದ್ವಿತೀಯ ಮತ್ತು ತೃತೀಯ ವಲಯಗಳ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ.?**

**ಉತ್ತರ : ಕೃಷಿಯ ಪ್ರಾಮುಖ್ಯತೆ** **(ಎಪ್ರಿಲ್ 2019)**

- ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. 65% ಭಾಗ ಜನ ಕೃಷಿ ಆವಲಂಬಿಸಿದ್ದಾರೆ.
- ಜನರು ಮತ್ತು ಜಾನುವಾರುಗಳಿಗೆ ಆಹಾರವನ್ನು ಪೂರೈಸುವ ವೃತ್ತಿಯಾಗಿದೆ.
- ರಾಷ್ಟ್ರೀಯ ಆದಾಯದ ಮೂಲ ಆಕರವಾಗಿದೆ.
- ದೇಶದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.
- ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ಉದಾ : ಹತ್ತಿ, ಸೆಣಬು, ಸಕ್ಕರೆ, ಕಾಗದ ಕೈಗಾರಿಕೆ.
- ಕೈಗಾರಿಕಾ ವಸ್ತುಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತದೆ. ಉದಾ : ರಸಗೊಬ್ಬರ, ಕ್ರಿಮಿನಾಶಕ, ಯಂತ್ರೋಪಕರಣಗಳು.

**3. ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

**ಉತ್ತರ : ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

- ಭತ್ತವು ಬೆಳೆಗೆ 18° ರಿಂದ 25° ಸೆಂ. ಉಷ್ಣಾಂಶ ಅವಶ್ಯಕ.
- 100 ರಿಂದ 200 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಫಲವತ್ತಾದ ಜೇಡಿ ಮಿಶ್ರಿತ ಮರುಳು ಮಣ್ಣು ಮತ್ತು ಮೆಕ್ಕಲು ಮಣ್ಣು ಸೂಕ್ತ.
- ಬೆಳೆಯು ಕೋಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ.
- ಕಡಿಮೆ ಮಳೆ ಬೀಳುವ ಕಡೆ ನೀರಾವರಿ ಅತ್ಯಾವಶ್ಯಕ.
- ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ.
- ಭತ್ತ ಉತ್ಪಾದಿಸುವ ಪ್ರಮುಖ ರಾಜ್ಯಗಳೆಂದರೆ – ಆಂದ್ರಪ್ರದೇಶ, ಉತ್ತರಪ್ರದೇಶ, ಪಂಜಾಬ್, ತಮಿಳುನಾಡು, ಒಡಿಶಾ ಮತ್ತು ಕರ್ನಾಟಕ.

**4. ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

**ಉತ್ತರ : ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

- ಗೋದಿಯು ಪ್ರಮುಖ ಹಿಂಗಾರು ಬೆಳೆಯಾಗಿದೆ.
- ಗೋದಿ ಸಮಶಿತೋಷ್ಣ ಬೆಳೆಯಾಗಿದೆ.
- 10°ಯಿಂದ 15° ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 50 ರಿಂದ 70 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಮರಳು ಮಿಶ್ರಿತ ಮತ್ತು ಕಪ್ಪು ಮಣ್ಣು ಈ ಬೆಳೆಗೆ ಸೂಕ್ತವಾದುದು.
- ಉತ್ತರ ಪ್ರದೇಶವು ಗೋದಿಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.
- ಪಂಜಾಬ, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಗುಜರಾತ್, ಮಹಾರಾಷ್ಟ್ರ ಹಾಗೂ ಕರ್ನಾಟಕದ ಉತ್ತರ ಭಾಗಗಳು ಗೋದಿ ಉತ್ಪಾದಿಸುವ ಪ್ರದೇಶಗಳಾಗಿವೆ.

**5. ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು**

- ಇದು ವಾರ್ಷಿಕ ಬೆಳೆಯಾಗಿದ್ದು, ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ.
- ಈ ಬೆಳೆಗೆ ಹೆಚ್ಚು ಉಷ್ಣಾಂಶ & ತೇವಾಂಶ ಹೊಂದಿರುವ ವಾಯುಗುಣ ಅವಶ್ಯಕ.
- ಕಬ್ಬಿನ ಬೆಳೆಗೆ 21° ರಿಂದ 26° ಸೆಲ್ಸಿಯಸ್ ಉಷ್ಣಾಂಶ.
- 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
- ಮೆಕ್ಕಲು ಮಣ್ಣು & ಜೇಡಿಮಿಶ್ರಿತ ಮರಳು ಮಣ್ಣಿನಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ.
- ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ, ಆಂದ್ರಪ್ರದೇಶ ರಾಜ್ಯಗಳಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

**6. ಹೊಗೆಸೊಪ್ಪು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆಯನ್ನು ತಿಳಿಸಿ.**

**ಉತ್ತರ : ತಂಬಾಕು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

- 21° ರಿಂದ 23° ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- ಸರಾಸರಿ 50–100 ಸೆಂ.ಮೀ. ಮಳೆ ಬೇಕು.
- ಮರಳು ಮಿಶ್ರಿತ ಜೇಡಿಮಣ್ಣು & ರಾಸಾಯನಿಕ ಗೊಬ್ಬರ ಅವಶ್ಯಕ.
- 4.ಆಂದ್ರಪ್ರದೇಶ, ಗುಜರಾತ, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು & ಮಹಾರಾಷ್ಟ್ರಗಳಲ್ಲಿ ಹೆಚ್ಚು ಹೊಗೆಸೊಪ್ಪನ್ನು ಉತ್ಪಾದಿಸುವರು.

**7. ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು ಮತ್ತು ಹಂಚಿಕೆಯನ್ನು ತಿಳಿಸಿ.**

**ಉತ್ತರ : ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು**

- ಹತ್ತಿಯು ಉಷ್ಣವಲಯ & ಉಪ ಉಷ್ಣವಲಯ ಬೆಳೆ.
- 21° ರಿಂದ 24° ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 50 ರಿಂದ 100 ಸೆಂ.ಮೀ. ಗಿಂತ ಹೆಚ್ಚು ಮಳೆ ಅವಶ್ಯಕ.
- ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಕಪ್ಪು ಮಣ್ಣು ಇದಕ್ಕೆ ಹೆಚ್ಚು ಸೂಕ್ತ.
- ಗುಜರಾತ್, ಮಹಾರಾಷ್ಟ್ರ, ಆಂದ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶ ಪಂಜಾಬ, ತಮಿಳುನಾಡು ರಾಜ್ಯಗಳಲ್ಲಿ ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

**8. ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ**

**ಉತ್ತರ : ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

- ಚಹವು ಉಷ್ಣವಲಯ & ಉಪ ಉಷ್ಣವಲಯದ ಬೆಳೆಯಾಗಿದೆ.
- ಚಹ ಬೆಳೆಗೆ 21°–30° ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
- 150 – 250 ಸೆಂ.ಮೀ. ಮಳೆ ಅವಶ್ಯಕ.
- ಹೆಚ್ಚು ಸಸ್ಯಾಂಶವುಳ್ಳ ಆಳವಾದ ಫಲವತ್ತಾದ ಮಣ್ಣು ಈ ಬೆಳೆಗೆ ಬಹು ಸೂಕ್ತ.
- ಸಮುದ್ರ ಮಟ್ಟಕ್ಕೆ 1200 ರಿಂದ 2400 ಮೀ ಎತ್ತರವುಳ್ಳ ಬೆಟ್ಟಗಳ ಇಳಿಜಾರು ಅವಶ್ಯಕ.
- ಬಾರತದಲ್ಲಿ ಚಹವನ್ನು ಹೆಚ್ಚಾಗಿ ಆಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇರಳ ರಾಜ್ಯಗಳು ಬೆಳೆಯುತ್ತವೆ.

**9. ಭಾರತದಲ್ಲಿ ತೋಟಗಾರಿಕೆಯ ಮಹತ್ವ ತಿಳಿಸಿ. ಅಥವಾ**
**ತೋಟಗಾರಿಕಾ ಬೇಸಾಯವು ಆಹಾರ ಭದ್ರತೆಗೆ ಹೇಗೆ ನೆರವಾಗುತ್ತದೆ?**

**ಉತ್ತರ : ಭಾರತದಲ್ಲಿ ತೋಟಗಾರಿಕೆಯ ಮಹತ್ವ**

- ➢ ಹಣ್ಣು, ತರಕಾರಿ, ಹೂವು, ಔಷಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದನ್ನು "ತೋಟಗಾರಿಕೆ ಬೇಸಾಯ" ಎನ್ನುವರು.
- ➢ ಇದು ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ.
- ➢ ಆಹಾರ ಭದ್ರತೆಗೆ ನೆರವಾಗುತ್ತದೆ.
- ➢ ಪ್ರಪಂಚದಲ್ಲಿ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತವು ಚೀನಾದ ತರುವಾಯ ಎರಡನೆಯ ಸ್ಥಾನದಲ್ಲಿದೆ.
- ➢ ಪ್ರಪಂಚದ ಒಟ್ಟು ಹಣ್ಣು ಉತ್ಪಾದನೆಯಲ್ಲಿ ಶೇ. 11% ಮತ್ತು ತರಕಾರಿಯಲ್ಲಿ ಶೇ. 7% ಭಾಗವನ್ನು ಭಾರತವು ಪೂರೈಸುತ್ತದೆ.

**10. ದೇಶದ ಕೃಷಿಯ ಮೇಲೆ ಪುಷ್ಪ ಕೃಷಿಯು ಹೇಗೆ ಮಹತ್ವದ ಪಾತ್ರ ವಹಿಸುತ್ತದೆ?**

ಉತ್ತರ : ದೇಶದ ಕೃಷಿಯ ಮೇಲೆ ಪುಷ್ಪ ಕೃಷಿಯು ಮಹತ್ವದ ಪಾತ್ರ ವಹಿಸುತ್ತದೆ ಹೇಗೆಂದರೆ

- ➢ ರೈತರ ಆದಾಯ ಗಳಿಕೆಯಾಗುತ್ತದೆ.
- ➢ ಉದ್ಯೋಗ ಅದರಲ್ಲೂ ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ.
- ➢ ದೇಶದ ರಫ್ತು ವ್ಯಾಪಾರ ವೃದ್ಧಿಯಾಗುತ್ತದೆ.

# ಅರ್ಥಶಾಸ್ತ್ರ

## ಅಧ್ಯಾಯ 1 ಅಭಿವೃದ್ಧಿ

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. 2014ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ – **0.586 ರಷ್ಟು.**
2. 2012ರಲ್ಲಿ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯ – **0.554 ರಷ್ಟು.**
3. 2011ರ ಜನಗಣತಿಯ ಪ್ರಕಾರ ಭಾರತದಲ್ಲಿರುವ ಲಿಂಗ ಅನುಪಾತ – **945 / 1000.**
4. 2011ರ ಜನಗಣತಿಯ ಪ್ರಕಾರ ಮಹಿಳೆಯರ ಸಾಕ್ಷರತಾ ಧರ – **ಶೇ. 65.46.**
5. 2011ರ ಜನಗಣತಿಯ ಪ್ರಕಾರ ಪುರುಷರ ಸಾಕ್ಷರತಾ ಧರ – **ಶೇ. 82.14**
6. ಆರ್ಥಿಕ ಅಭಿವೃದ್ಧಿಯು ಒಂದು – **ಪ್ರಕ್ರಿಯೆ.**
7. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ – **ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ.**
8. ಆರ್ಥಿಕ ಅಭಿವೃದ್ಧಿಯೆಂದರೆ ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ಹೇಳಿದವರು– **ಪ್ರೊ. ಕೋಲಿನ್ ಕ್ಲಾರ್ಕ್.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಆರ್ಥಿಕ ಅಭಿವೃದ್ಧಿ ಎಂದರೇನು?**

ಉತ್ತರ : ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸಿ, ಬಡತನ, ನಿರುದ್ಯೋಗ, ಅಸಮಾನತೆ, ಹಣದುಬ್ಬರಗಳಂಥ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದನ್ನು ಆರ್ಥಿಕ ಅಭಿವೃದ್ಧಿ ಎಂದು ಕರೆಯಬಹುದು.

**2. ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂದರೇನು?**

ಉತ್ತರ : ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ "ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ"ಯಾಗಿದೆ.

**3. ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿಯು ಯಾವ ಅಂಶಗಳನ್ನು ಒತ್ತಿ ಹೇಳುತ್ತದೆ?**

ಉತ್ತರ : ಪ್ರೊ. ಮೆಯರ್ ಮತ್ತು ಬಾಲ್ಡವಿನ್ ಅವರ ಪ್ರಕಾರ ಆರ್ಥಿಕ ಅಭಿವೃದ್ಧಿಯು ಮೂರು ಅಂಶಗಳನ್ನು ಒತ್ತಿ ಹೇಳುತ್ತದೆ. ಅವೆಂದರೆ – 1. ಒಂದು ಪ್ರಕ್ರಿಯೆ, 2. ನೈಜ ರಾಷ್ಟ್ರೀಯ ವರಮಾನದ ಹೆಚ್ಚಳ ಮತ್ತು 3. ದೀರ್ಘಾವಧಿ ಹೆಚ್ಚಳ.

**4. ಆರ್ಥಿಕಾಭಿವೃದ್ಧಿಯಲ್ಲಿ ಒಂದು ಪ್ರಕ್ರಿಯೆಯು ಏನನ್ನು ಸೂಚಿಸುತ್ತದೆ?**

ಉತ್ತರ : ಆರ್ಥಿಕಾಭಿವೃದ್ಧಿಯಲ್ಲಿ ಒಂದು ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.

**5. ಅಭಿವೃದ್ಧಿ ಎಂದರೇನು?**

ಉತ್ತರ : ಯಾವುದೇ ಒಂದು ಕ್ಷೇತ್ರ ಇಲ್ಲವೇ ವ್ಯಕ್ತಿಗಳ ಪ್ರಗತಿಯನ್ನು ಸೂಚಿಸುವುದನ್ನು ಅಭಿವೃದ್ಧಿ ಎನ್ನುತ್ತೇವೆ.

**6. ರಾಷ್ಟ್ರೀಯ ವರಮಾನ ಎಂದರೇನು?**

ಉತ್ತರ : ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು ಸೇವೆಗಳ ಒಟ್ಟು ಮೌಲ್ಯವನ್ನು ರಾಷ್ಟ್ರೀಯ ವರಮಾನ ಎಂದು ಕರೆಯುತ್ತಾರೆ.

**7. ರಾಷ್ಟ್ರೀಯ ವರಮಾನದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ. ಹೇಗೆ? ಅಥವಾ**

**ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ ಏಕೆ?**

ಉತ್ತರ : ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳ ಮತ್ತು ಬೆಲೆ ಏರಿಕೆಯು ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ. ಆದ್ದರಿಂದ ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡಲು ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ.

**8. ತಲಾ ವರಮಾನ ಎಂದರೇನು?**

ಉತ್ತರ : ತಲಾ ವರಮಾನವು ಒಂದು ದೇಶದ ಜನರ ಸರಾಸರಿ ವರಮಾನವಾಗಿದೆ.

**9. ತಲಾಆದಾಯವನ್ನು ಹೇಗೆ ಕಂಡು ಹಿಡಿಯಲಾಗುತ್ತದೆ?**

ಉತ್ತರ : ದೇಶದ ರಾಷ್ಟ್ರೀಯ ವರಮಾನವನ್ನು ಅಲ್ಲಿನ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾ ವರಮಾನವನ್ನು ಕಂಡುಹಿಡಿಯಲಾಗುತ್ತದೆ.

**10. ತಲಾ ವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು ಹೇಗೆ?**

ಉತ್ತರ : ತಲಾ ವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆಂದರೆ ಅದು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ. ಅಲ್ಲದೇ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

**11. ಅಮಾರ್ತ್ಯಸೇನ್ ಪ್ರಕಾರ ಮಾನವ ಅಭಿವೃದ್ಧಿ ಎಂದರೇನು?**

ಉತ್ತರ : ಅಮಾರ್ತ್ಯಸೇನ್ ಪ್ರಕಾರ ಮಾನವ ಅಭಿವೃದ್ಧಿ ಎಂದರೆ ಮಾನವನ ಸಾಮರ್ಥ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿಯಾಗಿದೆ.

**12. ಮಾನವ ಅಭಿವೃದ್ಧಿ ಸೂಚ್ಯಾಂಕ ಎಂಬ ಮಾನದಂಡವನ್ನು ರಚಿಸಿದ್ದು ಯಾರು?**

ಉತ್ತರ : ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP) ವಿಭಾಗವು 'ಮಾನವ ಅಭಿವೃದ್ಧಿ ಸೂಚ್ಯಾಂಕ' ಎಂಬ ಮಾನದಂಡವನ್ನು ರಚಿಸಿ ರಾಷ್ಟ್ರಗಳ ಪ್ರಗತಿಯನ್ನು ಮಾಪನ ಮಾಡುತ್ತಿದೆ.

**13. ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುವ ಅಂಶಗಳು ಯಾವವು?**

ಉತ್ತರ : ನಿರೀಕ್ಷಿತ ಜೀವಿತಾವಧಿಯು ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯಸ್ಸು ಆಗಿದೆ. ಪೌಷ್ಠಿಕ ಆಹಾರ, ಆರೋಗ್ಯ ಮತ್ತು ನೈರ್ಮಲ್ಯ, ಸ್ವಚ್ಛ ಪರಿಸರ ಮುಂತಾದವುಗಳ ಲಭ್ಯತೆಯು ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುತ್ತದೆ.

**14. ರಾಷ್ಟ್ರದ ಶಿಕ್ಷಣದ ಸಾಧನೆಯನ್ನು ಹೇಗೆ ಅಳೆಯಲಾಗುತ್ತದೆ?**

ಉತ್ತರ : ರಾಷ್ಟ್ರದ ಶಿಕ್ಷಣದ ಸಾಧನೆಯನ್ನು 25 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು ಪೂರ್ಣಗೊಳಿಸಿದ ಶಿಕ್ಷಣದ ಅವಧಿ ಹಾಗೂ 5 ವರ್ಷದ ಮಕ್ಕಳು ಪಡೆಯಬಹುದಾದ ಶಿಕ್ಷಣದ ಅವಧಿಯನ್ನು ಬಳಸಿ ಮಾಪನ ಮಾಡಲಾಗುತ್ತದೆ.

**15. ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ದೇಶದ ಅಭಿವೃದ್ಧಿಯನ್ನು ಹೇಗೆ ಅಳೆಯಲಾಗುತ್ತದೆ?**

ಉತ್ತರ : ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನುಅಳೆಯಲಾಗುತ್ತದೆ.

**16. ಮಾನವ ಅಭಿವೃದ್ಧಿ ಸೂಚ್ಯಂಕ ಎಂದರೇನು?**

ಉತ್ತರ : ಒಂದು ದೇಶದ ಜನರ ನಿರೀಕ್ಷಿತ ಜೀವಿತಾವಧಿ, ಶೈಕ್ಷಣಿಕ ಸಾಧನೆ ಹಾಗೂ ತಲಾವರಮಾನ ಆ ದೇಶದ ಜನರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತದೆ. ಈ ಮೂರು ಅಂಶಗಳನ್ನು ಮಾನವ ಅಭಿವೃದ್ಧಿಯ ಸೂಚಕಗಳು ಎನ್ನುತ್ತಾರೆ. ಈ ಮೂರು ಸೂಚಕಗಳ ಸರಾಸರಿಯೇ 'ಮಾನವ ಅಭಿವೃದ್ಧಿ ಸೂಚಿ'ಯಾಗಿದೆ

**17. ಲಿಂಗಾನುಪಾತ ಎಂದರೇನು?**

ಉತ್ತರ : ಪ್ರತಿ ಸಾವಿರ ಪುರುಷರಿಗೆ ಇರುವ ಸ್ತ್ರೀಯರ ಸರಾಸರಿ ಸಂಖ್ಯೆಯೇ ಲಿಂಗಾನುಪಾತವಾಗಿದೆ.

**18. ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ ಏಕೆ?**

ಉತ್ತರ : ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯೆಮಾಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ. ಇದರಿಂದ ಲಿಂಗಾನುಪಾತ ಕುಸಿಯುತ್ತಿದೆ.

**19. ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.**

ಉತ್ತರ : ಪುರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

**20. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?**

ಉತ್ತರ : ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.

### ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು

**1. ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.**

ಉತ್ತರ :

- ➢ ಪ್ರಕ್ರಿಯೆಯು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
- ➢ ಉತ್ಪಾದನಾಂಗಗಳ ಪೂರೈಕೆಯು ಹೊಸ ಸಂಪನ್ಮೂಲಗಳ ಶೋಧ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆಯ ಕಾರಣಗಳಿಂದಾಗಿ ಬದಲಾವಣೆಯಾಗುತ್ತದೆ.
- ➢ ಜನಸಂಖ್ಯೆಯ ಬೆಳವಣಿಗೆ. ವರಮಾನದ ಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ, ಜನರ ಅಭಿರುಚಿಗಳಲ್ಲಿನ ಬದಲಾವಣೆ, ಮುಂತಾದವುಗಳಿಂದಾಗಿ ಸರಕುಗಳ ಬೇಡಿಕೆಯಲ್ಲಿ ಬದಲಾವಣೆ ಉಂಟಾಗುತ್ತದೆ.
- ➢ ಈ ಬದಲಾವಣೆಗಳು ರಾಷ್ಟ್ರೀಯ ವರಮಾನದ ಹೆಚ್ಚಳಕ್ಕೆ ಪೂರಕವಾಗುತ್ತವೆ.

**2. ಒಳಗೊಳ್ಳುವ ಅಭಿವೃದ್ಧಿ ಮತ್ತು ನಿರಂತರ ಅಭಿವೃದ್ಧಿ ಎಂದರೇನು?**

ಉತ್ತರ : ಈಗ ನಾವು ಪ್ರತಿಯೊಬ್ಬರಿಗೂ ಪ್ರಯೋಜನ ದೊರಕುವಂತೆ ಮಾಡುವ ಅಭಿವೃದ್ಧಿಯನ್ನು 'ಒಳಗೊಳ್ಳುವ ಅಭಿವೃದ್ಧಿ'ಯೆಂದು ಕರೆಯುತ್ತೇವೆ.

ನೈಸರ್ಗಿಕ ಸಂಪನ್ಮೂಲಗಳನ್ನು ಮತ್ತು ಪರಿಸರವನ್ನು ಮುಂದಿನ ಪೀಳಿಗೆಯವರಿಗಾಗಿಯೂ ಸಂರಕ್ಷಿಸಿ ಪ್ರಯೋಜನ ನೀಡುವಂತಹ ಅಭಿವೃದ್ಧಿಯನ್ನು ನಿರಂತರ ಅಭಿವೃದ್ಧಿ ಎಂದು ಕರೆಯುತ್ತೇವೆ.

**3. ಅನಾಭಿವೃದ್ಧಿ ಎಂದರೇನು? ಅದಕ್ಕೆ ಕಾರಣಗಳೇನು?**

ಉತ್ತರ : 'ಅನಾಭಿವೃದ್ಧಿ' ಎಂಬ ಶಬ್ದವು ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.

**ಅನಾಭಿವೃದ್ಧಿಗೆ ಕಾರಣಗಳೆಂದರೆ –**

- ಕಡಿಮೆ ವರಮಾನ,
- ಬಡತನ,
- ನಿರುದ್ಯೋಗ,
- ಅಸಮಾನತೆ,
- ಸಂಪನ್ಮೂಲಗಳ ಸಮರ್ಪಕ ಸದ್ಬಳಕೆ ಇಲ್ಲದಿರುವುದು

**4. ಅನಭಿವೃದ್ಧಿ ದೇಶದ ಲಕ್ಷಣಗಳಾವವು?**

**ಉತ್ತರ : ಅನಭಿವೃದ್ಧಿ ದೇಶದ ಲಕ್ಷಣಗಳು.**

- ದೇಶದಲ್ಲಿ ಉತ್ಪಾದನೆ ಕಡಿಮೆ ಇರುತ್ತದೆ.
- ತಲಾ ಆದಾಯವು ಅತ್ಯಂತ ಕಡಿಮೆ ಇರುತ್ತದೆ.
- ಬಹತೇಕ ಜನರಿಗೆ ಕನಿಷ್ಠ ಮೂಲಭೂತ ಅವಶ್ಯಕತೆಗಳಾದ ಊಟ, ಬಟ್ಟೆ & ವಸತಿಯನ್ನು ಪಡೆಯುವುದು ಕಷ್ಟವಾಗಿರುತ್ತದೆ.
- ಬಹುಸಂಖ್ಯಾತ ಜನರು ಅನಕ್ಷರಸ್ಥರಾಗಿದ್ದು, ಮೂಡನಂಬಿಕೆಗಳಲ್ಲಿ ಮುಳುಗಿರುತ್ತಾರೆ.
- ಜನರು ಆರೋಗ್ಯ & ನೈರ್ಮಲ್ಯದ ಸೌಲಭ್ಯಗಳಿಲ್ಲದೆ ಅನಾರೋಗ್ಯದಿಂದ ಬಳಲುತ್ತಿರುತ್ತಾರೆ.

**5. ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ಅವರು ಮಾನವರು ಘನತೆಯುತ ಜೀವನ ನಡೆಸಲು ಯಾವ ಅಂಶಗಳು ಮುಖ್ಯ ಎಂದು ಹೇಳಿದ್ದಾರೆ?**

ಉತ್ತರ : ಪಾಕಿಸ್ತಾನದ ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ಅವರು ಮಾನವರು ಘನತೆಯುತ ಜೀವನ ನಡೆಸಲು ಬೇಕಾಗಿರುವ ಅತ್ಯಂತ ಮಹತ್ವದ ಅಂಶಗಳನ್ನು ತಿಳಿಸಿದ್ದಾರೆ. ಅವುಗಳೆಂದರೆ –

- ಸುದೀರ್ಘವಾದ ಆರೋಗ್ಯಯುತ ಜೀವನ ನಡೆಸುವುದು.
- ಜ್ಞಾನವಂತರಾಗಿರುವುದು,
- ಜೀವನಕ್ಕೆ ಅವಶ್ಯವಿರುವ ಕನಿಷ್ಠ ಸೌಲಭ್ಯಗಳನ್ನು ಖರೀದಿಸಲು ಅವಶ್ಯವಿರುವ ವರಮಾನದ ಪ್ರಮಾಣ ಹೊಂದುವುದು ಎಂದು ತಿಳಿಸಿದ್ದಾರೆ.

**6. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.**

ಉತ್ತರ : ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣಗಳೆಂದರೆ –

- ಆಹಾರದ ಕೊರತೆ,
- ವಸತಿಯ ಕೊರತೆ,
- ಶಿಕ್ಷಣದ ಕೊರತೆ,
- ಆರೋಗ್ಯದ ಕೊರತೆ,
- ಸಾಮಾಜಿಕ ಭದ್ರತೆಯ ಕೊರತೆ,
- ಶುದ್ಧ ಕುಡಿಯುವ ನೀರಿನ ಕೊರತೆ,
- ಶುದ್ಧ ಗಾಳಿಯ ಕೊರತೆ,
- ಸ್ವಚ್ಛ ಪರಿಸರದ ಕೊರತೆ.

**7. ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಾಂಕ (HDI)ದ ರಚನೆ ಅಗತ್ಯ ಏಕೆ? (ಎಪ್ರಿಲ್ 2019)**

ಉತ್ತರ :

- ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳವು ಕಂಡುಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.
- ತಲಾವರಮಾನವು ಜನರ ನಡುವಿನ ವರಮಾನ ಹಂಚಿಕೆ ತೋರಿಸುವುದಿಲ್ಲ.
- ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರೆ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.
- ಇದರಿಂದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಾಂಕದ ರಚನೆ ಅಗತ್ಯ.

**8. ಇಂದಿನ ಸಮಾಜದಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿಗಳು ಉತ್ತಮವಾಗಿಲ್ಲ ಏಕೆ?**

ಉತ್ತರ : ಇಂದಿನ ಸಮಾಜದಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿಲ್ಲ ಏಕೆಂದರೆ –

- ಹೆಚ್ಚಿನ ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದು, ಅವರಿಗೆ ಪುರುಷರಿಗಿಂತ ಕಡಿಮೆ ಕೂಲಿ ನೀಡಲಾಗುತ್ತಿದೆ.
- ಅವರು ಸಂಪಾದಿಸಿದ ಹಣವನ್ನು ಖರ್ಚು ಮಾಡುವ ಸ್ವಾತಂತ್ರ್ಯವೂ ಅವರಿಗೆ ಇಲ್ಲ.
- ಅಲ್ಪ ಶಿಕ್ಷಣದ ಕಾರಣದಿಂದಾಗಿ ಮಹಿಳೆಯರು ಉತ್ತಮ ಹುದ್ದೆಗಳಲ್ಲಿ ಮತ್ತು ಅಧಿಕ ಸಂಬಳವಿರುವ ಹುದ್ದೆಗಳಲ್ಲಿ ಇರುವುದು ಅಪರೂಪ.

**9. ಭಾರತದಲ್ಲಿ ತಾಯಂದಿರ ಮರಣ, ಶಿಶುಗಳ ಮರಣ, ಮಕ್ಕಳ ಮರಣ ಪ್ರಮಾಣ ಅಧಿಕವಾಗಿದೆ ಏಕೆ?**

ಉತ್ತರ :

- ಬಹಳಷ್ಟು ಕುಟುಂಬಗಳಲ್ಲಿ ಸ್ತ್ರೀಯರು ಕೊನೆಗೆ ಊಟ ಮಾಡುವುದರಿಂದ ಸರಿಯಾದ ಊಟ ಸಿಗುತ್ತಿಲ್ಲ.
- ಆಹಾರದ ಕೊರತೆಯಿಂದ ಅಪೌಷ್ಠಿಕತೆಗೆ ತುತ್ತಾಗಿ ಹಲವಾರು ರೋಗಗಳಿಗೆ ಈಡಾಗುತ್ತಾಳೆ.
- ಒಂದೆಡೆ ಅಪೌಷ್ಠಿಕತೆ, ಮತ್ತೊಂದೆಡೆ ಅಧಿಕ ಕೆಲಸದ ಒತ್ತಡದಿಂದ ಮಹಿಳೆ ಅನಾರೋಗ್ಯಕ್ಕೆ ಒಳಗಾದರೂ ಪುರುಷರು ಅದನ್ನು ನಿರ್ಲಕ್ಷಿಸುವುದೇ ಹೆಚ್ಚು.
- ಈ ಕಾರಣಗಳಿಂದಾಗಿ ಭಾರತದಲ್ಲಿ ತಾಯಂದಿರ ಮರಣ, ಶಿಶುಗಳ ಮರಣ, ಮಕ್ಕಳ ಮರಣ ಪ್ರಮಾಣ ಅಧಿಕವಾಗಿದೆ

**10. ಲಿಂಗ ಸಮಾನತೆಯನ್ನು ಹೇಗೆ ಸಾಧಿಸುವುದು? ಅಥವಾ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುವ ಅಂಶಗಳು ಯಾವುವು?**

ಉತ್ತರ : **ಲಿಂಗ ಸಮಾನತೆಯನ್ನು ಈ ಕೆಳಗಿನ ಅಂಶಗಳ ಮೂಲಕ ಸಾಧಿಸಬಹುದು. ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುವ ಅಂಶಗಳು**

- ಮಹಿಳೆಯರ ಸಬಲೀಕರಣ
- ಮಹಿಳೆಯರ ವಿರುದ್ಧದ ಹಿಂಸೆಯನ್ನು ತಡೆಗಟ್ಟುವ ಕಾನೂನುಗಳನ್ನು ಜಾರಿಗೊಳಿಸುವುದು.
- ಸ್ತ್ರೀ–ಪುರುಷರಿಗೆ ಸಮಾನ ವೇತನ ನೀಡುವುದು.
- ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದು.

**11. ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ ಏಕೆ?**

ಉತ್ತರ : . ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ ಏಕೆಂದರೆ –

- ಪುರುಷಶಾಹಿ ಸಮಾಜದಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೆ ಆದ್ಯತೆ ಹೆಚ್ಚು.
- ಲಿಂಗಾಧಾರಿತ ಭ್ರೂಣ ಹತ್ತೆ ನಡೆಯುತ್ತಿದೆ.
- ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮಹಿಳೆಯರಿಗೆ ಪುರುಷ ಸಮಾಜ ಅವಕಾಶ ಕೊಡುತ್ತಿಲ್ಲ.
- ಉನ್ನತ ಶಿಕ್ಷಣದ ಅವಕಾಶಗಳು ಹುಡುಗರಿಗೆ ಹೋಲಿಸಿದರೆ ಹೆಣ್ಣುಮಕ್ಕಳಿಗೆ ಕಡಿಮೆ.
- ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿಗಳು ಇನ್ನೂ ಜೀವಂತವಾಗಿವೆ.

**12. ಮಹಿಳೆಯರನ್ನು ಸಬಲೀಕರಣ ಮಾಡುವಲ್ಲಿ ಸ್ವಸಹಾಯ ಸಮೂಹಗಳ ಪಾತ್ರವನ್ನು ತಿಳಿಸಿ. ಅಥವಾ ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.**

**ಉತ್ತರ : ಮಹಿಳೆಯರನ್ನು ಸಬಲೀಕರಣ ಮಾಡುವಲ್ಲಿ ಸ್ವಸಹಾಯ ಸಮೂಹಗಳ ಪಾತ್ರ –**

**ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಹೇಗೆಂದರೆ –**

- ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರು ಸಬಲೀಕರಣವನ್ನು ಸಾಧಿಸಲು ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲಾಗಿದೆ.
- ಒಂದು ಸ್ವಸಹಾಯ ಸಮೂಹವು 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘವಾಗಿದೆ.
- ಸಂಘದ ಸದಸ್ಯರು ತಮ್ಮಲ್ಲಿರುವ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಡಿಕರಿಸಿ ವ್ಯವಹಾರ ಆರಂಭಿಸಿ, ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾರೆ.
- ಸ್ವಸಹಾಯ ಸಮೂಹಗಳು ಮಹಿಳೆಯರ ವರಮಾನ ಹಾಗೂ ಉಳಿತಾಯಗಳ ವೃದ್ಧಿಗೆ ಕಾರಣವಾಗಿದೆ.
- ಇದರಿಂದಾಗಿ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ.

## ಅಧ್ಯಾಯ 2

## ಗ್ರಾಮೀಣ ಅಭಿವೃದ್ಧಿ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. 2011ರ ಜನಗಣತಿಯ ಪ್ರಕಾರ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರ ಸಂಖ್ಯೆ– **ಶೇ. 68.84 ರಷ್ಟು ಜನರು.**
2. 'ಭಾರತದ ನೈಜ ಅಭಿವೃದ್ಧಯೆಂದರೆ ಗ್ರಾಮಗಳ ಅಭಿವೃದ್ಧಿ' ಎಂದವರು – **ಮಹಾತ್ಮ ಗಾಂಧೀಜಿ.**
3. ಭಾರತದಲ್ಲಿ ಮೂರು ಹಂತದ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದದ್ದು ಸಂವಿಧಾನದ ಈ ತಿದ್ದುಪಡಿಯಿಂದ – **73ನೇ ತಿದ್ದುಪಡಿ.**
4. ಭಾರತದಲ್ಲಿ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದದ್ದು – **1993ರಲ್ಲಿ.**

PSG

5. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಜಾರಿಗೆ ಬಂದ ಯೋಜನೆ –

**ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿ ಸಂಘ)**

6. ಪಂಚಾಯತ ಸಂಸ್ಥೆಗಳು ______ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. – **ವಿಕೇಂದ್ರೀಕರಣ.**

7. 1993ರಲ್ಲಿ ಸಂವಿಧಾನದ 73ನೇ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಏಕೆಂದರೆ –**ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು.(ಎಪ್ರಿಲ್ 2019)**

8. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಅವುಗಳು –

**ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುತ್ತವೆ.**

9. ಪ್ರಧಾನಮಂತ್ರಿ ಅವಾಸ್ ಯೋಜನೆಯ ಉದ್ದೇಶ –

**ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು.**

### ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು

**1. ಗ್ರಾಮೀಣ ಪ್ರದೇಶದ ಜನರು ನಗರಗಳಿಗೆ ವಲಸೆ ಬರಲು ಪ್ರಾರಂಭಿಸಿದರು ಏಕೆ?**

ಉತ್ತರ : ಕೃಷಿಯ ನಿಯಮಿತ ಉದ್ಯೋಗ ಮತ್ತು ಸೂಕ್ತ ಕೂಲಿ ಲಭಿಸಲದೇ ಇದ್ದುದರಿಂದ ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ವಲಸೆ ಬರಲು ಪ್ರಾರಂಭಿಸಿದರು.

**2. ಸ್ವಾತಂತ್ರ್ಯಾನಂತರದಲ್ಲಿ ಗ್ರಾಮೀಣ ಪ್ರದೇಶಗಳು ಸಾಕಷ್ಟು ದುಸ್ಥಿತಿಗೆ ತಲುಪಿದವು ಏಕೆ?**

ಉತ್ತರ : ಸ್ವಾತಂತ್ರ್ಯಾನಂತರ ಸರ್ಕಾರವು ಅನುಸರಿಸಿದ ಅಭಿವೃದ್ಧಿ ತಂತ್ರಗಳು ನಗರ ಕೇಂದ್ರಿತ ಅಭಿವೃದ್ಧಿಗೆ ಅವಕಾಶ ನೀಡಿದ್ದರಿಂದ ಗ್ರಾಮೀಣ ಪ್ರದೇಶಗಳು ಸಾಕಷ್ಟು ದುಸ್ಥಿತಿಗೆ ತಲುಪಿದವು.

**3. ನಗರಗಳು ತೀವ್ರಗತಿಯಲ್ಲಿ ವಿಸ್ತರಣೆಗೊಳ್ಳುತ್ತಿವೆ ಏಕೆ?**

ಉತ್ತರ : ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳ ಜಾರಿಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ತನ್ನದಾಗಿಸಿಕೊಂಡ ಕೈಗಾರಿಕಾ ಮತ್ತು ಸೇವಾ ವಲಯಗಳು ತೀವ್ರವಾಗಿ ವಿಸ್ತರಣೆಗೊಳ್ಳುತ್ತಿರುವುದರಿಂದ ನಗರಗಳು ತೀವ್ರಗತಿಯಲ್ಲಿ ವಿಸ್ತರಣೆಗೊಳ್ಳುತ್ತಿವೆ.

**4. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ ಏಕೆ? ಅಥವಾ**

**ಇಂದು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯಾವಶ್ಯಕವಾಗಿದೆ. ಏಕೆ?**

ಉತ್ತರ :

- ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
- ಶೇ. 60ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದು, ರಾಷ್ಟ್ರೀಯ ವರಮಾನಕ್ಕೆ ಈ ವಲಯದ ಕೊಡುಗೆ ಕಡಿಮೆ ಇದೆ.
- ಇದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ.
- ದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅತ್ಯವಶ್ಯವಾಗಿದೆ.

**5. ಗ್ರಾಮೀಣ ಹಿಂದುಳಿಯುವಿಕೆ & ಗ್ರಾಮೀಣ ಬಡತನಕ್ಕೆ ಅತ್ಯಂತ ಪ್ರಮುಖ ಕಾರಣವೇನು?**

ಉತ್ತರ : ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆ ಮತ್ತು ಗ್ರಾಮೀಣ ಬಡತನಕ್ಕೆ ಅತ್ಯಂತ ಪ್ರಮುಖ ಕಾರಣವಾಗಿದೆ.

**6. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

ಉತ್ತರ : ಗ್ರಾಮೀಣ ಪ್ರದೇಶದಲ್ಲಿ ಕೃಷಿ & ಕೃಷಿ ಸಂಬಂಧಿಸಿದ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಬಹುದಾಗಿದೆ.

**7. ಅಧಿಕಾರ ವಿಕೇಂದ್ರೀಕರಣ ಎಂದರೇನು?**

ಉತ್ತರ : ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರೀಕರಣ ಎನ್ನತ್ತೇವೆ.

**8. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.**

ಉತ್ತರ : ಸರ್ಕಾರವು 1993ರಲ್ಲಿ ಸಂವಿಧಾನದ 73 ನೇ ತಿದ್ದುಪಡಿಯ ಪ್ರಕಾರ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ –

1. ಗ್ರಾಮ ಪಂಚಾಯ್ತಿ, 2. ತಾಲ್ಲೂಕು ಪಂಚಾಯ್ತಿ, 3. ಜಿಲ್ಲಾ ಪಂಚಾಯ್ತಿ.

**9. ಸರಕಾರ ಜಾರಿಗೆ ತಂದ ವಸತಿ ಯೋಜನೆಗಳನ್ನು ಹೆಸರಿಸಿ.**

**ಉತ್ತರ : ಸರ್ಕಾರ ಜಾರಿಗೆ ತಂದ ವಸತಿ ಯೋಜನೆಗಳು**

- ಪ್ರಧಾನಮಂತ್ರಿ ಅವಾಸ್ ಯೋಜನೆ,
- ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ,
- ಆಶ್ರಯ ಯೋಜನೆ

**10. ಸರ್ಕಾರ ಬಡತನ ನಿವಾರಣೆಗೆ ಜಾರಿಗೊಳಿಸಿರುವ ಪ್ರಮುಖ ಯೋಜನೆಗಳನ್ನು ಹೆಸರಿಸಿ.**

ಉತ್ತರ : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸ್ವರ್ಣಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ.

**11. ಗ್ರಾಮೀಣ ಮಹಿಳೆಯು ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ ಹೇಗೆ?**

ಉತ್ತರ : ಪಂಚಾಯತ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ ಗ್ರಾಮೀಣ ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಗಿದೆ.

**12. ಸ್ತ್ರೀ ಶಕ್ತಿ ಸಂಘಗಳ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಸ್ತ್ರೀ ಶಕ್ತಿ ಸಂಘಗಳ ಸ್ಥಾಪಿಸಲಾಗಿದೆ.

**13. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?**

ಉತ್ತರ : ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ.

**14. ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಯು ಅತ್ಯಂತ ಮಹತ್ವದ್ದಾಗಿದೆ. ಏಕೆ?**

ಉತ್ತರ : ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಯು ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ – ಗ್ರಾಮ ಸಭೆಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ಯೋಜನೆಗಳನ್ನು ನಿರ್ಣಯಿಸಲಾಗುತ್ತದೆ.

**15. ಗ್ರಾಮೀಣ ಪ್ರದೇಶಗಳಲ್ಲಿ ನರೇಗಾ ಯೋಜನೆಯನ್ನು ಜಾರಿಗೆ ತಂದಿರುವುದರ ಉದ್ದೇಶವೇನು?**

ಉತ್ತರ : ಗ್ರಾಮೀಣ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಲು ಗ್ರಾಮೀಣ ಪ್ರದೇಶಗಳಲ್ಲಿ ನರೇಗಾ ಯೋಜನೆಯನ್ನು ಜಾರಿಗೆ ತರಲಾಗಿದೆ.

# ವ್ಯವಹಾರ ಅಧ್ಯಯನ

## ಅಧ್ಯಾಯ 1. ಬ್ಯಾಂಕು ವ್ಯವಹಾರಗಳು

### ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು

1. ಬ್ಯಾಂಕ್ ಎಂಬ ಪದವು ಇಟಾಲಿಯನ್ ಈ ಪದದಿಂದ ಬಂದಿದೆ. – **ಬ್ಯಾಂಕೋ**
2. ಬ್ಯಾಂಕ್ ಎಂಬ ಪದವು ಫ್ರೆಂಚ್‌ನ ಈ ಪದದಿಂದ ಬಂದಿದೆ. – **ಬ್ಯಾಂಕ್**
3. ಬ್ಯಾಂಕ ಪದದ ಅರ್ಥ –

   **ಬೆಂಚು ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್,**
4. ಬ್ಯಾಂಕುಗಳು ಗ್ರಾಹಕರ ಠೇವಣಿಗಳಿಗೆ _____ ನಂತೆ ವರ್ತಿಸುತ್ತವೆ. – **ಮೇಲ್ವಿಚಾರಕ.**
5. ಬ್ಯಾಂಕುಗಳ ಬ್ಯಾಂಕ್(ಬ್ಯಾಂಕುಗಳ ತಾಯಿ) – **ರಿಜರ್ವ ಬ್ಯಾಂಕ್**
6. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ – **ಭಾರತೀಯ ಸ್ಟೇಟ್ ಬ್ಯಾಂಕ್**
7. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಈ ಇಲಾಖೆಯು ನೀಡುತ್ತದೆ.–

   **ಭಾರತೀಯ ಅಂಚೆ ಇಲಾಖೆ**
8. ಜನರು ಹಣ ಉಳಿತಾಯ ಮಾಡಲು ಈ ಖಾತೆ ಸಹಾಯ ಮಾಡುತ್ತದೆ. –

   **ಉಳಿತಾಯ ಖಾತೆ**
9. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ –

   **ಚಾಲ್ತಿ ಖಾತೆ**
10. ಬ್ಯಾಂಕುಗಳು ಬಡ್ಡಿಯನ್ನು ನೀಡದಿರುವ ಖಾತೆ – **ಚಾಲ್ತಿ ಖಾತೆ**
11. ಬ್ಯಾಂಕುಗಳು ಈ ಖಾತೆಗೆ ಸೇವಾಶುಲ್ಕ ವಸೂಲು ಮಾಡುತ್ತವೆ. – **ಚಾಲ್ತಿ ಖಾತೆ**
12. ಬ್ಯಾಂಕುಗಳು ಈ ಖಾತೆಯ ಠೇವಣಿಗಳಿಗೆ ಬಡ್ಡಿ ಕೊಡುವುದಿಲ್ಲ. - **ಚಾಲ್ತಿ ಖಾತೆ**
13. ಸಾಮಾನ್ಯವಾಗಿ ವ್ಯಾಪಾರಸ್ಥರು, ಉದ್ಯಮಿಗಳು ಈ ಖಾತೆಯನ್ನು ತೆರೆಯುತ್ತಾರೆ. –

    **ಚಾಲ್ತಿ ಖಾತೆ**
14. ಯಾವ ಖಾತೆಗೆ ಬ್ಯಾಂಕುಗಳು ಓವರ್‌ಡ್ರಾಫ್ಟ್ ಸೌಲಭ್ಯವನ್ನು ನೀಡಿರುತ್ತವೆ.–

    **ಚಾಲ್ತಿ ಖಾತೆ**
15. ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುವ ಖಾತೆ –**ಆವರ್ತ ಠೇವಣಿ ಖಾತೆ**
16. ಮದುವೆ, ಗೃಹ ನಿರ್ಮಾಣ, ಆಸ್ತಿ ಖರೀದಿ ಮೊದಲಾದ ಭವಿಷ್ಯದ ಅವಶ್ಯಕತೆಗಾಗಿ ಈ ಖಾತೆಯನ್ನು ತೆರೆಯಬಹುದು – **ಆವರ್ತ ಠೇವಣಿ ಖಾತೆ,**
17. ಯಾವ ಖಾತೆಯಲ್ಲಿ ಒಂದು ನಿಶ್ಚಿತ ಅವಧಿಗೆ ಠೇವಣಿಗಳನ್ನು ಇಡಲಾಗುತ್ತದೆ.–

    **ನಿಶ್ಚಿತ ಠೇವಣಿ ಖಾತೆ**
18. ವಿದ್ಯಾರ್ಥಿಗಳು ಮತ್ತು ಪಿಂಚಣಿದಾರರಿಗೆ ಸೂಕ್ತವಾದ ಬ್ಯಾಂಕ್ ಖಾತೆ –

    **ಉಳಿತಾಯ ಖಾತೆ.**
19. ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ಹೊಂದಲು ಕೇಂದ್ರ ಸರಕಾರ ಜಾರಿಗೆ ತಂದ ಯೋಜನೆ – **ಜನಧನ ಯೋಜನೆ**

### ಪ್ರಶ್ನೆ 2] ದೀರ್ಘ ಉತ್ತರದ ಪ್ರಶ್ನೆಗಳು

**1. ಬ್ಯಾಂಕಿಂಗ್ ಎಂದರೇನು?**

ಉತ್ತರ : ಬ್ಯಾಂಕಿನಲ್ಲಿನ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**2. ಬ್ಯಾಂಕುಗಳು ಯಾವ ಉದ್ದೇಶಗಳಿಗಾಗಿ ಹಣವನ್ನು ಸಾಲದ ರೂಪದಲ್ಲಿ ಕೊಡುತ್ತವೆ?**

ಉತ್ತರ : ಬ್ಯಾಂಕುಗಳು ಕೈಗಾರಿಕಾ ಕ್ಷೇತ್ರ, ಕೃಷಿ ಕ್ಷೇತ್ರ, ಶಿಕ್ಷಣ, ಗೃಹನಿರ್ಮಾಣ ಮೊದಲಾದ ಉದ್ದೇಶಗಳಿಗಾಗಿ ಹಣವನ್ನು ಸಾಲದ ರೂಪದಲ್ಲಿ ಕೊಡುತ್ತವೆ.

**3. ಬ್ಯಾಂಕು ವ್ಯವಹಾರಗಳೆಂದರೇನು?**

ಉತ್ತರ : ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರಗಳೆನ್ನುತ್ತಾರೆ.

**4. ರಿಜರ್ವ ಬ್ಯಾಂಕನ್ನು ದೇಶದ ಕೇಂದ್ರ ಬ್ಯಾಂಕ್ ಎಂದು ಕರೆಯುತ್ತಾರೆ ಏಕೆ?**

ಉತ್ತರ : ರಿಜರ್ವ ಬ್ಯಾಂಕನ್ನು ದೇಶದ ಕೇಂದ್ರ ಬ್ಯಾಂಕ್ ಎಂದು ಕರೆಯುತ್ತಾರೆ ಏಕೆಂದರೆ ಇದು ಹಣಕಾಸಿನ ಕಾರ್ಯ ನೀತಿಯನ್ನು ರೂಪಿಸುತ್ತದೆ. ಈ ಕಾರ್ಯ ನೀತಿಯನ್ನು ಎಲ್ಲಾ ಬ್ಯಾಂಕುಗಳು ನಿರ್ವಹಿಸಬೇಕಾಗುತ್ತದೆ.

**5. ಬ್ಯಾಂಕ್ ಉದ್ಯಮದಲ್ಲಿ ಇತ್ತೀಚಿನ ಹೊಸ ಬೆಳವಣಿಗೆ ಯಾವುದು?**

ಉತ್ತರ : ಬ್ಯಾಂಕ್ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆಯೆಂದರೆ ಅಂಚೆ ಕಛೇರಿಗಳನ್ನು ಬ್ಯಾಂಕ್ ವ್ಯವಹಾರಗಳ ಅಂಕಿತದೊಳಗೆ ತಂದಿರುವುದು.

**6. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆ ಗಳಾವವು?**

ಉತ್ತರ : ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು

1. ಉಳಿತಾಯ ಖಾತೆ 2. ಚಾಲ್ತಿ ಖಾತೆ
3. ಆವರ್ತ ಠೇವಣಿ ಖಾತೆ 4. ನಿಶ್ಚಿತ ಠೇವಣಿ ಖಾತೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

**ಉತ್ತರ : ಬ್ಯಾಂಕುಗಳ ಗುಣಲಕ್ಷಣಗಳು**

- ಹಣದ ವಹಿವಾಟು ನಡೆಸುತ್ತವೆ.
- ಬ್ಯಾಂಕು ವ್ಯಕ್ತಿ/ಸಂಸ್ಥೆ/ಕಂಪನಿ ಆಗಿರಬಹುದು.
- ಠೇವಣಿಗಳನ್ನು ಅಂಗೀಕರಿಸುತ್ತವೆ.
- ಸಾಲಗಳನ್ನು ಕೊಡುವುದು.
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು.
- ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು,
- ಲಾಭ ಮತ್ತು ಸೇವಾ ಭಾವನೆ.
- ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು
- ಸಂಬಂಧ ಕಲ್ಪಿಸುವ ಕೊಂಡಿ.
- ಬ್ಯಾಂಕಿಂಗ್ ವ್ಯವಹಾರ.
- ಬ್ಯಾಂಕು ಹೆಸರಿನ ಗುರುತನ್ನು ಹೊಂದಿರುತ್ತದೆ. ಉದಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ.

**2. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವವು?**

**ಉತ್ತರ : ಬ್ಯಾಂಕ್ ನಿರ್ವಹಿಸುವ ಕಾರ್ಯಗಳು.**

- ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು.
- ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
- ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
- ಸಾಲಪತ್ರಗಳನ್ನು & ಜವಬ್ದಾರಿ ಪತ್ರಗಳನ್ನು ಕೊಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ವಿದೇಶಿ ವಿನಿಮಯ ವ್ಯವಹಾರಗಳನ್ನು ನಿರ್ವಹಿಸುವದು.
- ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ದಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.

**3. ಬ್ಯಾಂಕ್ & ಗ್ರಾಹಕರ ಸಂಬಂಧವನ್ನು ತಿಳಿಸಿ.**

ಉತ್ತರ : ಬ್ಯಾಂಕ್ & ಗ್ರಾಹಕರಿಗೂ ಇರುವ ಸಂಬಂಧವನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು.

**1. ಸಾಮಾನ್ಯ ಸಂಬಂಧ –**

- ಪ್ರಾಥಮಿಕ ಸಂಬಂಧ – ಸಾಲಿಗ & ಸಾಲಗಾರನ ಸಂಬಂಧ,
- ಸಹಾಯಕ ಅಥವಾ ಉಪಕಾರ ಸಂಬಂಧ,
- ಕಾರುಬಾರಿ ಅಥವಾ ನಿಯೋಗಿ & ಮುಖ್ಯಸ್ಥನ ಸಂಬಂಧ.

2. ವಿಶೇಷ ಸಂಬಂಧ –

- ಚೆಕ್ಕುಗಳನ್ನು ಮನ್ನಣೆ ಮಾಡುವುದು.
- ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

**4. ಬ್ಯಾಂಕು ಸಲ್ಲಿಸುವ ಸೇವೆಗಳಾವವು?**

**ಉತ್ತರ : ಬ್ಯಾಂಕು ಸಲ್ಲಿಸುವ ಸೇವೆಗಳು.**

- ಜಮಾ ಕಾರ್ಡು (ಅಡಿಜಜುಣ ಛಿಚಿಡಿಢ)ಗಳನ್ನು ಕೊಡುವುದು.
- ಖಾಸಗಿ ಸಾಲಗಳನ್ನು ಕೊಡುವುದು.
- ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
- ವ್ಯಾಪಾರಕ್ಕೆ ಬೇಕಾದ ಸಾಲಗಳನ್ನು ಕೊಡುವುದು.
- ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
- ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
- ಸಹಿಗಳಿಗೆ ಜವಬ್ದಾರಿ ಹಾಕುವುದು.

**5. ಭಾರತದಲ್ಲಿರುವ ಅಂಚೆ ಬ್ಯಾಂಕಿನ ಬಗ್ಗೆ ವಿವರಿಸಿ. ಅಥವಾ**

**ಭಾರತದ ಗ್ರಾಮೀಣ ಪ್ರದೇಶಗಳಿ ಅಂಚೆ ಬ್ಯಾಂಕಿಂಗ್ ವರವಾಗಿದೆ ಹೇಗೆ? ವಿವರಿಸಿ ಅಥವಾ**

**ಅಂಚೆ ಕಛೇರಿಗಳು ಒದಗಿಸುವ ಸೇವೆಗಳೇನು? ಅಥವಾ**

**ಅಂಚೆ ಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನು ಸಹ ಕೈಗೊಳ್ಳುತ್ತವೆ. ಸಮರ್ಥಿಸಿ.**

ಉತ್ತರ :ಅಂಚೆ ಕಛೇರಿಗಳು ಒದಗಿಸುವ ಸೇವೆಗಳು ಅಥವಾ ಹಣಕಾಸಿನ ವ್ಯವಹಾರಗಳು–

- ರಾಷ್ಟ್ರೀಯ ಉಳಿತಾಯ ಪತ್ರ
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರ
- ಆವರ್ತ ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿ ವೇತನ
- ಹಣವನ್ನು ವರ್ಗಾಯಿಸುವುದು

**6. ಬ್ಯಾಂಕುಗಳ ಪ್ರಮುಖ ವಿಧಗಳಾವವು?**

**ಉತ್ತರ : ಬ್ಯಾಂಕಿನ ವಿಧಗಳೆಂದರೆ –**

- ಕೇಂದ್ರಬ್ಯಾಂಕು ಅಥವಾ ಭಾರತೀಯರಿಜರ್ವ ಬ್ಯಾಂಕು
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು
- ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

**7. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**

**ಉತ್ತರ : ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣವೆಂದರೆ–**

- ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
- ವೇತನ ಪಡೆಯುವವರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು & ಪಿಂಚಣಿದಾರರು ಖಾತೆ ತೆರೆಯಲು ಅವಕಾಶವಿದೆ.
- ಸರ್ಕಾರ ನೀಡುವ ರಿಯಾಯತಿ, ಧನಸಹಾಯ & ವಿದ್ಯಾರ್ಥಿ ವೇತನ ಮುಂತಾದವು ನೇರವಾಗಿ ಸಿಗುವಂತೆ ಮಾಡಿರುವುದು.
- ಈ ಕಾರಣಗಳಿಂದ ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ.

**8. ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳೇನು?**

**ಉತ್ತರ : ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳು**

**ಉಳಿತಾಯ ಖಾತೆ**

- ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ.
- ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
- ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ.
- ಈ ಖಾತೆಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುತ್ತವೆ.
- ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ.

**ಚಾಲ್ತಿ ಖಾತೆ**

- ಚಾಲ್ತಿ ಖಾತೆಯನ್ನು ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.
- ಇಲ್ಲಿ ಠೇವಣಿಗಳ ಮೂಲಕ ಮತ್ತು ಬೇಡಿಕೆ ಠೇವಣಿಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ.
- ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು. ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು.
- ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ.
- ಬ್ಯಾಂಕುಗಳು ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತದೆ.

**9. ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಿ.**

**ಉತ್ತರ : ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳು**

- ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.
- ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.
- ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು.
- ಪರಿಚಿತರ ಉಲ್ಲೇಖನವನ್ನು ಕೊಡುವುದು.
- ಬ್ಯಾಂಕ್ ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
- ಬ್ಯಾಂಕು ಅಧಿಕಾರಿಯ ಒಪ್ಪಿಗೆ ಪಡೆಯುವುದು.

PSG

➢ ಪ್ರಾರಂಭಿಕ ಠೇವಣಿಯನ್ನು ತುಂಬುವುದು.

**10. ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳಾವವು? (ಎಪ್ರಿಲ್ 2019)**

**ಅಥವಾ ಬ್ಯಾಂಕ್ ಖಾತೆ ಅನುಕೂಲಕರವಾದದ್ದು ಹೇಗೆ?**


**ಉತ್ತರ : ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳು.**

➢ ಹಣದ ಭದ್ರತೆ ಕಾಪಾಡುತ್ತದೆ.
➢ ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
➢ ಸಾಲ ಪಡೆಯಲು ಸಾಧ್ಯವಾಗುತ್ತದೆ.
➢ ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
➢ ಭದ್ರತಾ ಕಪಾಟುಗಳನ್ನು ಪಡೆಯಬಹುದು.
➢ ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.

# ಅಧ್ಯಾಯ 2.
# ಉದ್ಯಮಗಾರಿಕೆ

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಈ ಪದದಿಂದ ಬಂದಿದೆ. –**ಎಂಟ್ರ ಪ್ರೆಂಡೆ**
2. ಎಂಟ್ರ ಪ್ರೆಂಡೆ ಎಂದರೆ – **ಒಂದು ಚಟುವಟಿಕೆಯನ್ನು ಕೈಗೊಳ್ಳುವವ.**
2. **ಅಪೋಲೋ** ಆಸ್ಪತ್ರೆಯ ರೂವಾರಿಗಳು – **ಡಾ. ಪ್ರತಾಪರೆಡ್ಡಿ**
3. **ಜೆಟ್** ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು– **ನರೇಶ್ ಗೋಯಲ್**
4. ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗ – **ಜೆಟ್ ವಾಯುಮಾರ್ಗ**
5. **1999** ರಲ್ಲಿ ಭಾರತದಲ್ಲಿ ಇನ್ಫೋಸಿಸ್ ತಂತ್ರಜ್ಞಾನ ನಿಗಮವನ್ನು ಸ್ಥಾಪಿಸಿದವರು – **ನಾರಾಯಣಮೂರ್ತಿಯವರು**
6. **NASDAQ** ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ – **ಇನ್ಫೋಸಿಸ್**
7. **ಬಿಳಿಕ್ರಾಂತಿಯ ಪಿತಾಮಹ** ಎಂದು ಕರೆಯಲ್ಪಡುವವರು–**ವರ್ಗೀಸ್ ಕುರಿಯನ್**
8. **ವರ್ಗೀಸ್ ಕುರಿಯನ್**ರವರು ಗುಜರಾತ್ ರಾಜ್ಯದ ಕೈರಾ ಜಿಲ್ಲೆಯಲ್ಲಿ ___ ಹೈನುಗಾರಿಕೆ ಕೇಂದ್ರವನ್ನು ಆರಂಭಿಸಿದರು. – **ಆನಂದ್ ಹೈನುಗಾರಿಕೆ**
9. ಧೀರೂಬಾಯಿ ಅಂಬಾನಿಯವರು ___ ಎಂಬಲ್ಲಿ ವಾರಾಂತ್ಯದ ಭಜನೆಗಳ ಪುಸ್ತಕಗಳೊಂದಿಗೆ ಉದ್ಯಮ ಪ್ರಾರಂಭಿಸಿದರು. – **ಮೌಂಟ್‌ಗಿರ್‌ನಾರ್**
10. ರಿಲಯನ್ಸ್ ಸಂಸ್ಥೆಯನ್ನು ಹುಟ್ಟು ಹಾಕಿದವರು – ಧೀರೂಬಾಯಿ ಅಂಬಾನಿ



11. ಸಾಫ್ಟವೇರ್ ದಿಸೆಯಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆ – **ವಿಪ್ರೋ ತಂತ್ರಜ್ಞಾನ ಸಂಸ್ಥೆ**
12. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು – **ಅಜೀಮ್ ಪ್ರೇಮ್‌ಜಿ,**



13. ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರು – **ಏಕ್ತಾ ಕಪೂರ್,**
14. ಭಾರತದ ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ – **ಏಕ್ತಾಕಪೂರ್**
15. **2001** ರಲ್ಲಿ ಶ್ರೇಷ್ಠ ಉದ್ಯಮಿ ಪ್ರಶಸ್ತಿಯನ್ನು _______ ಗೆ ನೀಡಿ ಗೌರವಿಸಿದೆ. – **ಏಕ್ತಾಕಪೂರ್,**
16. **ಬಯೋಕಾನ್** ನಿಗಮದ ಅಧ್ಯಕ್ಷರು – **ಕಿರಣ್ ಮುಜುಮ್‌ದಾರ್ ಷಾ**
17. **ಕಿರಣ್ ಮುಜುಮ್‌ದಾರ್ ಷಾ**ರವರು ಜೀವ ವಿಜ್ಞಾನ ತಂತ್ರಜ್ಞಾನ ಸಂಸ್ಥೆ _____ ರಲ್ಲಿ ಪ್ರಾರಂಭಿಸಿದರು. – **ಕ್ರಿಶ 1978**

**ಪ್ರಶ್ನೆ 2] ಒಂದು ಅಂಕದ ಪ್ರಶ್ನೆಗಳು**

**1. ಉದ್ಯಮಿ ಎಂದರೇನು?**

ಉತ್ತರ : ಹೊಸ ಕಲ್ಪನೆ ಮತ್ತು ಆಡಳಿತ ನಿರ್ವಹಣೆಯ ಕೌಶಲ್ಯದಿಂದ ಉದ್ಯಮವನ್ನು ಯಶಸ್ವಿಯಾಗಿ ನಡೆಸುವವನನ್ನು ಉದ್ಯಮಿ ಎನ್ನುತ್ತೇವೆ.

**2. ಉದ್ಯಮಗಾರಿಕೆ ಎಂದರೇನು?**

ಉತ್ತರ : ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳನ್ನು ಉದ್ಯಮಗಾರಿಕೆ ಎನ್ನುತ್ತೇವೆ.

**3. ಬಿಳಿಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ? ಏಕೆ?**

ಉತ್ತರ : ವರ್ಗೀಸ್ ಕುರಿಯನ್‌ರವರನ್ನು ಬಿಳಿಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ. ಏಕೆಂದರೆ ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆಯ ಕಲ್ಪನೆಯೊಂದಿಗೆ ಹಾಲಿನ ಹೊಳೆ ಹರಿಸುವದರ ಮೂಲಕ ಬೇಸಾಯದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

**4. ಪ್ರಾಂತೀಯ ತಾರತಮ್ಯವನ್ನು ಹೋಗಲಾಡಿಸುವಲ್ಲಿ ಉದ್ಯಮಿಗಳ ಕೊಡುಗೆ ಏನು?**

ಉತ್ತರ : ಉದ್ಯಮಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವದರ ಮೂಲಕ ಪ್ರಾಂತೀಯ ತಾರತಮ್ಯಗಳನ್ನು ನಿವಾರಿಸುತ್ತಾರೆ.

**ಪ್ರಶ್ನೆ 3] ದೀರ್ಘ ಉತ್ತರದ ಪ್ರಶ್ನೆಗಳು**

**1. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು?**

**ಉತ್ತರ : ಉದ್ಯಮಗಾರಿಕೆಯ ಗುಣಲಕ್ಷಣಗಳು –**

➢ ಸೃಜನಾತ್ಮಕ,
➢ ಕ್ರಿಯಾತ್ಮಕ,
➢ ಗುಂಪು ಕಟ್ಟುವದು,
➢ ಸಮಸ್ಯೆಯ ಪರಿಹಾರ,
➢ ನಷ್ಟಭರಿತಕ್ಕೆ ಸಿದ್ಧ,
➢ ವಚನಬದ್ಧತೆ,
➢ ಹೊಸ ಪದ್ದತಿಯನ್ನು ರೂಢಿಸಿತರುವುದು,
➢ ನಾಯಕತ್ವ,
➢ ಪ್ರಚೋದನೆಯ ಸಾಧನೆ,
➢ ಗುರಿಮುಟ್ಟುವಿಕೆ,
➢ ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

**2. ಉದ್ಯಮಿಯ ಕಾರ್ಯಗಳು ಯಾವುವು? (ಎಪ್ರಿಲ್ 2019)**

**ಉತ್ತರ : ಉದ್ಯಮಿಯ ಕಾರ್ಯಗಳು**

➢ ಉದ್ಯಮಿಯು ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುತ್ತಾನೆ.
➢ ಉದ್ಯಮಿಯು ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ.
➢ ಉದ್ಯಮಗಾರನು ಉತ್ಪಾದಿಸಿದ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗ ಮುಂತಾದವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾನೆ.
➢ ಉದ್ಯಮಿಯು ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
➢ ಉದ್ಯಮಿಯು ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.
➢ ಉದ್ಯಮಿಯು ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತದೆ.
➢ ಉದ್ಯಮಿಯು ವ್ಯಾಪಾರದ ಮಾರ್ಗಗಳನ್ನು ತಿಳಿಸಿ ಅದು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ಮಾರ್ಗದರ್ಶನ ನೀಡುತ್ತಾನೆ.

**3. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?**

**ಉತ್ತರ : ಉದ್ಯಮಗಾರಿಕೆಯು ಒಂದು ಸಾಹಸ ಕಾರ್ಯವಾಗಿದೆ. ಹೇಗೆಂದರೆ**

➢ ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ.
➢ ಹೊಸತನವನ್ನು ಸೃಜಿಸುವ ಸೃಜನಾತ್ಮಕ ಚಟುವಟಿಕೆಯಾಗಿದೆ.
➢ ಒಂದು ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ.
➢ ಉದ್ಯಮಗಾರಿಕೆಯು ಅವಕಾಶಗಳನ್ನು ಅನ್ವೇಷಿಸಿ ಅಥವಾ ಹುಡುಕಿ, ನಷ್ಟಗಳನ್ನು ಲೆಕ್ಕಾಚಾರ ಹಾಕಿ ಅದರಿಂದ ಲಾಭಪಡೆಯಲು ಒಂದು ಸಾಹಸ ಕಾರ್ಯವನ್ನು ಸ್ಥಾಪಿಸುವದೇ ಆಗಿದೆ.

**4. ಉದ್ದಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ**

**ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು? ತಿಳಿಸಿ.**

**ಉತ್ತರ : ಉದ್ದಿಮೆಯ ಪ್ರಾಮುಖ್ಯತೆ ಅಥವಾ**

**ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರ.**

➢ ಉದ್ಯಮಿಗಳು ಜನರ ಅನುಪಯುಕ್ತ ಉಳಿತಾಯ ಗಳನ್ನು ಬಂಡವಾಳ ರೂಪದಲ್ಲಿ ಉಪಯೋಗಿಸುತ್ತಾರೆ.
➢ ಸ್ವಯಂ ಉದ್ಯೋಗಗಳನ್ನು ಪ್ರಾರಂಭಿಸುವದರ ಮೂಲಕ ಉದ್ಯಮಿಗಳು ಕುಶಲಕರ್ಮಿಗಳಿಗೆ, ತಾಂತ್ರಿಕ ಯೋಗ್ಯತೆ ಉಳ್ಳವರಿಗೆ & ಕಸುಬುದಾರರಿಗೆ ಅಧಿಕ ಪ್ರಮಾಣದ ಉದ್ಯೋಗಗಳನ್ನು ಒದಗಿಸುತ್ತಾರೆ.
➢ ಉದ್ಯಮಿಗಳು ಒಂದು ದೇಶದ ನಿವ್ವಳದೇಶಿಯ ಉತ್ಪನ್ನ ಮತ್ತು ಜನರ ತಲಾವರಮಾನ ಹೆಚ್ಚಿಸುತ್ತಾರೆ.
➢ ಉದ್ಯಮಿಗಳು ಉತ್ತಮ ವಸ್ತುಗಳನ್ನು ಕಡಿಮೆದರದಲ್ಲಿ ಜನರಿಗೆ ಒದಗಿಸಿ, ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಶ್ರಮಿಸುತ್ತಾರೆ.
➢ ಉದ್ಯಮಿಗಳು ಕೈಗಾರಿಕೆಗಳನ್ನು ಅಭಿವೃದ್ದಿಪಡಿಸುತ್ತಾರೆ.
➢ ಉದ್ಯಮಿಗಳು ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

**5. ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದುಕೊಳ್ಳಬಹುದಾದ ಸಂಸ್ಥೆಗಳು ಯಾವುವು? ಅಥವಾ**

**ಯಾರೇ ಒಬ್ಬ ಮನುಷ್ಯನಾಗಲಿ ಸ್ವ–ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಸಲಹೆ ಸೌಕರ್ಯಗಳಿಗೆಆರಿಸಿಕೊಳ್ಳಬೇಕಾದ ಸಂಸ್ಥೆಗಳು ಯಾವುವು?**

**ಉತ್ತರ : ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದು ಕೊಳ್ಳಬಹುದಾದ ಸಂಸ್ಥೆಗಳು.**

- ಜಾಹಿರಾತು ಸೇವಾ ಸಂಸ್ಥೆಗಳು,
- ಛಾಯಾಪ್ರತಿ ತೆಗೆಯುವ ಕೇಂದ್ರಗಳು,
- ಮಾರುಕಟ್ಟೆ ಸಲಹಾ ಸಂಸ್ಥೆ,
- ಅಂತರ್ಜಾಲ * ಸಂಹವನ ಅಂಗಡಿಗಳು
- ಕೈಗಾರಿಕಾ ಸಲಹಾ ಸಂಸ್ಥೆ,
- ಕ್ರೆಜ್ ಮತ್ತು ಬ್ಯೂಟಿ ಪಾರ್ಲರ್‌ಗಳು
- ವಸ್ತುಗಳನ್ನು ಬಾಡಿಗೆಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು,
- ಕೈಗಾರಿಕಾ ಸಂಶೋಧನೆ & ಅಭಿವೃದ್ಧಿ ಪ್ರಯೋಗಾಲಯಗಳು
- ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
- ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು

**6. ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು ಯಾವುವು?**

**ಉತ್ತರ : ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು.**

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕ್
- ಭಾರತೀಯ ಕೈಗಾರಿಕಾ ಹಣಕಾಸು ಬ್ಯಾಂಕು
- ಭಾರತೀಯ ವಾಣಿಜ್ಯ & ಇತರೆ ಬ್ಯಾಂಕುಗಳು
- ರಾಜ್ಯ ಹಣಕಾಸು ನಿಗಮ
- ಭಾರತೀಯ ಜೀವವಿಮಾ ನಿಗಮ
- ಯುನಿಟ್ ಟ್ರಸ್ಟ್ ಆಫ್ ಇಂಡಿಯಾ


**7. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು ಯಾವುವು?**

**ಉತ್ತರ : ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು.**

- ಜಿಲ್ಲಾ ಕೈಗಾರಿಕೆ ಕೇಂದ್ರಗಳು
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ಸಣ್ಣ ಪ್ರಮಾಣದ ಕೈಗಾರಿಕೆ ಸಂಸ್ಥೆ
- ಖಾದಿ & ಗ್ರಾಮೋದ್ಯೋಗ ಮಂಡಳಿ
- ತಾಂತ್ರಿಕ ಸಲಹಾ ಸಂಸ್ಥೆಗಳು


**<u>ಟಿಪ್ಪಣಿ ಬರೆಯಿರಿ.</u>**

**1. ಡಾ. ಪ್ರತಾಪರಡ್ಡಿ**




- ಇವರು ಭಾರತದಲ್ಲಿ ಆರೋಗ್ಯಕ್ಷೇತ್ರದಲ್ಲಿ ವೈದ್ಯಶಾಲೆಗಳ ಸಂಕೀರ್ಣವನ್ನು ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ.
- ಇವರು ಹುಟ್ಟುಹಾಕಿದ "ಅಪೋಲೋ" ವೈದ್ಯಶಾಲೆ ಗಳ ಗುಂಪು ಸುಮಾರು 750 ಆಧುನಿಕ ರೀತಿಯ ದವಖಾನೆಗಳನ್ನು ಹೊಂದಿವೆ.
- ಇವರ ವೈದ್ಯಕೀಯ ಕ್ಷೇತ್ರದ ಸಾಧನೆ ಭಾರತದ ಸಾಮಾನ್ಯ ಜನರಿಗೂ ದೊರಕುವಂತಹುದೇ ಆಗಿದೆ.

**2. ನರೇಶ್ ಗೋಯಲ್**




- ಇವರು ಜೆಟ್ ವಾಯುಮಾರ್ಗಗಳನ್ನು ಹುಟ್ಟು ಹಾಕಿದವರು & ಅದರ ಅಧ್ಯಕ್ಷರಾಗಿದ್ದಾರೆ.
- ಈ ವಾಯುಮಾರ್ಗವು ಭಾರತದ ಅತಿದೊಡ್ಡ ಆಂತರಿಕ ವಾಯುಮಾರ್ಗವಾಗಿದೆ.
- ಗೋಯಲ್‌ರವರು ಭಾರತ ಸರ್ಕಾರದ 1917 ರ ತೆರೆದ ಅಂತರಿಕ್ಷ ನೀತಿಯ ಸದವಕಾಶಗಳನ್ನು ಉಪಯೋಗಿಸಿಕೊಂಡು ಜೆಟ್ ವಾಯುಮಾರ್ಗವನ್ನು ಆಂತರಿಕ ಸಂಚಾರಕ್ಕಾಗಿ ಭಾರತದಲ್ಲಿ ನಿಶ್ಚಿತ ವೇಳೆಗಳಲ್ಲಿ ಓಡಾಡಲು ಪ್ರಾರಂಭಿಸಿದರು.

**3. ನಾರಾಯಣ ಮೂರ್ತಿ**



- ಇವರು 1999ರಲ್ಲಿ ಭಾರತದಲ್ಲಿ ಇನ್‌ಫೋಸಿಸ್ ತಂತ್ರಜ್ಞಾನ ನಿಗಮವನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದಾರೆ.
- NASDAQ ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನದ ಸಂಸ್ಥೆಯು ಇನ್‌ಫೋಸಿಸ್ ಆಗಿದೆ.
- 2006ರ ವೇಳೆಗೆ ಈ ಸಂಸ್ಥೆಯು 50000ಕ್ಕೂ ಮಿಗಿಲಾದ ಕೆಲಸಗಾರರನ್ನು ನೇಮಿಸಿಕೊಂಡು ಎರಡು ಬಿಲಿಯನ್ ಡಾಲರ್‌ಗಳಿಗಿಂತ ಮಿಗಿಲಾದ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ.
- ಮೂರ್ತಿಯವರ ಪ್ರಮಾಣಿಕತೆ, ಸತ್ಯಸಂದತೆ, ನೀತಿಪೂರ್ಣ ಸಮಗ್ರತೆಯಂತಹ ಅಂಶಗಳು ಅವರ ವಹಿವಾಟುಗಳ ಸಮಗ್ರ ಯಶಸ್ಸಿಗೆ ಕಾರಣಗಳಾಗಿವೆ.

**4. ವರ್ಗಿಸ್ ಕುರಿಯನ್**



- ಇವರನ್ನು ಬಿಳಿ ಕ್ರಾಂತಿಯ ಪಿತಾಮಹ ಎಂದು ಕರೆಯುತ್ತಾರೆ.
- ಅಮುಲ್ ಹಾಲು & ಹಾಲಿನ ಉತ್ಪನ್ನಗಳ ತಯಾರಿಕೆ ಇವರ ಸಾಧನೆಯಾಗಿದೆ.
- ಇವರು ದೇಶದಲ್ಲಿಯೇ ಅತ್ಯಂತ ದೊಡ್ಡದಾಗಿ ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

**5. ಏಕ್ತಾ ಕಪೂರ್**





- ಭಾರತದ ದೂರದರ್ಶನ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ"ಯೆಂದು ಹೆಸರು ಮಾಡಿದ್ದಾರೆ.
- ಇವರು ಬಾಲಾಜಿ ದೂರದರ್ಶನ ಚಿತ್ರಗಳನ್ನು ಹುಟ್ಟುಹಾಕಿದವರಾಗಿದ್ದು 2001ರಲ್ಲಿ ಇವರಿಗೆ ವರ್ಷದ ಶ್ರೇಷ್ಠ ಉದ್ಯಮಿಯ ಪ್ರಶಸ್ತಿಯನ್ನು ಸಂಸ್ಥೆ ನೀಡಿ ಗೌರವಿಸಿದೆ.
- ಇವರು ತಮ್ಮ 19ನೇ ವರ್ಷಕ್ಕೆ ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿಯಾದರು.


**6. ಕಿರಣ್ ಮುಜುಮ್‌ದಾರ್ ಷಾ**



- ಇವರು ಬಯೋಕಾನ್ ನಿಗಮದ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾಗಿದ್ದಾರೆ.
- ಈ ನಿಗಮವು ಭಾರತದಲ್ಲಿ ಜೀವವಿಜ್ಞಾನ ತಂತ್ರಜ್ಞಾನದ ಅತಿ ದೊಡ್ಡ ಸಂಸ್ಥೆಯಾಗಿದ್ದು 1978ರಲ್ಲಿ ಒಂದು ಸಣ್ಣ ಬಾಡಿಗೆಯ ಮೋಟಾರು ನಿಲ್ಲಿಸುವ ಜಾಗದಲ್ಲಿ ಪ್ರಾರಂಭವಾಯಿತು.
- ಪ್ರಾರಂಭದಲ್ಲಿ ಇವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದರೆ ಎಲ್ಲವನ್ನೂ ಎದುರಿಸಿ ಜೀವವಿಜ್ಞಾನ ತಂತ್ರಜ್ಞಾನವು ಯಶಸ್ಸನ್ನು ಪಡೆಯಲು ಸಾಧ್ಯಪಡಿಸಿದರು.


ಭಾರತ
ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆ
ಉತ್ತರ ಅಕ್ಷಾಂಶ 37° 6'
ಪೂರ್ವ ರೇಖಾಂಶ 97° 25'
ಪೂರ್ವ ರೇಖಾಂಶ 82° 30'
ರೇಖಾಂಶ 68° 7'
ಬಂಗಾಳ ಕೊಲ್ಲಿ
ಅರಬ್ಬಿ ಸಮುದ್ರ
ಹಿಂದೂ ಮಹಾಸಾಗರ
3214 ಕಿ.ಮೀ.
2933 ಕಿ.ಮೀ.
23° 30'
6° 45'


ಭಾರತ
ಪ್ರಾಕೃತಿಕ
ಬಂಗಾಳ ಕೊಲ್ಲಿ
ಅರಬ್ಬೀ ಸಮುದ್ರ
ಉತ್ತರದ ಪರ್ವತಗಳು
ಉತ್ತರದ ಮೈದಾನಗಳು
ಪರ್ಯಾಯ ಪ್ರಸ್ಥಭೂಮಿ
ಪೂರ್ವ ಮತ್ತು ಪಶ್ಚಿಮ ಘಟ್ಟಗಳು
ಕರಾವಳಿ ಮೈದಾನಗಳು


ಭಾರತದ
ವಿವಿಧೋದ್ದೇಶ ನದಿ
ಕಣಿವೆ ಯೋಜನೆಗಳು
ಬಂಗಾಳ ಕೊಲ್ಲಿ
ಅರಬ್ಬೀ ಸಮುದ್ರ
SCALE
Km 200 100 0 200 400 Km